

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಫೆಬ್ರವರಿ 11 ಶನಿವಾರ 2023

ಸಂಪುಟ: 43 | ಸಂಚಿಕೆ: 294 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4









15ನೇ ವಿಧಾನಸಭೆಯ ಕೊನೆ ಅಧಿವೇಶನ ಆರಂಭ

ಪ್ರಧಾನಿ ಮೋದಿಯವರ ಅಮೃತ ಕಾಲದ ಪ್ರಗತಿ ಪಥದಲ್ಲಿ ಕ್ರಮಿಸುವ ಘೋಷಣೆ

- ಜಂಟಿ ಸದನ ಉದ್ದೇಶಿಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭಾಷಣ
- ಬೊಮ್ಮಾಯಿ ಸರ್ಕಾರದ ಒಂದು ವರ್ಷದ ಸಾಧನೆ ವರದಿ ಮಂಡನೆ
- ರೈತರು, ಕಾರ್ಮಿಕರು, ಬಡವರು, ದುರ್ಬಲರು ಅವಕಾಶ ವಂಚಿತರ ಹಿತ ಕಾಯುವ ಕಾಯಕ
- ರಾಜಸ್ವ ಸಂಗ್ರಹಣೆಯಲ್ಲಿ ಶೇ.91ರಷ್ಟು ಗುರಿ ಸಾಧನೆ ಹೆಗ್ಗಳಿಕೆ
- 'ಭೂಮಿ' ಮೂಲಕ ಭೂ ಕಬಳಿಕೆಗೆ ಬ್ರೇಕ್; ರೈತರ ಹಿತ ಕಾಯಲು ವಿಶೇಷ ಆಸ್ಥೆ
- ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದ ಮೊದಲ ರಾಜ್ಯದ ಹೆಗ್ಗಳಿಕೆ

ಬೆಂಗಳೂರು, ಫೆ.10(ಕೆಎಂಶಿ)– ರಾಜ್ಯ ವಿಧಾನ ಸಭಾ ಚುನಾವಣಾ ಹೊಸ್ತಿಲಲ್ಲಿ ಭರವಸೆಗಳ ಹೊಳೆ ಹರಿಸಲು ಸಿದ್ಧತೆ ಮಾಡಿಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲರ ಭಾಷಣದಲ್ಲಿ ಕೇವಲ ತಮ್ಮ ಸರ್ಕಾರದ ಒಂದು ವರ್ಷದ ಸಾಧನೆಗಳನ್ನು ಬಿಂಬಿಸಲಷ್ಟೇ ಸೀಮಿತಗೊಳಿಸಿದ್ದಾರೆ.

ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನು ಸದನದ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟರೇ ಹೊರತು ಯಾವುದೇ ಭರವಸೆಗಳನ್ನು ನೀಡಲಿಲ್ಲ. ಆದರೆ ಅಭಿವೃದ್ಧಿಪಥದ ಮುಂಚೂಣಿಯ ರಾಜ್ಯವಾಗಿ ಕರ್ನಾಟಕ ದಾಪುಗಾಲು ಇಡುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿನ 25 ವರ್ಷಗಳ ಅಮೃತ ಕಾಲದಲ್ಲಿ ಹಾಕಿಕೊಟ್ಟ ಪ್ರಗತಿಯ ▶ 9ನೇ ಪುಟಕ್ಕೆ




ರಾಜ್ಯಪಾಲರದ್ದು ತೌಡು ಕುಟ್ಟುವ ಭಾಷಣ



ಬೆಂಗಳೂರು, ಫೆ.10– ರಾಜ್ಯಪಾಲರ ಭಾಷಣ ತೌಡು ಕುಟ್ಟಿದಂತೆ ಕಾಣಿಸುತ್ತಿದೆ. ಇದು ಬೂಸಾ ಅಥವಾ ತೌಡು ಕುಟ್ಟುವ ಭಾಷಣ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಶುಕ್ರವಾರ ನಡೆದ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್ ಮಾಡಿದ ಭಾಷಣಕ್ಕೆ ಪ್ರತಿಕ್ರಿಯಿಸಿರುವ ಅವರು, ಭತ್ತ ಕುಟ್ಟಿದರೆ ಅಕ್ಕಿ ಬರುತ್ತದೆ. ತೌಡು ಕುಟ್ಟಿದರೆ ▶ 9ನೇ ಪುಟಕ್ಕೆ

ಜಿ.ಎಲ್.ತ್ರಿಪುರಾಂತಕರ 'ಬೆರಗು'



'ಮೈಸೂರು ಮಿತ್ರ'ನ ಓದುಗರ ಮೆಚ್ಚಿನ ಅಂಕಣಕಾರರಾದ ಜಿ.ಎಲ್.ತ್ರಿಪುರಾಂತಕ ಅವರು ಅಲ್ಪ ವಿರಾಮದ ನಂತರ ಮತ್ತೆ ಮರಳಿದ್ದಾರೆ. ಇನ್ನು ಮುಂದೆ ಹೊಸ ಅಂಕಣ 'ಬೆರಗು' ಮೂಲಕ 'ಮಿತ್ರ'ನ ಓದುಗರ ಬೆರಗಾಗಿಸಲಿದ್ದಾರೆ. ಇವರ ಅಂಕಣ ಮೊದಲಿನಂತೆಯೇ ಪ್ರತೀ ಸೋಮವಾರ ಪ್ರಕಟವಾಗಲಿದೆ.

ಕಿರು ಪರಿಚಯ: ಪುಟ–4

ಮುಡಾ 188 ಬಿಡಿ ನಿವೇಶನಗಳ ಹಂಚಿಕೆಗೆ ವಿಶೇಷ ವರ್ಗಗಳಡಿ ಅರ್ಜಿ ಆಹ್ವಾನ

ನಾಳೆಯಿಂದ ಅರ್ಜಿ ಸ್ವೀಕಾರ; ಫೆಬ್ರವರಿ 28 ಕಡೇ ದಿನ



ಮೈಸೂರು, ಫೆ. 10(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ಹಂಚಿಕೆಯಾದ ನಿವೇಶನಗಳಲ್ಲಿ ಮಂಜೂರಾತಿದಾರರು ನಿಯಮ ಉಲ್ಲಂಘಿಸಿರುವ ನಿವೇಶನಗಳ ಹಂಚಿಕೆಯನ್ನು ಮುಡಾ ರದ್ದುಪಡಿಸಿದ್ದು, ಅದರ ಪೈಕಿ ಶೇ. 15ರಷ್ಟು ನಿವೇಶನಗಳನ್ನು 5 ವಿಶೇಷ ವರ್ಗಗಳಡಿ ಹಂಚಿಕೆ ಮಾಡಲು ಮುಡಾ ಅರ್ಜಿ ಆಹ್ವಾನಿಸಿದೆ.

ಈ ನಿವೇಶನಗಳನ್ನು ಬಿಡಿ ನಿವೇಶನಗಳೆಂದು ಪರಿಗಣಿಸಿದ್ದು, ಮೈಸೂರಿನ ದೇವನೂರು 3ನೇ ಹಂತದಲ್ಲಿ ▶ 10ನೇ ಪುಟಕ್ಕೆ

ಬೊಮ್ಮೇನಹಳ್ಳಿ–ಕರಕನಹಳ್ಳಿಯ ಸಾವಿರ ಎಕರೆಯಲ್ಲಿ ವಸತಿ ಬಡಾವಣೆ ನಿರ್ಮಾಣ

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಘೋಷಣೆ

ಮೈಸೂರು, ಫೆ10(ಆರ್‌ಕೆ)–ಮೈಸೂರು ತಾಲೂಕು, ಬೊಮ್ಮೇನಹಳ್ಳಿ ಮತ್ತು ಕರಕನಹಳ್ಳಿಯಲ್ಲಿ 50:50ರ ಅನುಪಾತದಲ್ಲಿ ಸಾವಿರ ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡುವ ಗುರಿ ಹೊಂದಲಾಗಿದೆ ಎಂದು ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಘೋಷಿಸಿದ್ದಾರೆ. ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಈ ಯೋಜನೆಗೆ ಈಗಾಗಲೇ 50:50ರ ಅನುಪಾತದಲ್ಲಿ 250 ಎಕರೆ ಜಮೀನು ನೀಡಲು 100ಕ್ಕೂ ಹೆಚ್ಚು ಮಂದಿ ರೈತರು ಮುಂದೆ ಬಂದಿದ್ದಾರೆ. ಎಕರೆಗೆ 30x40 ಅಡಿ ಅಳತೆಯ 18 ನಿವೇಶನಗಳಂತೆ 4 ಸಾವಿರ ನಿವೇಶನ ರಚಿಸಬಹುದಾಗಿದೆ. ಎಕರೆಗೆ 9 ನಿವೇಶನಗಳನ್ನು ರೈತರಿಗೆ ನೀಡಲಾಗುವುದು ಎಂದು ತಿಳಿಸಿದರು.

195 ಸಿಎ ನಿವೇಶನ ಹಂಚಿಕೆ: 2021ರ ಸೆಪ್ಟೆಂಬರ್‌ನಲ್ಲಿ 312 ಸಿಎ ನಿವೇಶನಗಳಿಗೆ ಅರ್ಜಿ ಕರೆಯಲಾಗಿದ್ದು, 220 ನಿವೇಶನ ಕೋರಿ ಅರ್ಜಿ ಬಂದಿದ್ದವು. ಫೆ.28ರಂದು ನಡೆಯುವ ಮುಡಾ ಸಭೆಯಲ್ಲಿ ಅನುಮೋದನೆ ಪಡೆದು ಹಂಚಿಕೆ ಮಾಡುತ್ತೇವೆ. ಉಳಿದ 92 ನಿವೇಶನಗಳಿಗೆ ಅರ್ಹ ಸಂಘ–ಸಂಸ್ಥೆಗಳಿಂದ ▶ 10ನೇ ಪುಟಕ್ಕೆ



ಫೆ.14, ಸವಿತಾ ಮಹರ್ಷಿ ಜಯಂತಿ

ಮೈಸೂರು, ಫೆ.10– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಫೆ.14 ರಂದು ಬೆಳಗ್ಗೆ 11.30ಕ್ಕೆ ಕರ್ನಾಟಕ ಕಲಾಮಂದಿರದ ಆವರಣದ ಕಿರುರಂಗ ಮಂದಿರಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ವಿಜಯನಗರ ಸುದರ್ಶನಾರಸಿಂಹ ಕ್ಷೇತ್ರದ ಪೀಠಾಧಿಪತಿಗಳಾದ ಶ್ರೀ ನಾಡೋಜ ಡಾ. ಭಾಷ್ಯಂ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಅಧ್ಯಕ್ಷತೆಯನ್ನು ಶಾಸಕ ಎಲ್. ನಾಗೇಂದ್ರ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್, ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಟ್, ಸಾ.ರಾ.ಮಹೇಶ್, ಮರಿತಿಬ್ಬೇಗೌಡ, ಜಿ.ಟಿ. ದೇವೇಗೌಡ, ಕೆ.ಮಹದೇವ್, ಎಸ್.ಎ. ರಾಮದಾಸ್, ಡಾ. ಯತೀಂದ್ರ .ಎಸ್, ಅನಿಲ್ ಕುಮಾರ್ ಸಿ, ಹರ್ಷವರ್ಧನ್, ಅಶ್ವಿನ್ ಕುಮಾರ್, ಹೆಚ್.ಪಿ.ಮಂಜುನಾಥ್, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟಿರಿಯಲ್ಸ್ ಸೈನ್ಸ್ ಅಂಡ್ ಇಟ್ಸ್ ರಿಸೆಂಟ್ ಅಪ್ಲಿಕೇಷನ್ಸ್ ಬಗ್ಗೆ ವಿಚಾರ ಸಂಕಿರಣ



ಮೈಸೂರು, ಫೆ. 10–ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕ ಭೌತಶಾಸ್ತ್ರ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗಗಳ ವತಿಯಿಂದ ಮೆಟಿರಿಯಲ್ಸ್ ಸೈನ್ಸ್ ಅಂಡ್ ಇಟ್ಸ್ ರಿಸೆಂಟ್ ಅಪ್ಲಿಕೇಷನ್ಸ್ ವಿಷಯ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಯಿತು.

ದಾವಣಗೆರೆ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಕೆ.ಎಂ.ಈಶ್ವರಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಸ್ತು ವಿಜ್ಞಾನ ವಿಷಯದ ಅಧ್ಯಯನದ ಮೇಲೆ ಸಂಶೋಧನೆಗಳು ಹೆಚ್ಚು ನಡೆಯಬೇಕು ಹಾಗೂ ಹೊಸ ವಸ್ತುಗಳ ಆವಿಷ್ಕಾರದಲ್ಲಿ ಪ್ರಸ್ತುತವಿರುವ ವಸ್ತುಗಳ ಮೂಲಭೂತ ಗುಣಲಕ್ಷಣಗಳು ಹೇಗೆ ಬದಲಾವಣೆ ಹೊಂದುತ್ತವೆ ಎಂಬುದನ್ನು ಅಧ್ಯಯನ ಮಾಡಬೇಕು. ಈ ತರಹದ ವಿಚಾರ ಸಂಕಿರಣಗಳು ವಿಧ್ಯಾರ್ಥಿಗಳಿಗೆ ವಸ್ತು ವಿಜ್ಞಾನ ನೈಜ ಪ್ರಪಂಚದ ಅನ್ವಯಗಳು ಬಳಕೆಯಾಗುವುದರ ಬಗ್ಗೆ ಅರಿವು ಮೂಡಿಸಲು ಸಹಕಾರಿ. ವಸ್ತು ವಿಜ್ಞಾನದಲ್ಲಿ ಉದಯೋನ್ಮುಖ ಅನ್ವಯಿಕೆಗಳು ನಡೆದಿವೆ ಎಂದರು.

ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, 21ನೇ ಶತಮಾನದಲ್ಲಿ ವಸ್ತು ವಿಜ್ಞಾನ ಮತ್ತು ತಂತ್ರಜ್ಞಾನವು ಬಹು ವೇಗವಾಗಿ ಹೊರಹೊಮ್ಮುತ್ತಿದೆ. ಆದ್ದರಿಂದ ಮೂಲ ವಸ್ತು ವಿಜ್ಞಾನದ ಪರಿಕಲ್ಪನೆಯೊಂದಿಗೆ ಇತ್ತೀಚಿನ ಬೆಳವಣಿಗೆಗಳ ವಿಕಾಸದ ಜ್ಞಾನ ಅವಶ್ಯಕವಾಗಿದೆ ಹಾಗೂ ಇದು ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ ಯೋಜನೆಗಳ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕುಮಾರಿ ರೇಖಾಶ್ರೀ ಪ್ರಾರ್ಥಿಸಿದರು, ಭೌತಶಾಸ್ತ್ರ ವಿಭಾಗದ ಅಧ್ಯಾಪಕ ಜಿ ಕಾರ್ತಿಕ್ ಸ್ವಾಗತಿಸಿದರು. ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿ ಬಿ.ಜಗದೀಶ್, ವಿಚಾರ ಸಂಕಿರಣದ ಉದ್ದೇಶ ಮತ್ತು ಗುರಿಗಳನ್ನು ವಿವರಿಸಿದರು. ಬಿ.ಎಸ್.ಪ್ರೀತಿ ವಂದಿಸಿದರು. ಭೌತಶಾಸ್ತ್ರ ವಿಭಾಗದ ಎಸ್.ಲಕ್ಷ್ಮಿ ನಿರೂಪಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ ಎಂ.ಪಿ.ವಿಜಯೇಂದ್ರ ಕುಮಾರ್ ಹಾಗೂ ಸಂಚಾಲಕ ಡಾ.ಎಲ್.ವಿನಯ್ ಕುಮಾರ್ ಮತ್ತು ಟಿ.ವಿ.ಲತಾ ಉಪಸ್ಥಿತರಿದ್ದರು.



ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಹರೀಶ್‌ಗೌಡರಿಗೆ ಟಿಕೆಟ್ ಸಿಗಲೆಂದು ಹರೀಶ್‌ಗೌಡ ಅಭಿಮಾನಿ ಬಳಗದ ವತಿಯಿಂದ ಚಾಮುಂಡಿ ಬೆಟ್ಟದಲ್ಲಿ ಹರೀಶ್‌ಗೌಡರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ 101 ತೆಂಗಿನ ಕಾಯಿ ಒಡೆಯುವ ಮೂಲಕ ಪ್ರಾರ್ಥನೆ ಸಲ್ಲಿಸಲಾಯಿತು. ಹರೀಶ್ ಗೌಡರ ಅಭಿಮಾನಿ ಬಳಗದ ಹರೀಶ್, ಗಿರೀಶ್, ದೀಪು ಗೌಡ, ರಾಜು ಗೌಡ, ಹೇಮಂತ್, ಗಂಗರಾಜ್, ಸುಹಾಸ್, ಚುಂಚೇಗೌಡ, ಮಹದೇವಣ್ಣ, ಯೋಗೇಶ್ ಪಡುವಾರಹಳ್ಳಿ, ಗಿರೀಶ್, ಗೌರಿಶಂಕರ ನಗರದ ಶಿವಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

ಫೆ.24ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಉಚಿತ ಸಾಮೂಹಿಕ ವಿವಾಹ

ಸುತ್ತೂರು, ಫೆ. 10–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿ ಜಗದ್ಗುರುಗಳ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುತ್ತಿರುವುದರ ಜೊತೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದಗಳೊಂದಿಗೆ ಪ್ರತಿ ತಿಂಗಳು ಸಾಮೂಹಿಕ ವಿವಾಹಗಳನ್ನು ನಡೆಸುತ್ತಿರುವ ಶ್ರೀಮಠವು ಜನಸಾಮಾನ್ಯರ ಕಲ್ಯಾಣ ಕಾರ್ಯಕ್ಕೆ ಮುಂದಾಗಿದೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಲಿರುವ ಸಾಮೂಹಿಕ ವಿವಾಹದಲ್ಲಿ ಹರಗುರು ಚರಮೂರ್ತಿಗಳು, ವಧುವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ಫೆ.24ರ ಶುಕ್ರವಾರ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ನಿಧನ



ರತ್ನಮ್ಮ

ಮೈಸೂರು, ಫೆ.10–ಮೈಸೂರು ನಗರದ ಚಾಮರಾಜ ಮೊಹಲ್ಲಾದ ಸೋನಾರ್ ಬೀದಿ ನಿವಾಸಿ ರತ್ನಮ್ಮ (74) ಇತ್ತೀಚೆಗೆ ನಿಧನರಾದರು. ಮೃತರು ಮೈಸೂರಿನ ಈಜು ತರಬೇತುದಾರ ವಿ. ಜಗದೀಶ್ ಅವರ ತಾಯಿಯಾಗಿದ್ದು, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ವಿ.ಶಿವಣ್ಣ



ಮೈಸೂರು, ಫೆ.10– ಹಿರಿಯ ಕಾಂಗ್ರೆಸ್ ಮುಖಂಡರು ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತರಾದ ನಾಗನಹಳ್ಳಿ ಗ್ರಾಮದ ನಿವಾಸಿ ಎನ್.ವಿ.ಶಿವಣ್ಣ (85) ಅವರು ಶುಕ್ರವಾರ ಮಧ್ಯಾಹ್ನ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಸೈಕ್ಲಿಂಗ್ ಮತ್ತು ಮ್ಯಾರಾಥಾನ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಉತ್ತಮ ಕ್ರೀಡಾಪಟುವಾಗಿದ್ದ ಶಿವಣ್ಣನವರು ಬಸ್ಸಿನಲ್ಲಿ ಪ್ರಯಾಣಿಸುವಾಗ ಸೊಂಟದ ಭಾಗಕ್ಕೆ ಪೆಟ್ಟು ಬಿದ್ದು ಅಸ್ವಸ್ಥರಾಗಿದ್ದರು. ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ದಿವಂಗತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಶನಿವಾರ (ಫೆ.11) ಮಧ್ಯಾಹ್ನ 1 ಗಂಟೆಗೆ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್‌ಐಇಯಲ್ಲಿ 'ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಷನ್ ರಂಗದಲ್ಲಿ ಹೊಸ ಬೆಳವಣಿಗೆಗಳು' ವಿಚಾರ ಸಂಕಿರಣಕ್ಕೆ ಚಾಲನೆ

ಇಸ್ರೋ ಸಹಯೋಗದಡಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವಾಣಿಜ್ಯೋದ್ಯಮ ಸಂಸ್ಥೆಗಳು ಸಣ್ಣ ಖಾಸಗಿ ಉಪಗ್ರಹ ನಿರ್ಮಿಸಿ ಬಾಹ್ಯಾಕಾಶಕ್ಕೆ ಕಳಿಸಬಹುದು

ಬೆಂಗಳೂರಿನ ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ಉಪನಿರ್ದೇಶಕ ಡಾ.ಡಿ.ವೆಂಕಟರಮಣ

ಮೈಸೂರು,ಫೆ.10(ಆರ್‌ಕೆಬಿ)– ಇಸ್ರೋ ಸಹಯೋಗದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವಾಣಿಜ್ಯೋದ್ಯಮ ಸಂಸ್ಥೆಗಳು ಸಣ್ಣ ಖಾಸಗಿ ಉಪಗ್ರಹ ನಿರ್ಮಿಸಿ, ಬಾಹ್ಯಾಕಾಶಕ್ಕೆ ಕಳಿಸಬಹುದಾಗಿದೆ. ಉಪಗ್ರಹ ಉಡ್ಡಯನ ಕೋಟ್ಯಾಂತರ ರೂ. ವೆಚ್ಚದ ದುಬಾರಿ ಕೆಲಸವಾಗಿರುವುದರಿಂದ ಖಾಸಗಿ ಕ್ಷೇತ್ರದವರು ಸಣ್ಣ ಪ್ರಮಾಣದ ಶುಲ್ಕ ಪಾವತಿಸಿ, ಸಣ್ಣ ಉಪಗ್ರಹಗಳನ್ನು ನಿರ್ಮಿಸಿ, ಬಾಹ್ಯಾಕಾಶಕ್ಕೆ ಕಳಿಸಬಹುದಾಗಿದೆ ಎಂದು ಬೆಂಗಳೂರಿನ ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ಉಪನಿರ್ದೇಶಕ ಡಾ.ಡಿ.ವೆಂಕಟರಮಣ ಇಂದಿಲ್ಲಿ ತಿಳಿಸಿದರು.

ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನ (ಎನ್‌ಐಇ) ರಾಧಾಕೃಷ್ಣ ಹಾಲ್‌ನಲ್ಲಿ ಶುಕ್ರವಾರ ಐಇಇಇ ಐಸಿಆರ್‌ಟಿಇಸಿ 2023ರ ಅಂತಾರಾಷ್ಟ್ರೀಯ 'ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ರಂಗದಲ್ಲಿ ಹೊಸ ಬೆಳವಣಿಗೆಗಳು' ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇಸ್ರೋ ಮಾರ್ಗದರ್ಶನದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳೇ ತಮ್ಮದೇ ಸಂಸ್ಥೆಯ ಹೆಸರಿನಲ್ಲಿ ಸಣ್ಣ ಉಪಗ್ರಹ ನಿರ್ಮಿಸಬಹುದು.



ಮೈಸೂರಿನ ಎನ್‌ಐಇಯಲ್ಲಿ ಶುಕ್ರವಾರ 2023ರ ಅಂತಾರಾಷ್ಟ್ರೀಯ 'ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ರಂಗದಲ್ಲಿ ಹೊಸ ಬೆಳವಣಿಗೆಗಳು' ವಿಚಾರ ಸಂಕಿರಣಕ್ಕೆ ಬೆಂಗಳೂರಿನ ಇಸ್ರೋ ಯು.ಆರ್.ರಾವ್ ಉಪಗ್ರಹ ಕೇಂದ್ರದ ಉಪನಿರ್ದೇಶಕ ಡಾ.ಡಿ.ವೆಂಕಟರಮಣ ಚಾಲನೆ ನೀಡಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಡಾ.ಎಸ್.ಪರಮೇಶ್ವರ, (ಮುಖ್ಯಸ್ಥ, ಇಸಿಇ ಎನ್‌ಐಇ), ಡಾ.ರೋಹಿಣಿ ನಾಗಪದ್ಮ (ಪ್ರಾಂಶುಪಾಲರು, ಎನ್‌ಐಇ,) ಡಾ.ಬಿ.ಡಿ.ಪರಮೇಶ್ವರಾಚಾರಿ (ಎಸ್‌ಎಸಿ–ಮುಖ್ಯಸ್ಥ ಐಇಇಇ, ಬೆಂಗಳೂರು ವಿಭಾಗ), ಡಾ.ಸುದರ್ಶನ ಪಾಟೀಲ್ ಕುಲಕರ್ಣಿ, ಮುಖ್ಯಸ್ಥ, ಐಇಇಇ– ಮೈಸೂರು ಉಪವಿಭಾಗ), ಡಾ.ನರಸಿಂಹ ಕೌಲಗುಡ್ (ಪ್ರೊಫೆಸರ್ ಎನ್‌ಐಇ, ಟೆಕ್ನಿಕಲ್ ಪ್ರೋಗ್ರಾಂ ಮುಖ್ಯಸ್ಥ– ಐಸಿಆರ್‌ಟಿಇಸಿ–2023), ಡಾ.ರಾಜಲಕ್ಷ್ಮಿ ಕಿಶೋರ್, ಅಸೋಸಿಯೇಟ್ ಪ್ರೊಫೆಸರ್, ಎನ್‌ಐಇ, ಪಬ್ಲಿಕೇಷನ್ ಮುಖಸ್ಥರು– ಐಸಿಆರ್‌ಟಿಇಸಿ–2023) ಅವರನ್ನು ಕಾಣಬಹುದು.

ಅದನ್ನು ಬಾಹ್ಯಾ ಕಾಶಕ್ಕೆ ಕಳಿಸಬಹುದು ಎಂದರು. ಉಪಗ್ರಹ ಉಡ್ಡಾಯನ ಕ್ಷೇತ್ರದಲ್ಲಿ ಇಸ್ರೋ(ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ) ವಿಶ್ವಮಟ್ಟದಲ್ಲಿ ವಾಣಿಜ್ಯ ಉದ್ದೇಶ ದೊಂದಿಗೆ ಮುಂದುವರಿದಿದೆ. ಸೌರ ಮಂಡಲದ ನಿರೀಕ್ಷಣೆಯ ಇಸ್ರೋದ 'ಆದಿತ್ಯ' ಉಪ ಗ್ರಹ ಯಶಸ್ವಿ ಹಂತದಲ್ಲಿದೆ. ಚಂದ್ರಮಂಡಲ ನಿರೀಕ್ಷಣೆಯ 'ಚಂದ್ರಯಾನ್' ಅಂದು ಕೊನೆ ಹಂತದಲ್ಲಿ ವಿಫಲವಾಗಿದ್ದರೂ ಚಂದ್ರಯಾನ್ 3ರವರೆಗೆ ಸಿದ್ಧತೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಇತ್ತೀಚೆಗೆ 101 ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ರವಾನೆ ಮಾಡಿರುವ ಇಸ್ರೋ, ಉಪಕರಣಗಳ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಗೆ ಹೆಸರಾಗಿದೆ. ಹೀಗಾಗಿ ಹೊರರಾಷ್ಟ್ರಗಳ ಕೆಲವು ಉಪಗ್ರಹಗಳನ್ನು ಇಸ್ರೋದ ಲಾಜಿಂಗ್ ವಾಹನಗಳು ಕೊಂಡೊಯ್ದು ಕಕ್ಷೆಗೆ ಸೇರಿಸುತ್ತವೆ ಎಂದರು.

ಇಸ್ರೋದಲ್ಲಿ ಮೆಕ್ಯಾನಿಕಲ್, ಕೆಮಿಕಲ್ ಸೇರಿದಂತೆ ಇನ್ನಿತರೆ ಕಲಿಕೆಗಳಿಗೂ ಇಲ್ಲಿ ಕೆಲಸದ ಅವಕಾಶಗಳಿವೆ. ಆದರೆ ಇಲ್ಲಿ ಕಲಿತದ್ದನ್ನು ವಿದೇಶಕ್ಕೆ ಹೋಗಿ ತಮ್ಮ ಪ್ರತಿಭೆ ಪ್ರದರ್ಶಿಸದೇ ನಮ್ಮ ದೇಶಕ್ಕಾಗಿಯೇ ಶ್ರಮಿಸಬೇಕು ಎಂದು ಯುವ ವಿಜ್ಞಾನಿಗಳಿಗೆ ಸಲಹೆ ನೀಡಿದರು.

ಎನ್‌ಐಇ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ಪಿಇಎಸ್ ವಿಶ್ವ ವಿದ್ಯಾನಿಲಯದ ಪ್ರೊ.ಸಂಜೀವ್ ಗುರುಗೋಪಿನಾಥ್, ಐಐಟಿ ದೆಹಲಿಯ ಡಾ.ಸುಮಂತ್ರ ದತ್ತ ರಾಯ್ ಮುಖ್ಯ ಭಾಷಣ ಮಾಡಿದರು.ಇಸಿಇ–ಎನ್‌ಐಇ ಮುಖಸ್ಥ ಡಾ. ಎಸ್.ಪರಮೇಶ್ವರ, ಎನ್‌ಐಇ ಪ್ರಾಂಶುಪಾಲರಾದ ಡಾ.ರೋಹಿಣಿ ನಾಗಪದ್ಮ ಇನ್ನಿತರರು ಉಪಸ್ಥಿತರಿದ್ದರು.

ಜನತಾ ಜಲಧಾರೆ, ಪಂಚರತ್ನ ಯಾತ್ರೆ ಮತದಾರರಿಗೆ ಮನವರಿಕೆ ಮಾಡಿಕೊಡುವ ಅನಿವಾರ್ಯತೆ

ಜೆಡಿಎಸ್ ಕಾರ್ಯಕರ್ತರಿಗೆ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಕಿವಿಮಾತು

ಮೈಸೂರು, ಫೆ.10(ಎಸ್‌ಪಿಎನ್)– ಜನತಾ 'ಜಲಧಾರೆ' ಮತ್ತು 'ಪಂಚರತ್ನ' ಕಾರ್ಯಕ್ರಮಗಳ ಪ್ರಯೋಜನ ಕುರಿತು ವಾರ್ಡ್ ಮಟ್ಟದ ಮತದಾರರಿಗೆ ತಲುಪಿಸುವುದು ನಮ್ಮ–ನಿಮ್ಮೆಲ್ಲರ ಹೊಣೆ ಎಂದು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಅಭಿಪ್ರಾಯಪಟ್ಟರು.

ಮೈಸೂರು ಲಕ್ಷ್ಮೀಕಾಂತನಗರದಲ್ಲಿರುವ ಲಕ್ಷ್ಮೀಕಾಂತ ನಗರ ಸಮುದಾಯ ಭವನದಲ್ಲಿ ಜೆಡಿಎಸ್ ಚಾಮರಾಜ ವಿಧಾನ ಸಭಾ ಘಟಕದ ವತಿಯಿಂದ ಆಯೋಜಿಸಿದ್ದ ವಾರ್ಡ್ ಮಟ್ಟದ ಕಾರ್ಯಕರ್ತರ ಚುನಾವಣಾ ಯೋಜನೆ ಸಭೆಯಲ್ಲಿ ಅವರು ಮಾತನಾಡಿದರು.



2023ರ ವಿಧಾನ ಸಭಾ ಚುನಾವಣೆಯಲ್ಲಿ ಹೆಚ್‌ಡಿಕೆ ನೇತೃತ್ವದ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ, ಚಾಮರಾಜ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಜಯ ಗಳಿಸಬೇಕು. ಈಗಾಗಲೇ 'ಪಂಚರತ್ನ' ಕಾರ್ಯಕ್ರಮ ದಲ್ಲೊಂದಾದ ಶಿಕ್ಷಣದ ಮಹತ್ವವನ್ನು ತಿಳಿದುಕೊಂಡು ನಂತರ ಮತದಾರರಿಗೆ ತಿಳಿಸಬೇಕು. ಈಗಿನ ಬಿಜೆಪಿ ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡದಿರುವ ಕಾರಣ ರೈತರು ಮತ್ತು ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಸಿಗದೇ ಅನ್ಯಾಯವಾಗುತ್ತಿರುವ ಅಂಶವನ್ನು ತಿಳಿಸಬೇಕು ಎಂದರು.


ಇದಕ್ಕಾಗಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಅಧಿಕಾರಕ್ಕೆ ಬಂದರೆ, ಗುಣಮಟ್ಟದ ಶಿಕ್ಷಣ ಒದಗಿಸುವ ಕುರಿತು ಹಾಗೂ ಆರೋಗ್ಯ ಮತ್ತು ಕೃಷಿಗೆ ಹೆಚ್ಚಿನ ಆದ್ಯತೆ ನೀಡುವ ಬಗ್ಗೆ ಪಂಚರತ್ನ' ಯೋಜನೆಯ ಭಾಗವಾಗಿದ್ದು, ಈ ಅಂಶವನ್ನು ಮತದಾರರಿಗೆ ತಿಳಿಸಿ, ಜೆಡಿಎಸ್ ಪಕ್ಷಕ್ಕೆ ಮತ ಹಾಕುವಂತೆ ಮನವೊಲಿಸಬೇಕು ಎಂದು ತಿಳಿಸಿದರು.

ಅಲ್ಲದೆ, ನೆಲ–ಜಲ–ಗಡಿ ವಿಚಾರದಲ್ಲಿ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಅತ್ಯವಶ್ಯಕ ಹಾಗಾಗಿ ಲಕ್ಷ್ಮೀಕಾಂತ ನಗರ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಪ್ರತಿ ಮನೆ ಮನೆಗೆ ಭೇಟಿ ನೀಡಿ, ಹೆಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಲು ಸಹಕರಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಜೆಡಿಎಸ್ ನಗರಾಧ್ಯಕ್ಷ ಕೆ.ಟಿಚಲುವೇಗೌಡ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ನಗರ ಪಾಲಿಕೆ ಸದಸ್ಯರಾದ ಲಕ್ಷ್ಮಿಶಿವಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ಹೆಚ್.ಕೆ.ರಮೇಶ್, ಹೆಚ್.ಸಿ.ಮೋಹನ್, ದಕ್ಷಿಣಾಮೂರ್ತಿ, ಶಂಕರಣ್ಣ, ಮಲ್ಲಿಕಾರ್ಜುನ, ಮಹಿಳಾ ಮುಖಂಡರಾದ ಹೇಮಾವತಿ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು. ನೂರಾರು ವಿವಿಧ ಸಮುದಾಯ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ಮೈಸೂರು, ಫೆ.10– ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ನೀರಾವರಿ ಯೋಜನೆಯಡಿ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸ ಲಾಗಿದೆ. ಫೆ.3 ರಿಂದ ಅರ್ಜಿಯನ್ನು ಸೇವಾ ಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದ್ದು, ಮಾರ್ಚ್ 3 ಅರ್ಜಿ ಸಲ್ಲಿಸಲು ಕಡೆಯ ದಿನವಾಗಿರುತ್ತದೆ. ನಿಗಮದ https://www.kmmd.karnataka.gov.in ವೆಬ್‌ಸೈಟ್ ಅಥವಾ ನಿಗಮದ ದೂ.ಸಂ: 0821–2341194, 8050773004/5, 8050370006, 7090400100, 7090400900 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.2.2023 ಶನಿವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ದಾ. ಶ್ರೀರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ– ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು, 8.30 ವಿಶಿಷ್ಠ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಮಮತೆಯ ಮಡಿಲಿನ ಮಂಡ್ಯದ ಕೆ.ಪಿ. ಅರುಣ್ ಕುಮಾರಿ ಹಾಗೂ ಯೋಗೀಶ್ ಎಂ. ಅವರೊಂದಿಗೆ ಸಂವಾದ. ನಡೆಸಿಕೊಡುವವರು ದಿವಾಕರ ಹೆಗಡೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದಸಂಗೀತ–ಶಂಕರೇಗೌಡ ಮತ್ತು ತಂಡ, 1.20 ಭಾವಗೀತೆ– ಡಾ.ಎ.ಡಿ. ಶ್ರೀನಿವಾಸನ್, 3.30ಮಕ್ಕಳ ಮಂಟಪ– ಮುಖಾಮುಖಿ, ಸುಗಮ ಸಂಗೀತ ಕಲಿಕೆ ಬಗ್ಗೆ ತಿಳಿಸಿಕೊಡುತ್ತಾರೆ, ಮಮತಾ ರವೀಂದ್ರ, ಭಾಗವಹಿಸುವ ಮಕ್ಕಳು– ಹಿರಣ್ಮಯಿ ಹಾಗೂ ಸಹನಾ, 4.00ನೆನಪಿನಂಗಳ–ಹಿರಿಯ ಸಂಗೀತ ವಿದ್ವಾಂಸರು ಹಾಗೂ ವಯೋಲಿನ್ ವಾದಕರಾದ ಎ.ಎಸ್. ಶಿವರುದ್ರಪ್ಪ ಅವರೊಂದಿಗೆ ಎಂ. ಚಲುವರಾಯಸ್ವಾಮಿ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ರಾಜೇಶ್ ಮಿಶ್ರ ಮತ್ತು ಗೀತೇಶ್ ಮಿಶ್ರ– ಯುಗಳ ಗಾಯನ

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ:** ಶ್ರವಣ ತಪಾಸಣಾ ಶಿಬಿರ, ಸ್ಥಳ: ಭಾನವಿ ಆಸ್ಪತ್ರೆ, ಬೆಳಗ್ಗೆ 8ರಿಂದ.
■ **ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್:** ಜಿಲ್ಲಾ ಸಮ್ಮೇಳನ, ಸ್ಥಳ: ಮಹಾರಾಜ ಶತಮಾನೋತ್ಸವ ಭವನ, ಬೆಳಗ್ಗೆ 9ಕ್ಕೆ.
■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು, ಸೊಂಟ, ಭುಜ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.
■ **ಕರ್ನಾಟಕ ರಾಜ್ಯ ಅನುದಾನಿತ ಐಟಿಐಗಳ ನೌಕರರ ಸಂಘ :** ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಮರಿತಿಬ್ಬೇಗೌಡ, ಉದ್ಘಾಟನೆ : ಶಾಸಕ ಡಾ. ಯತೀಂದ್ರ, ಅಭಿನಂದಿತರು : ಸಂಘದ ಅಧ್ಯಕ್ಷ ಎಸ್.ಆರ್. ರವಿ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ.
■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಅಪ್ಲಿಕೇಷನ್ಸ್ ಆಫ್ ಅಲ್‌ಜೆಬ್ರಾ ಅಂಡ್ ಅನಾಲಿಸಿಸ್ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿಗಳು : ಬೆಂಗಳೂರು ವಿವಿ ಡಾ. ಬಿ. ಚೆಲುವರಾಜು, ಪ್ರಿನ್ಸಿಪಾಲ್ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಪ್ರೊ. ಎಸ್. ಲಿಂಗಣ್ಣ, ಸ್ಥಳ:ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.
■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಿಜಿ ವಿದ್ಯಾರ್ಥಿಗಳ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ನಿವೃತ್ತ ಇಂಡಿಯನ್ ಆರ್ಮಿಯ ಲೆಫ್ಟಿನೆಂಟ್ ಕರ್ನಲ್ ಬಿ.ಎಸ್. ಸತೀಶ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ
■ **ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್:** ಮಾಸಿಕ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಪಾರ್ಥಸಾರಥಿ, ಉಪಸ್ಥಿತರು: ಪ್ರಧಾನ ಕಾರ್ಯದರ್ಶಿ ಆರ್.ಬಸವರಾಜು, ಸ್ಥಳ: ಸಂಘದ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 10.30ಕ್ಕೆ
■ **ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು :** ಇಲ್ಯುಮಿನೇಟ್ ಕಾರ್ಯಕ್ರಮ, ಭಾಷಣಕಾರರು :ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಮೈಲ್‌ಸ್ವಾಮಿ ಅಣ್ಣಾದೊರೈ, ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಆವಿಷ್ಕಾರಕ ಸುಧಾಂಶು ಮಣಿ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ, ಬೆಳಗ್ಗೆ 10.30 ರಿಂದ.
■ **ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ :** ಗೆಡ್ಡೆ ಗೆಣಸು ಮೇಳ, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಕ್ಯಾಲೆಂಡರ್ ಬಿಡುಗಡೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವೈ. ಹಲಸೆ, ಅಧ್ಯಕ್ಷತೆ : ಬರಹಗಾರ್ತಿ ರತ್ನಾರಾಜಯ್ಯ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10.30ಕ್ಕೆ.
■ **ಮೈಸೂರು ಅಕ್ಯೂಪಂಚರ್ ಅಸೋಸಿಯೇಷನ್ ಮತ್ತು ಓರಿಂಓಲಸ್ ಯೋಗಾಸಂಸ್ಥೆ :** ಉಚಿತ ಅಕ್ಯೂಪಂಚರ್ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ, ಸ್ಥಳ: ಅಕ್ಯೂಪಂಚರ್ ಅಸೋಸಿಯೇಷನ್, ಬೆಳಗ್ಗೆ 11 ರಿಂದ.
■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ, ತಿಂಗಳ ಸಾಧಕರು ಪ್ರಚಾರ ಬಯಸದ ಸಾಧಕಿ ಎಂ.ಎ. ನೀಲಾಂಬಿಕಾ, ಮುಖ್ಯ ಅತಿಥಿಗಳು : ಯುವರಾಜ ಕಾಲೇಜು ಸಹ ಪ್ರಾಧ್ಯಾಪಕರಾದ ಡಾ. ಎಂ.ಪಿ. ರೇಖಾ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.
■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ರಿಂದ.
■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಸಂಜೆ 6 ರಿಂದ ವಿದುಷಿ ರೇವತಿ ಕಾಮತ್ ಅವರಿಂದ ವೀಣಾವಾದನ, ವಿದ್ವಾನ್ ತಾಂಡವಮೂರ್ತಿ–ಪಿಟೀಲು, ವಿದ್ವಾನ್ ಎಂ.ಆರ್. ಮಂಜುನಾಥ್–ಮೃದಂಗ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.
■ **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಫಿಜಿಯೋಥೆರಪಿ ಕಾಲೇಜು :** ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಬರಡನಪುರ ಶ್ರೀ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿ ಸ್ವಾಮಿಗಳು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಕವಿತಾರಾಜ, ಮುಖ್ಯ ಅತಿಥಿಗಳು : ಜಯಪುರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವಣ್ಣ, ಉಪಸ್ಥಿತರು : ಕಾಲೇಜು ಉಪ ಪ್ರಾಂಶುಪಾಲರಾದ ಡಾ. ಎಂ. ರೇಣುಕಾದೇವಿ, ಜ್ಯೋತಿಷಿ ಗಣೇಶ ಮೂರ್ತಿ, ಜಗದೀಶ್, ಸ್ಥಳ: ಶ್ರೀ ಮಹಾಂತೇಶ್ವರ ಮಠ, ಬರಡನಪುರ, ಮಧ್ಯಾಹ್ನ 2ಕ್ಕೆ.
■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮೈಸೂರು, ಹೆಚ್.ವಿ. ರಾಜೀವ್ ಸ್ನೇಹ ಬಳಗ, ಹೊಯ್ಸಳ ಕರ್ನಾಟಕ ಸಂಘ, ಮೈಸೂರು ಶಿಕ್ಷಣ ಸಂಸ್ಥೆಗಳು :** ಪದ್ಮ ಪುರಸ್ಕೃತರಿಗೆ ವಂದನೆ ಅಭಿನಂದನೆ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯ ಭಾಷಣಕಾರರು : ಕುವೆಂಪು ಭಾಷಾ ಭಾರತಿ ವಿಶ್ರಾಂತ ಮುಖ್ಯಸ್ಥ ಡಾ. ಪ್ರಧಾನ್ ಗುರುದತ್ತ, ಅಭಿನಂದಿತರು : ಸಾಹಿತಿ ಡಾ. ಎಸ್.ಎಲ್. ಭೈರಪ್ಪ, ಸಿರಿಧಾನ್ಯ ಆಹಾರ ಪಿತಾಮಹ ಡಾ. ಖಾದರ್ ವಲ್ಲಿ ಡುದೇಕುಲಾ, ಪುರಾತತ್ವ ಇಲಾಖೆ ನಿವೃತ್ತ ಅಧೀಕ್ಷಕ ಡಾ. ಎಸ್. ಸುಬ್ಬರಾಮನ್, ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಪಾದಕ ವಿದುಷಿ ಜಯಲಕ್ಷ್ಮಿ, ಅಭಿನಂದಿತರ ಕುರಿತು : ಪುರಾತತ್ವ ಇತಿಹಾಸ ಸಂಶೋಧಕ ಡಾ. ಹೆಚ್.ವಿ. ನಾಗರಾಜರಾವ್, ಪ್ರಾಚೀನ ಇತಿಹಾಸ ತಜ್ಞ ಡಾ. ರೋಹಿತ್ ಈಶ್ವರ್, ಸಿರಿಧಾನ್ಯ ನೈಸರ್ಗಿಕ ಕೃಷಿಕ ಹೊನ್ನೂರು ಪ್ರಕಾಶ್, ಸ್ಥಳ: ಕಲಾಮಂದಿರ, ಸಂಜೆ 5ಕ್ಕೆ
■ **ಗಾನಭಾರತೀ :** ಗಾನಭಾರತಿ ಸಂಗೀತ ಮತ್ತು ನೃತ್ಯಶಾಲೆ ದಿನಾಚರಣೆ, ಸ್ಥಳ: ವೀಣೇಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಬಿ.ವಿ. ಶ್ರೀಹರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ವಿ. ವರ್ಚಸ್ –ಮೃದಂಗ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6ಕ್ಕೆ.
■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ
■ **ಕಲಾಸುರುಚಿ ಮತ್ತು ಕುತೂಹಲಿ ಸಂಸ್ಥೆ :** ಸೈನ್ಸ್ ಸಂಜೆ ಕಾರ್ಯಕ್ರಮದ ಅಂಗವಾಗಿ ಮಂಗಳಯಾನದ ನಿರ್ವಹಣೆಯಲ್ಲಿ ಇದ್ದ ಸವಾಲುಗಳು ಕುರಿತು ಕಾರ್ಯಕ್ರಮ, ಭಾಷಣ : ಇಸ್ರೋ ಮಂಗಳಯಾನದ ಆಪರೇಶನ್ ಮ್ಯಾನೇಜರ್, ವಿಜ್ಞಾನಿ ಎಂ.ವಿ. ರೂಪಾ, ಸ್ಥಳ : ಕಲಾ ಸುರುಚಿ ರಂಗಮನೆ, ಸಂಜೆ 6.30 ರಿಂದ.
■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ರಾಮಕೃಷ್ಣನಗರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಪ್ರತಿದಿನ ಸಂಜೆ 6.30 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 7 ರಿಂದ ಬಿ.ಕೆ. ವಾಣಿ ಅವರಿಂದ ಈಶ್ವರೀಯ ವಿಶ್ವವಿದ್ಯಾಲಯವು ನಡೆದು ಬಂದ ದಾರಿ ಕುರಿತು ಉಪನ್ಯಾಸ, ಸ್ಥಳ: ಖಾಲಿ ನಿವೇಶನ, ಸುಮಿತ್ರ ಸ್ಟೀಲ್ ಎದುರು, ಚದುರಂಗ ರಸ್ತೆ, ರಾಮಕೃಷ್ಣನಗರ, ಐ ಬ್ಲಾಕ್.
■ **ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು :** ವಜ್ರ ಮಹೋತ್ಸವ ಕಾರ್ಯಕ್ರಮ, ಉದ್ಘಾಟನೆ: ಜಮ್ಮು ಮತ್ತು ಕಾಶ್ಮೀರ ರಾಜ್ಯಪಾಲ ಮನೋಜ್ ಸಿನ್ಹಾ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ, ಸ್ಥಳ: ಕಾಲೇಜು ಆವರಣ, ಸಂಜೆ 6.30ಕ್ಕೆ.

ಭವಾನಿ ರೇವಣ್ಣ ಈ ಚುನಾವಣೆಯಲ್ಲಿ ಅನಿವಾರ್ಯವಲ್ಲ

ಟಿಕೆಟ್ ಗೊಂದಲವನ್ನು ಚರ್ಚೆ ಮಾಡಿ ಬಗೆಹರಿಸಿಕೊಳ್ಳುತ್ತೇವೆ: ಹೆಚ್.ಡಿ.ಕುಮಾರಸ್ವಾಮಿ

ಬೆಳಗಾವಿ, ಫೆ.10–ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ಹಂಚಿಕೆ ಕುರಿತು ಮಾಜಿ ಮುಖ್ಯಮಂತ್ರಿ, ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿಕೆ ನೀಡಿದ್ದಾರೆ. ಇಂದು ಜೆಡಿಎಸ್‌ನ ಪಂಚರತ್ನ ಯಾತ್ರೆಯ ಮಧ್ಯೆ ಕುಮಾರಸ್ವಾಮಿ ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು. ಈ ಸಂದರ್ಭದಲ್ಲಿ ಹಾಸನ ಮತ್ತು ಹೊಳೆನರಸೀಪುರ ಕ್ಷೇತ್ರದ ಟಿಕೆಟ್ ಹಂಚಿಕೆಗೆ ಸಂಬಂಧಪಟ್ಟಂತೆ ಪತ್ರಕರ್ತರಿಂದ ಕುಮಾರಸ್ವಾಮಿಯವರಿಗೆ ಪ್ರಶ್ನೆ ಕೇಳಿಬಂತು.

ಅದಕ್ಕೆ ಉತ್ತರಿಸಿದ ಹೆಚ್‌ಡಿಕೆ, ಅದಕ್ಕೆ ತಲೆಕೆಡಿಸಿಕೊಳ್ಳುವ ಅವಶ್ಯಕತೆಯಿಲ್ಲ, ಚುನಾವಣೆಯಲ್ಲಿ ಗೆಲ್ಲಲು ತೀರ್ಮಾನ ಮಾಡುತ್ತೇವೆ, ಅದರಲ್ಲಿ ಯಾವುದೇ ಗೊಂದಲ ಇರುವುದಿಲ್ಲ. ಭವಾನಿ ರೇವಣ್ಣ ಅವರು ಈ ಚುನಾವಣೆಯಲ್ಲಿ ಅನಿವಾರ್ಯವಲ್ಲ ಎಂದು ಹಿಂದೆ ಹೇಳಿದ್ದೆ, ಅದನ್ನು ಇವತ್ತು ಕೂಡ ಸ್ಪಷ್ಟವಾಗಿ ಹೇಳುತ್ತೇನೆ. ಅದರಲ್ಲಿ ಯಾವ ಗೊಂದಲ ಬೇಕಾಗಿಲ್ಲ, ನಾವು ನಾಯಕರು ಕುಳಿತು ಹಾಸನ ಮತ್ತು ಹೊಳೆನರಸೀಪುರ ಕ್ಷೇತ್ರದ ಬಗ್ಗೆ ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ನಡೆಸಿ ತೀರ್ಮಾನ



ಮಾಡುತ್ತೇವೆ. ಜನತಾದಳ ನಾಯಕರನ್ನು ಸೃಷ್ಟಿ ಮಾಡುವ ಕಾರ್ಖಾನೆ. ಈ ಕಾರ್ಖಾನೆಯಲ್ಲಿ ಬಹಳಷ್ಟು ಜನ ನಾಯಕರಾಗಿ ಬೆಳೆದು ಪಕ್ಷ ಬಿಟ್ಟು ಹೋದರು. ಈಗ ನಮ್ಮನ್ನು ಟೀಕೆ ಮಾಡುತ್ತಾರೆ. ಬೈಯುತ್ತಾರೆ, ನಾವು ಬೆಳೆಸುತ್ತೇವೆ, ಮಾರುಕಟ್ಟೆಗೆ ದಾರಿ ತೋರಿಸುತ್ತೇವೆ, ಮಾರುಕಟ್ಟೆ ಸಿಕ್ಕಿದಾಕ್ಷಣ ಅವರು ಬಿಟ್ಟು ಹೋಗಿ ಎಲ್ಲೆಲ್ಲಿ ಮಾರುಕಟ್ಟೆ ಇದೆಯೋ ಅಲ್ಲಿ ವ್ಯಾಪಾರ ಮಾಡಿಕೊಳ್ಳುತ್ತಾರೆ.

30–40 ಅಭ್ಯರ್ಥಿಗಳ ಕೊರತೆಯಿದೆ: ರಾಜ್ಯದಲ್ಲಿ ಈ ಬಾರಿ ಚುನಾವಣೆಯಲ್ಲಿ 120 ಸೀಟು ಗೆಲ್ಲುವುದು ನಮ್ಮ ಗುರಿ, 30–40 ಕ್ಷೇತ್ರಗಳಲ್ಲಿ ನಮ್ಮಲ್ಲಿ ಅಭ್ಯರ್ಥಿ ಇಲ್ಲ ಅನ್ನುವುದು ಸತ್ಯ ವಿಚಾರ. ಆ ಸಮಸ್ಯೆಯನ್ನು ತುಂಬುವಂತಹ, ಜನರ ವಿಶ್ವಾಸ ಗಳಿಸಿ ಕೆಲಸ ಮಾಡುವ ವ್ಯಕ್ತಿಗಳು ಹೊಸ ಮುಖಗಳಿಗೆ ಬೆಂಬಲ ಕೊಡಲು ತಯಾರಾಗಿದ್ದೇನೆ ಎಂದರು. ರಾಜ್ಯದ 65 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದೇನೆ. ನಾಳೆ ರಾಯಭಾಗ, ಕುಡಚಿ ಸಭೆ ಬಳಿಕ ಅರಸೀಕೆರೆಗೆ ಹೋಗುತ್ತೇನೆ. ಅರಸೀಕೆರೆ ಜೆಡಿಎಸ್ ಅಭ್ಯರ್ಥಿಯನ್ನು ಘೋಷಿಸುತ್ತೇವೆ. ಫೆ.21ರಿಂದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಾಮರಾಜನಗರ ಸೇರಿ ನಾಲ್ಕು ಜಿಲ್ಲೆಗಳಲ್ಲಿ ಪಂಚರತ್ನ ರಥಯಾತ್ರೆ ನಡೆಯಲಿದೆ ಎಂದು ಹೆಚ್‌ಡಿಕೆ ಮಾಹಿತಿ ನೀಡಿದರು.

ಉತ್ತರ ಕನ್ನಡ ಜಿಲ್ಲೆ 4 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಪಟ್ಟಿ ಆಯ್ಕೆ ನಡೆಯಬೇಕಿದೆ. ವಿಶ್ರಾಂತಿ ತೆಗೆದುಕೊಳ್ಳದೇ ನಾಡಿನ ಜನರ ನಡುವೆ ಇರಲು ಬಯಸುತ್ತೇನೆ. ಕಲಬುರಗಿ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಖರ್ಗೆಗೆ ಮೋದಿ ಪ್ರಶ್ನಿಸಿದ್ದಾರೆ. ಹಾಗಾದರೆ ರಾಜ್ಯ ಬಿಜೆಪಿ ಸರ್ಕಾರದ ಕೊಡುಗೆ ಏನೆಂದು ಸಿಎಂ ಹೇಳಬೇಕಿದೆ.

ರಾಜ್ಯದಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಪಂಚರತ್ನ ರಥಯಾತ್ರೆಯ ಯೋಜನೆಗಳನ್ನು ನಾವು ಜಾರಿಗೊಳಿಸುತ್ತೇವೆ. ಎಲ್ಲ ಕ್ಷೇತ್ರಗಳಲ್ಲೂ ನನಗೆ ಉತ್ತಮ ಸ್ಪಂದನೆ ಸಿಕ್ಕಿದೆ. ನಾಡಿನ ಜನರ ಕಷ್ಟವನ್ನು ಬಗೆಹರಿಸಲು ನಮಗೆ ಬಹುಮತ ನೀಡಲಿ ಎಂದರು.

ಹಾಸನ ಟಿಕೆಟ್ ಫೈಟ್‌ಗೆ ಹೊಸ ಟ್ವಿಸ್ಟ್

ವರಿಷ್ಠರು ಒಪ್ಪಿದರೆ ಹಾಸನದಿಂದಲೇ ಸ್ಪರ್ಧೆ

ಹಾಸನ, ಫೆ.10– ಪಕ್ಷ ತೀರ್ಮಾನಿಸಿದರೆ ಹಾಸನ ಸಹಿತ



ಯಾವುದೇ ಕ್ಷೇತ್ರದಿಂದ ಸ್ಪರ್ಧೆಗಿಳಿಯಲು ಸಿದ್ಧನಿದ್ದೇನೆ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಹೇಳುವ ಮೂಲಕ ಟಿಕೆಟ್ ಪೈಪೋಟಿಗೆ ಹೊಸ ಟ್ವಿಸ್ಟ್ ಕೊಟ್ಟಿದ್ದಾರೆ.

ಹಾಸನ ಟಿಕೆಟ್ ವಿಚಾರವಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಕುಟುಂಬದಲ್ಲಿ ಮುಸುಕಿನ ಗುದ್ದಾಟ ನಡೆಯುತ್ತಿದೆ. ಈ ಬಾರಿ ಹಾಸನ ಟಿಕೆಟ್ ಭವಾನಿ ರೇವಣ್ಣ ಅವರಿಗೆ ಕೊಡಬೇಕೆಂದು ರೇವಣ್ಣ ಕಟುಂಬ ಪಟ್ಟು ಹಿಡಿದಿದೆ. ಆದ್ರೆ, ಇದಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಒಪ್ಪುತ್ತಿಲ್ಲ. ಇದರಿಂದ ಕುಟುಂಬದಲ್ಲಿ ಟಿಕೆಟ್ ಫೈಟ್ ಜೋರಾಗಿದೆ. ಇದರ ಮಧ್ಯೆ ಹೆಚ್.ಡಿ.ರೇವಣ್ಣ ಅವರು ಹಾಸನ ಕ್ಷೇತ್ರದಿಂದ ಸ್ಪರ್ಧೆ ಮಾಡುವುದಕ್ಕೆ ನಾನು ರೆಡಿ ಎಂದು ಹೊಸ ಬಾಂಬ್ ಸಿಡಿಸಿದ್ದಾರೆ. ಇದರೊಂದಿಗೆ ಭವಾನಿಗೆ ಟಿಕೆಟ್ ಸಿಗಲಿಲ್ಲ ಅಂದರೆ ಹಾಸನ ಕ್ಷೇತ್ರದಿಂದ ತಾವು ಸ್ಪರ್ಧಿಸುವ ಆಸೆ ಹೊರಹಾಕಿದ್ದಾರೆ. ಹಾಸನ ಕ್ಷೇತ್ರದಲ್ಲಿ ತಮ್ಮ ವಿರುದ್ಧ ಹೆಚ್.ಡಿ.ರೇವಣ್ಣ ಸ್ಪರ್ಧಿಸಿ ಗೆಲ್ಲಲಿ. 50,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುತ್ತೇನೆ. ಒಂದು ಮತ ಕಡಿಮೆಯಾದರೂ ಮತ್ತೆ ಚುನಾವಣೆಗೆ ಹೋಗುತ್ತೇನೆಂದು ಎಂದು ಬಿಜೆಪಿ ಶಾಸಕ ಪ್ರೀತಂಗೌಡ ಸವಾಲು ಹಾಕಿದ್ದರು. ಈ ಸವಾಲನ್ನು ಸ್ವೀಕರಿಸಿರುವ ರೇವಣ್ಣ, ಪಕ್ಷ ಹೇಳಿದರೆ ಹಾಸನ ಕ್ಷೇತ್ರದಿಂದ ಸ್ಪರ್ಧೆ ಮಾಡುವುದಕ್ಕೆ ನಾನು ರೆಡಿ. ಶಾಸಕ ಪ್ರೀತಂಗೌಡ ಸವಾಲು ಸ್ವೀಕರಿಸಿದ್ದೇನೆ. ಸ್ಪರ್ಧೆಗೆ ಸಿದ್ಧನಿದ್ದೇನೆ. ಪಕ್ಷ ಹೇಳಿದ್ರೆ ಪ್ರೀತಂಗೌಡ ಸವಾಲು ಸ್ವೀಕರಿಸಲು ಸಿದ್ಧನಿದ್ದೇನೆ ಎಂದು ಘೋಷಣೆ ಮಾಡಿದರು. ಕೆಲವರ ಸವಾಲು ಸ್ವೀಕರಿಸಬೇಕಲ್ಲವೇ. ಕುಮಾರಸ್ವಾಮಿರವರೇ ನಮ್ಮ ನಾಯಕರು, ಅವರು ಹೇಳಿದಂತೆ ಕೇಳುತ್ತೇವೆ. ಹಾಸನ ಜಿಲ್ಲೆಯಲ್ಲಿ ಏಳಕ್ಕೆ ಏಳು ಕ್ಷೇತ್ರ ಗೆಲ್ಲಬೇಕೆಂಬುವುದು ನಮ್ಮ ಗುರಿ ಎಂದು ಹೇಳುವ ಮೂಲಕ ಹಾಸನ ಹಾಗೂ ಹೊಳೆನರಸೀಪುರದಲ್ಲಿ ಸ್ಪರ್ಧಿಸಿ ಗೊಂದಲ ನಿವಾರಣೆಗೆ ತಂತ್ರ ಹೆಣೆದಿದ್ದಾರೆ ಎನ್ನಲಾಗಿದೆ. ಎಚ್.ಡಿ. ರೇವಣ್ಣ ಅವರು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯಲು ಮುಂದಾಗಿದ್ದಾರೆ. ರಾಜಕೀಯ ವೈರಿ ಪ್ರೀತಂಗೌಡ ಅವರನ್ನು ಸೋಲಿಸಲೇಬೇಕೆಂದು ರೇವಣ್ಣ ಹಠಕ್ಕೆ ಬಿದ್ದಿದ್ದಾರೆ. ಈ ಹಿನ್ನೆಲೆಯಲ್ಲಿ ತಮ್ಮ ಕುಟುಂಬಕ್ಕೆ ಟಿಕೆಟ್ ಸಿಕ್ಕರೆ ಮಾತ್ರ ಪ್ರೀತಂ ಸೋಲಿಸಲು ಸುಲಭ ಎನ್ನುವುದು ರೇವಣ್ಣ ಅಭಿಪ್ರಾಯವಾಗಿದೆ. ಇದರಿಂದ ಭವಾನಿ ರೇವಣ್ಣಗೆ ಟಿಕೆಟ್ ಬೇಕೆಂದು ಪಟ್ಟು ಹಿಡಿದಿದ್ದಾರೆ. ಆದರೆ ಇದಕ್ಕೆ ಕುಮಾರಸ್ವಾಮಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕಾಗಿಯೇ ರೇವಣ್ಣ ಹಾಸನದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಹೈಕೋರ್ಟ್‌ನಿಂದ ಬಿಗ್ ರಿಲೀಫ್

ಬೆಂಗಳೂರು, ಫೆ.10– ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಹೈಕೋರ್ಟ್ ಶುಕ್ರವಾರ ಬಿಗ್ ರಿಲೀಫ್ ನೀಡಿದೆ. ಫೆ.24ರವರೆಗೂ ಸಿಬಿಐ ತನಿಖೆಗೆ ಮಧ್ಯಂತರ ತಡೆ ನೀಡಿ ಉಚ್ಚ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. ತನಿಖಾಧಿಕಾರಿ ಫೆ.24ರೊಳಗೆ ತನಿಖೆಯ ಪ್ರಗತಿ ವರದಿ ಸಲ್ಲಿಸಲಿ, ಅಲ್ಲಿಯವರೆಗೂ ಸಿಬಿಐ ತನಿಖೆ ಮುಂದುವರೆಸದಂತೆ ಹೈಕೋರ್ಟ್ ಸೂಚನೆ ನೀಡಿದೆ. ಇದರಿಂದಾಗಿ ಡಿಕೆ ಶಿವಕುಮಾರ್‌ಗೆ ಸ್ವಲ್ಪ ದಿನಗಳ ಸಮಾಯವಕಾಶ ದೊರೆತಿದ್ದು, ಸದ್ಯ ನಿರಾಳರಾಗಿದ್ದಾರೆ. ಈ ಪ್ರಕರಣದಲ್ಲಿ ಸಿಬಿಐ ತನಿಖೆಗೆ ತಡೆ ಕೋರಿ ಡಿಕೆ ಶಿವಕುಮಾರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸಿಬಿಐ ಅಧಿಕಾರಿಗಳು ಪದೇ ಪದೆ ನೋಟಿಸ್ ನೀಡುತ್ತಿದ್ದಾರೆ. ಹೆಂಡತಿ, ಮಗಳಿಗೆ ನೋಟಿಸ್ ನೀಡುವ ಮೂಲಕ ಮಾನಸಿಕ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿದ್ದರು.

ಸುಪ್ರೀಂಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ

ನವದೆಹಲಿ, ಫೆ.10– ಹೈಕೋರ್ಟ್‌ನ ಇಬ್ಬರು ಮುಖ್ಯ ನ್ಯಾಯಮೂರ್ತಿಗಳನ್ನು ಶುಕ್ರವಾರ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದ್ದು, ಈ ಮೂಲಕ ಸುಪ್ರೀಂ ಕೋರ್ಟ್‌ನ 34 ನ್ಯಾಯಮೂರ್ತಿಗಳ ಸ್ಥಾನಗಳೂ ಭರ್ತಿಯಾದಂತಾಗಿದೆ. ಈ ಬಗ್ಗೆ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಟ್ವೀಟ್ ಮಾಡಿ ಮಾಹಿತಿ ನೀಡಿದ್ದು, ಭಾರತದ ಸಂವಿಧಾನದ ನಿಬಂಧನೆಗಳ ಪ್ರಕಾರ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ಇಬ್ಬರು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ನೇಮಿಸಿದ್ದಾರೆ. ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್, ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರನ್ನು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ನೇಮಿಸಲಾಗಿದೆ. ಅವರಿಗೆ ನನ್ನ ಶುಭಾಶಯಗಳು ಎಂದು ಟ್ವೀಟ್ ಮಾಡಿದ್ದಾರೆ. ಇಬ್ಬರ ಹೆಸರುಗಳನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂ ಕಳೆದ ತಿಂಗಳು ಶಿಫಾರಸು ಮಾಡಿತ್ತು. ಅವರು ಪ್ರಮಾಣವಚನ ಸ್ವೀಕರಿಸಿದ ನಂತರ, ಮುಖ್ಯ ನ್ಯಾಯಮೂರ್ತಿಯೂ ಸೇರಿದಂತೆ 34 ನ್ಯಾಯಾಧೀಶರ ಸಂಪೂರ್ಣ ಬಲವನ್ನು ಸುಪ್ರೀಂ ಕೋರ್ಟ್ ಪಡೆದುಕೊಳ್ಳಲಿದೆ. ಕಳೆದ ವಾರ ಸುಪ್ರೀಂ ಕೋರ್ಟ್‌ಗೆ ಐವರು ನ್ಯಾಯಮೂರ್ತಿಗಳು ನೇಮಕಗೊಂಡಿದ್ದರು.




ಹೆಚ್.ಟಿ.ಚೇತನಾಗೆ ಪಿ.ಎಚ್.ಡಿ ಪದವಿ

ಮೈಸೂರು, ಫೆ. 10–ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಕಂಪ್ಯೂಟರ್ ಸೈನ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಚೇತನಾ ಹೆಚ್.ಟಿ. ಅವರು ಜೆ.ಎಸ್.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಸಹ–ಪ್ರಾಧ್ಯಾಪಕರಾದ ಡಾ: ತ್ರಿಶಿಲಾದೇವಿ ಸಿ. ನಾಗಾವಿ ಅವರ ಮಾರ್ಗದರ್ಶನದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರಿನ ಜೆ.ಎಸ್.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿ.ಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಸರ್ಕಾರದ ಯೋಜನೆಗಳ ಮನೆ ಬಾಗಿಲಿಗೆ ತಲುಪಿಸಲು ಎಲ್ಲಾ ಜಿಲ್ಲೆಯಲ್ಲಿ ಅಭಿಯಾನ

ಬೆಂಗಳೂರು, ಫೆ.10(ಕೆಎಂಶಿ)–ಸರಕಾರದ ಯೋಜನೆಗಳು ಸಂಪೂರ್ಣವಾಗಿ ಎಲ್ಲಾ ಫಲಾನುಭವಿಗಳಿಗೆ ಮುಟ್ಟಬೇಕೆಂಬ ಉದ್ದೇಶದಿಂದ ಎಲ್ಲಾ ಜಿಲ್ಲೆಗಳಲ್ಲಿ ಅಭಿಯಾನ ಕೈಗೊಳ್ಳಲು ತೀರ್ಮಾನ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅಧಿಕಾರ ವಹಿಸಿಕೊಂಡ ಮೇಲೆ ಬಹಳಷ್ಟು ಪಾರದರ್ಶಕತೆ ಸಾಧ್ಯವಾಗಿದೆ. ಸರ್ಕಾರದ ಕಾರ್ಯಕ್ರಮಗಳನ್ನು ಫಲಾನುಭವಿಗಳಿಗೆ ನೇರವಾಗಿ ಮುಟ್ಟಿಸಲು ಡಿಬಿಟಿ ವ್ಯವಸ್ಥೆಯಿಂದ ಮಧ್ಯವರ್ತಿಗಳ ಹಾವಳಿ ತಪ್ಪಿದ್ದು, ಜನರು ಕಚೇರಿಗಳಿಗೆ ಓಡಾಡುವುದನ್ನು ತಪ್ಪಿಸಲಾಗಿದೆ. ಪಿಎಂ ಸ್ವನಿಧಿ, ರೈತ ವಿದ್ಯಾನಿಧಿ,



ರೈತ ಶಕ್ತಿ ಯೋಜನೆಗಳು ಡಿಬಿಟಿ ಮುಖಾಂತರವಾಗಿ ಪಾವತಿಯಾಗುತ್ತಿದೆ. ಈ ಎಲ್ಲಾ ರಾಜ್ಯ ಮತ್ತು ಕೇಂದ್ರ ಸರ್ಕಾರದ ಫಲಾನುಭವಿಗಳಿಗೆ ನೇರವಾಗಿ ಮುಟ್ಟಲು ಹಾಗೂ ಸೌಲಭ್ಯ ವಂಚಿತರಾದವರಿಗೆ ಕಾರ್ಯಕ್ರಮ ಮುಟ್ಟಿಸಲು ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸ್ತ್ರೀ ಶಕ್ತಿ, ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆ, ಅಮೃತ ಯೋಜನೆಗಳನ್ನು ಜಾರಿಗೆ ತರಬೇಕಿದ್ದು, ಇದಕ್ಕೆ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಬಾಕಿ ಇರುವ ಫಲಾನುಭವಿಗಳನ್ನು ಗುರುತಿಸಿ ಫಲಾನುಭವಿಗಳಿಗೆ ಮುಟ್ಟಿಸುವ ಕೆಲಸವಾಗಬೇಕು. ಪ್ರತಿ ಜಿಲ್ಲೆಯಲ್ಲಿ ಜಾಗೃತಿ ಅಭಿಯಾನ ಕೈಗೊಂಡು ಒಂದು ಸಮ್ಮೇಳನ ಮಾಡುವ ಮುಖಾಂತರ ಯೋಜನೆಗಳನ್ನು ಮುಟ್ಟಿಸಲಾಗುವುದು. ಇದರಿಂದ ಅತ್ಯಂತ ತಳಸ್ತರದಲ್ಲಿನ ಜನರಿಗೆ ಮಾಹಿತಿ ತಲುಪಿದಂತಾಗುತ್ತದೆ ಎಂದರು. ಈ ಕುರಿತಂತೆ ಅತೀ ಶೀಘ್ರದಲ್ಲಿಯೇ ಆದೇಶ ಹೊರಬೀಳಲಿದೆ. ಅಭಿಯಾನದಿಂದ ಮಾಹಿತಿ ಇಲ್ಲದವರಿಗೂ ಮಾಹಿತಿ ಮುಟ್ಟಬೇಕು., ಸಮ್ಮೇಳನಕ್ಕೆ ಮುಂಚೆ ಅಭಿಯಾನವಾದರೆ ಜನರಿಗೆ ಮಾಹಿತಿ ದೊರೆತು ಸೌಲಭ್ಯಗಳನ್ನು ಪಡೆಯಬಹುದು. ಈ ಅಭಿಯಾನ ಜಿಲ್ಲಾ ಉಸ್ತುವಾರಿ ಸಚಿವರು ನೇತೃತ್ವದಲ್ಲಿ ನಡೆಯಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕಂದಾಯ ಸಚಿವ ಆರ್. ಅಶೋಕ್ ಪತ್ರ ಬರೆದು ಈಗಾಗಲೇ ದಾವಣಗೆರೆಯಲ್ಲಿ ಹಕ್ಕು ಪತ್ರ ನೀಡುವ ಕೆಲಸ, ಗ್ರಾಮ ವಾಸ್ತವ್ಯ, ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಅವರು ಮಂಡ್ಯ ಜಿಲ್ಲೆಯ ಉಸ್ತುವಾರಿಯಿಂದ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದರು. ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಉಸ್ತುವಾರಿಯಿಂದ ಅವರನ್ನು ಕೈಬಿಡಲಾಗಿದೆ ಎಂದರು.

ಸಮುದ್ರದೊಳಗೆ ಮುಂಬೈ–ಅಹ್ಮದಾಬಾದ್ ಬುಲೆಟ್ ರೈಲು ನಿಲ್ದಾಣ!

ಮುಂಬೈ, ಫೆ.10– ದೀರ್ಘಾವಧಿ ಕಾಯುವಿಕೆ ನಂತರ, ಮುಂಬೈ–ಅಹ್ಮದಾಬಾದ್ ನಡುವಿನ ಭಾರತದ ಬಹುನಿರೀಕ್ಷಿತ ಹೈಸ್ಪೀಡ್ ರೈಲು(ಬುಲೆಟ್ ರೈಲು) ಯೋಜನೆ ಕಾಮಗಾರಿ ಆರಂಭವಾಗಿದೆ.

ಮುಂಬೈ–ಅಹ್ಮದಾಬಾದ್ ಹೈ ಸ್ಪೀಡ್ ರೈಲ್ ಕಾರಿಡಾರ್‌ನ ಭಾಗವಾಗಿ ಮಹಾರಾಷ್ಟ್ರದ ಬಾಂದ್ರಾ–ಕುರ್ಲಾ ಕಾಂಪ್ಲೆಕ್ (ಬಿಕೆಸಿ) ಹಾಗೂ ಶಿಲ್ಪಾತ ನಡುವಿನ ಡಬಲ್ ಲೈನ್‌ಗಾಗಿ ಟನಲ್ ನಿರ್ಮಾಣ ಕಾಮಗಾರಿಗೆ ಫೆ.10ರಂದು ಚಾಲನೆ ದೊರೆತಿದೆ. ಒಟ್ಟು 508.17 ಕಿ.ಮೀ.ನ ರೈಲು ಮಾರ್ಗದ ಪೈಕಿ 21 ಕಿ.ಮೀ. ಟ್ರ್ಯಾಕ್ ನೆಲದಡಿಯಲ್ಲಿನಲ್ಲಿ ನಿರ್ಮಾಣವಾಗಲಿದ್ದು, ನೆಲದಡಿಯಲ್ಲಿ ನಿರ್ಮಾಣವಾಗುತ್ತಿರುವ ಏಕೈಕ ರೈಲು ಮಾರ್ಗ ಇದಾಗಿದ್ದು ಉಳಿದ ಮಾರ್ಗ ಎತ್ತರದಲ್ಲಿ ಹಾದುಹೋಗಲಿದೆ. ಈ ಟನಲ್ ನಿರ್ಮಾಣವಾಗುವ ಸುತ್ತಮುತ್ತಲ ಪ್ರದೇಶ (ಥಾಣೆ ಕ್ರೀಕ್, ಅಥವಾ ಥಾಣೆ ತೊರೆ)ಯಲ್ಲಿ ಪಕ್ಷಿಧಾಮ ಹಾಗೂ ಮ್ಯಾಂಗ್ರೋವ್ಸ್ ಇರುವುದರಿಂದ



ಅವುಗಳ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ. ನೆಲದಡಿಯಲ್ಲಿ ನಿರ್ಮಾಣವಾಗುತ್ತಿರುವ ರೈಲು ಮಾರ್ಗಕ್ಕೆ ನೈಸರ್ಗಿಕ ಬೆಳಕನ್ನು ಒದಗಿಸುವ ದೃಷ್ಟಿಯಿಂದ ಸ್ಕೈಲೈಟ್ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ ಎಂದು ಈ ಯೋಜನೆಯನ್ನು ಸಾಕಾರಗೊಳಿಸುತ್ತಿರುವ ತಂಡದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಯೋಜನೆಯ ಮತ್ತೊಂದು ಆಸಕ್ತಿದಾಯಕ ಸಂಗತಿಯೆಂದರೆ, ಅದು ಸಮುದ್ರದ ಒಳಭಾಗದಲ್ಲಿ ಹಾದು ಹೋಗಲಿರುವ ಟನಲ್‌ಗಳು. ಈ ರೀತಿಯ 7 ಟನಲ್‌ಗಳು ಬುಲೆಟ್ ರೈಲುಗಳ ಭಾಗವಾಗಿರಲಿದ್ದು, ಟನಲ್ ಬೋರಿಂಗ್ ಯಂತ್ರ (ಟಿಬಿಎಂ) ಹಾಗೂ ನ್ಯೂ ಆಸ್ಟ್ರಿಯನ್ ಟನಲಿಂಗ್ ವಿಧಾನವನ್ನು ಬಳಸಿ ಬಿಕೆಸಿ ಹಾಗೂ ಶಿಲ್ಪಾತ ನಡುವೆ ನಿರ್ಮಾಣವಾಗಲಿದೆ.

ಈ 7 ಕಿ.ಮೀ.ನ ಸಮುದ್ರದ ಸುರಂಗ ದೇಶದಲ್ಲೇ ಮೊದಲ ಸಮುದ್ರದ ಸುರಂಗವಾಗಿರಲಿದೆ ಎಂದು ರೈಲ್ವೆ ಮಾಹಿತಿ ನೀಡಿದೆ. ಈ ಟನಲ್ ಭೂಮಿಯ ಮಟ್ಟದಿಂದ 25–65 ಮೀಟರ್ ನಷ್ಟು ಆಳವಾಗಿರಲಿದ್ದು, ಶಿಲ್ಪಾತದ ಬಳಿ ಪಾರ್ಸಿಕ್ ಹಿಲ್‌ನಲ್ಲಿ 114 ಮೀಟರ್ ಕೆಳಭಾಗದಲ್ಲಿ ನಿರ್ಮಾಣವಾಗುತ್ತಿರುವ ಟನಲ್ ಅತ್ಯಂತ ಆಳವಾದ ಟನಲ್ ಆಗಿರಲಿದೆ. ಟನಲ್ ನಿರ್ಮಾಣಕ್ಕೆ ಭಾರತ ಅತ್ಯಾಧುನಿಕ, ನ್ಯೂ ಆಸ್ಟ್ರಿಯನ್ ಸುರಂಗ ವಿಧಾನವನ್ನು ಅನುಸರಿಸುತ್ತಿದೆ.

2022ರ ಸೆಪ್ಟೆಂಬರ್ 23ರಂದು ಇದಕ್ಕಾಗಿ ಟೆಂಡರ್ ಕರೆಯಲಾಗಿತ್ತು ಹಾಗೂ ಈ ಯೋಜನೆಗಾಗಿ ಶೇ.98.79 ರಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಈ ಯೋಜನೆಯ ಮೇಲೆ ನಿಗಾ ವಹಿಸಿದ್ದಾರೆ.

ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯ 22ನೇ ವಾರ್ಷಿಕೋತ್ಸವ

ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು,ಫೆ.10(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಫೆ.10 ಮತ್ತು 11ರಂದು ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯ 22ನೇ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ವಾಣಿಜ್ಯೋದ್ಯಮಿ ಸಿ.ಜಗದೀಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಕಳೆದ ಎರಡು ದಶಕಗಳಿಂದ ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ ವಿವಿಧ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. 22ನೇ ವರ್ಷದ ಸಂಭ್ರಮದ ವಾರ್ಷಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜಕೀಯ ಜೀವನಕ್ಕೆ ಕಾಲಿಟ್ಟು 22 ವರ್ಷಗಳಾಗಿದ್ದು, ಈ ಹಿನ್ನೆಲೆಯಲ್ಲಿ ಮೋದಿ ಅವರ ಕುರಿತಾದ ವಿಚಾರ ಸಂಕಿರಣ ಆಯೋಜಿಸಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 'ನಮೋ ಪ್ರಶಸ್ತಿ', 'ಸಾರ್ಥಕ ಸೇವಾ ಭೂಷಣ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ. ಅಲ್ಲದೆ, ಪ್ರಶಸ್ತಿ ಪಡೆದವರ ಪರಿಚಯ ಕುರಿತಾದ 'ಸಾರ್ಥಕ ಸಾಧಕರು' ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಗುತ್ತದೆ ಎಂದರು. ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯ ಅಂಗ ಸಂಸ್ಥೆಯಾದ ಭೂಮಿಕಾ ಬಳಗದ ವತಿಯಿಂದ ಮಾ.12ರಂದು ಸಂಸ್ಥೆಯ ಆವರಣದದಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ರೇವಾ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿನಿಯರ ತಂಡ ಪರಶಿವನ ಪಂಚವಕ್ತ್ರಂ ಎಂಬ ನೃತ್ಯ ರೂಪಕ ಪ್ರದರ್ಶಿಸಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ತಗಡೂರು ಗೌರಿಶಂಕರ, ರಾಚಪ್ಪ, ಸವಿತಾ ಘಾಟ್ಕೆ, ರೂಪಾ ಇದ್ದರು.

ಮುಡಾ ಹಿಂಭಾಗದ ಜಾಗದಲ್ಲಿ ಐತಿಹಾಸಿಕ ಕುರುಹುಗಳು ಪತ್ತೆ: ಇವುಗಳ ಇತಿಹಾಸ ಅರಿಯಲು ಆಗ್ರಹ





ಮೈಸೂರು, ಫೆ.10(ಎಸ್‌ಪಿಎನ್)– ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಸುಪರ್ದಿಯಲ್ಲಿರುವ ನರ್ಸರಿ (ಶ್ರೀ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನ ಆವರಣ) ಜಾಗ ಮತ್ತು ತೋಟಗಾರಿಕೆ ಇಲಾಖೆ ಸೇರಿದಂತೆ ಗೋಲ್ಡನ್ ನರ್ಸರಿ ಜಾಗದಲ್ಲಿ 12–15 ರಷ್ಟು ಗದ್ದಿಗೆಗಳಿದ್ದು, ಇದರ ಮೂಲ ಮತ್ತು ಇತಿಹಾಸವನ್ನು ಪರಿಶೀಲಿಸುವಂತೆ ಸಾರ್ವಜನಿಕ ವಲಯದಿಂದ ಒತ್ತಾಯ ಕೇಳಿ ಬರುತ್ತಿದೆ.

ಹಲವು ವರ್ಷಗಳಿಂದ ಮುಡಾ ಮತ್ತು ತೋಟಗಾರಿಕೆ ಇಲಾಖೆಗೆ ಸೇರಿದ ತಲಾ ಒಂದು ಎಕರೆ ಜಾಗದಲ್ಲಿ ಎರಡೂ ಇಲಾಖೆ ನರ್ಸರಿ ಬೆಳೆಸುತ್ತಿವೆ. ತೋಟಗಾರಿಕೆ ಇಲಾಖೆಗೆ (ಗೋಲ್ಡನ್ ನರ್ಸರಿ) ಸೇರಿದ ಒಂದು ಎಕರೆ ಜಾಗದಲ್ಲಿ ಸುಮಾರು 13ಕ್ಕೂ ಹೆಚ್ಚು ಗದ್ದುಗೆ ಇದ್ದು, ಎಲ್ಲಾ ಗದ್ದುಗೆ ಮೇಲೆ ಶಿವಲಿಂಗ ಮತ್ತು ಪಾದುಕೆಗಳಿವೆ. ಜೊತೆಗೆ ಹಳೆಗನ್ನಡದಲ್ಲಿ ಕೆತ್ತಿರುವ ಫಲಕಗಳಿವೆ. ಹಾಗೆಯೇ ಶ್ರೀ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನದ



ಆವರಣದಲ್ಲಿ 2–3 ಗದ್ದುಗಳಿವೆ. ಗೋಲ್ಡನ್ ನರ್ಸರಿ ಜಾಗದ ಗದ್ದುಗೆಗಳ ಫಲಕಗಳಲ್ಲಿನ ಹಳೆಗನ್ನಡ ಲಿಪಿ ಓದಲು ನಮಗೆ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ನೌಕರ ಸುನಿಲ್ ಕುಮಾರ್ ಹಾಗೂ ಬೀದಿ ಬದಿ ವ್ಯಾಪಾರಿ ರಾಮಣ್ಣ. ಈ ಜಾಗದ ಕುರಿತು ಬೀದಿಬದಿ ವ್ಯಾಪಾರಿ ರಾಮಣ್ಣ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ಕಳೆದ 14 ವರ್ಷಗಳಿಂದ ಮುಡಾ ನರ್ಸರಿ ಜಾಗದಲ್ಲಿರುವ ಶ್ರೀ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನ ಹಾಗೂ ಇದಕ್ಕೆ ಹೊಂದುಕೊಂಡಂತಿರುವ ಗೋಲ್ಡನ್ ನರ್ಸರಿ ಜಾಗದಲ್ಲಿ ಹಲವು ಗದ್ದಿಗೆಗಳಿವೆ.

ಇದರಲ್ಲಿ ಕೆಲ ಗದ್ದುಗೆಗಳ ಮೇಲೆ ಶಿವಲಿಂಗ ಮತ್ತು ಪಾದುಕೆಗಳಿವೆ. ಇದನ್ನು ತೋಟಗಾರಿಕೆ ಇಲಾಖಾ ಅಧಿಕಾರಿಗಳು ಹೇಳುವ ಪ್ರಕಾರ ಈ ಜಾಗದಲ್ಲಿ ಸಂತರು ಧ್ಯಾನ ಮತ್ತು ಪೂಜೆ ಮಾಡಿಕೊಂಡು ವಾಸವಿದ್ದರು. ಇದರಲ್ಲಿ ಕೆಲ ಸಂತರು ನಿಧನರಾದಾಗ ಇದೇ ಜಾಗದಲ್ಲಿ ಅಂತ್ಯಕ್ರಿಯೆ ನಡೆಸಿ, ಬೃಂದಾವನ ಕಟ್ಟಿರಬಹುದು. ಅಲ್ಲದೆ, ಕಬ್ಬಿಣದ ಸೀಟಿನಡಿ ಇರುವ ಶಿವಲಿಂಗಕ್ಕೆ ಅನಾದಿಕಾಲದಿಂದಲೂ ಪೂಜೆ ಮಾಡಿಕೊಂಡು ಬರುತ್ತಿದ್ದರು. ಈ ಜಾಗದ ಒಂದು ಗದ್ದುಗೆಯ ಮೇಲೆ ಶಿವಲಿಂಗ ದೊಡ್ಡದಿದೆ. ಇನ್ನು ಕೆಲ ಗದ್ದುಗೆಗಳ ಮೇಲೆ ಪಾದುಕೆಗಳಿವೆ. ಇವುಗಳಿಗೆ ಬಣ್ಣ ಬಳಿದು, ಕಾರ್ತಿಕ ಮಾಸ ಮತ್ತು ಷಷ್ಠಿ ಸಂದರ್ಭದಲ್ಲಿ ವಿಶೇಷ ಪೂಜೆ ಸಲ್ಲಿಸಿಕೊಂಡು ಬರುತ್ತಿದ್ದೇವೆ. ಈ ಕುರಿತು ಪ್ರಾಚ್ಯ ವಸ್ತು ಸಂಶೋಧನಾಲಯದ ಅಧಿಕಾರಿಗಳು ಪರಿಶೀಲಿಸುವಂತೆ ಒತ್ತಾಯಿಸಿದರು.

ತೋಟಗಾರಿಕೆ ಇಲಾಖೆಯ ಅಧಿಕಾರಿ



ನಾರಾಯಣ(ಈಗ ನಿವೃತ್ತಿ) ಎಂಬುವರು ಈ ನರ್ಸರಿಯಲ್ಲಿ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ವೇಳೆ ಈ ಗದ್ದುಗೆಗಳಿಗೆ ಹೂ ಇಟ್ಟು ಪೂಜೆ ಸಲ್ಲಿಸುತ್ತಿದ್ದರು. ಅವರ ನಂತರ ನಾನು ಹೂ ಇಟ್ಟು ಪೂಜೆ ಸಲ್ಲಿಸುವ ಕಾರ್ಯ ಮುಂದುವರೆಸಿದ್ದೇನೆ. ಅಲ್ಲದೆ, ಈ ಜಾಗದ ವಿಶೇಷತೆ ಬಗ್ಗೆ ನಿವೃತ್ತ ಅಧಿಕಾರಿ ನಾರಾಯಣರ ಜೊತೆ ಮಾತನಾಡುತ್ತಿದ್ದ ವೇಳೆ ಶ್ರೀ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನದ ಆವರಣ ಮತ್ತು ಗೋಲ್ಡನ್ ನರ್ಸರಿ ಜಾಗ 40 ಅಡಿಗೂ ಹೆಚ್ಚು ಆಳದ ಬೃಹತ್ ಹೊಂಡವಿದ್ದ ಬಗ್ಗೆ ಮಾಹಿತಿ ನೀಡುತ್ತಿದ್ದರಲ್ಲದೆ, ಮಳೆ ಬಂದಾಗ ಈ ಜಾಗದಲ್ಲಿ ನೀರು ತುಂಬಿಕೊಂಡರೆ, ಆ ನೀರು ಹೊರಹೋಗುವ ಜಾಗಕ್ಕೆ ಇಟ್ಟಿಗೆ, ಚುರುಕಿ ಬಳಸಿ ರಾಜ ಕಾಲುವೆ ಮಾಡಿರುವ ಜಾಗವೂ ಇದೆ ಎಂದು ತಿಳಿಸಿದರು.

ಈ ಜಾಗಕ್ಕೆ ದೇವರಾಜ ಅರಸು ರಸ್ತೆ ಅಗಲೀಕರಣ ಸಂದರ್ಭದಲ್ಲಿ ಅಲ್ಲಿನ ಕಟ್ಟಡದ ಅವಶೇಷಗಳನ್ನು ಈ ಜಾಗದಲ್ಲಿ ತುಂಬಿ, ಸಮತಟ್ಟು ಮಾಡಲಾಗಿದೆ. ಆ ಸಂದರ್ಭದಲ್ಲಿ ಒಂದು ಕಲ್ಲಿನ ಮೇಲೆ ಕಟ್ಟಡ ಅವಶೇಷಗಳಿಂದ ಮುಚ್ಚಿದರೂ ಬೆಳಗಾಗುವಷ್ಟರಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಿತಂತೆ. ಹಾಗಾಗಿ ಈ ಜಾಗದ ಬಗೆಗಿನ ಊಹಾ ಪೋಹಗಳ ಬಗ್ಗೆ ಇತಿಹಾಸ ತಜ್ಞರು ಪರಿಶೀಲಿಸಿ, ಸಾರ್ವಜನಿಕರಿಗೆ ಮಾಹಿತಿ ಒದಗಿಸುವಂತೆ ಮನವಿ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಬಾಸ್ : "ನೋಡಿ ಇವ್ರೆ, ನಮ್ಮ ಆಫೀಸ್‌ನಲ್ಲಿ ನಿಮ್ಗೆ ಕೊಡೋಕೆ ಯಾವ ಕೆಲ್ಸಾನೂ ಇಲ್ಲ. ಬೇರೆ ಕೆಲ್ಸ ನೋಡ್ಕೊಳ್ಳಿ"

ಆತ : "ದಯವಿಟ್ಟು ನನ್ನನ್ನು ಅಪಾಯಿಂಟ್ ಮಾಡ್ಕೊಳ್ಳಿ ಸಾರ್, ನಾನು ಯಾವತ್ತು ಯಾವ ಕೆಲ್ಸಾನೂ ಕೇಳಲ್ಲ!"

ಮೈಸೂರು ಮಿತ್ರ

ಶನಿವಾರ, 11 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಿಳಿದಿರುವುದಕ್ಕಿಂತ ಕಡಿಮೆ ಮಾತಾಡುವುದೇ ಬುದ್ಧಿವಂತಿಕೆಯ ಲಕ್ಷಣ
– ವಿಲಿಯಂ ಶೇಕ್ಸ್‌ಪಿಯರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಚಿಕ್ಕದಾದ್ರೆ ಮನಸ್ಸು ಚಿಕ್ಕದೆ?

ನಿಮ್ಮ ಪತ್ರಗಳು

ಪಿಹೆಚ್‌ಡಿ ಕಡ್ಡಾಯ ನಿಯಮ ಸಡಿಲಿಕೆ ಸ್ವಾಗತಾರ್ಹ

ಮಾನ್ಯರೆ,

ವಿಶ್ವವಿದ್ಯಾಲಯ ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಲು ಪಿಹೆಚ್‌ಡಿ ಪದವಿ ಕಡ್ಡಾಯವೆಂಬ ನಿಯಮವನ್ನು ಯುಜಿಸಿ 2023 ಜುಲೈಗೆ ಅನ್ವಯಿಸುವಂತೆ ಸಡಿಲಿಕೆಗೊಳಿಸಿರುವುದು ಉತ್ತಮ ನಿರ್ಧಾರವಾಗಿದೆ.

ಭಾರತ ದೇಶದಲ್ಲಿ 900ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಮತ್ತು 50000ದಷ್ಟು ಉನ್ನತ ಶಿಕ್ಷಣ ಕಾಲೇಜುಗಳಿದ್ದು, ಈ ನಿಯಮದಿಂದಾಗಿ ಹಲವಾರು ಪ್ರತಿಭಾವಂತರಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆ ದೊರೆಯುವ ಅವಕಾಶ ಹೆಚ್ಚಾಗುತ್ತದೆ.

ಇದಕ್ಕೂ ಮೊದಲು ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿ ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿಗಳಿಸುವುದು ಮತ್ತು ಆಯಾ ರಾಜ್ಯದ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯವಾಗಿತ್ತು.

ಆದರೆ ಯುಜಿಸಿ 1956 ರ ನಿಯಮಗಳಿಗೆ 2019–20ರಲ್ಲಿ ತಿದ್ದುಪಡಿ ತಂದು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಪಿಹೆಚ್‌ಡಿ ಪದವಿಯನ್ನು ಕಡ್ಡಾಯಗೊಳಿಸಿತ್ತು. ಇದರ ಮುಖ್ಯ ಉದ್ದೇಶ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸುವುದಾಗಿತ್ತು. ಆದರೆ ಲಕ್ಷಾಂತರ ವಿದ್ಯಾರ್ಥಿಗಳು ಪ್ರತಿ ವರ್ಷ ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಿದ್ದು, ಈ ಎಲ್ಲಾ ವಿದ್ಯಾರ್ಥಿಗಳು ಪಿಹೆಚ್‌ಡಿ ಪದವಿಯನ್ನು ಪಡೆಯುವುದು ಸುಲಭವಲ್ಲ ಮತ್ತು ಇಷ್ಟು ಮಂದಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಸಹ ಗಂಭೀರ ಸಮಸ್ಯೆಯಾಗಿತ್ತು.

ಪಿಹೆಚ್‌ಡಿ ಮಾರ್ಗದರ್ಶಕರು ಪ್ರಾಧ್ಯಾಪಕರಾಗಿದ್ದರೆ 8 ಮಂದಿ ವಿದ್ಯಾರ್ಥಿಗಳಿಗೆ, ಸಹ ಪ್ರಾಧ್ಯಾಪಕರಾಗಿದ್ದರೆ 6 ಮಂದಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬಹುದಾಗಿರುತ್ತದೆ ಮತ್ತು ಪಿಹೆಚ್‌ಡಿ ಪದವಿ ಪಡೆಯುವುದು ಸುಲಭವಲ್ಲ ಹಾಗೂ ಹೆಚ್ಚಿನ ಸಮಯವನ್ನು ಪಿಹೆಚ್‌ಡಿ ಪದವಿಗೆ ಮೀಸಲಿಡಬೇಕಾಗುತ್ತದೆ.

ಯುಜಿಸಿಯ ಪಿಹೆಚ್‌ಡಿ ಕಡ್ಡಾಯ ನಿಯಮದ ಸಡಿಲಿಕೆಯಿಂದ ಹಲವಾರು ಪ್ರತಿಭಾವಂತರಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆ ದೊರಕುವಂತಾದರೆ ಅನುಕೂಲವಾಗುತ್ತದೆ. ಯುಜಿಸಿಗೆ ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಪರವಾಗಿ ಧನ್ಯವಾದಗಳು.

–ರಾಸುಮ ಭಟ್, ಚಿಕ್ಕಮಗಳೂರು

ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಶೌಚಾಲಯ ಅವ್ಯವಸ್ಥೆ

ಮಾನ್ಯರೆ,

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ವಾರದ ಬಹುತೇಕ ದಿನಗಳಲ್ಲಿ ಸಂಗೀತ ಸಂಜೆ, ನೃತ್ಯ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಇದನ್ನು ವೀಕ್ಷಿಸಲು ಸಾವಿರಾರು ಕಲಾಭಿಮಾನಿಗಳು ಆಗಮಿಸುತ್ತಾರೆ. ಆದರೆ ಈ ಸಭಾಂಗಣದ ಪುರುಷರ ಶೌಚಾಲಯದಲ್ಲಿ ಯಾವ ನಲ್ಲಿ ತಿರುಗಿಸಿದರೂ ನೀರು ಬಾರದೇ ತೊಂದರೆಯಾಗುತ್ತಿದೆ. ಸಭಾಂಗಣದ ವ್ಯವಸ್ಥಾಪಕರು ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಂಡು ಸಭಾಂಗಣ ಶೌಚಾಲಯದ ನೀರಿನ ಅವ್ಯವಸ್ಥೆ ಸರಿಪಡಿಸಲು ಮನವಿ.

–ನೊಂದ ಕಲಾಭಿಮಾನಿಗಳು, ಮೈಸೂರು ನಗರ.

ಕಾರಾಗೃಹದ ಮೇಲೆ ದಾಳಿ, ಕ್ರಮ ಯಾರ ಮೇಲೆ?

ಮಾನ್ಯರೆ,

ಮೈಸೂರಿನ ಪೊಲೀಸರು ಕೇಂದ್ರ ಕಾರಾಗೃಹದ ಮೇಲೆ ದಾಳಿ ಮಾಡಿದ ವಿಚಾರ ಸುದ್ದಿಯಾಗಿದೆ. ಅದರೊಂದಿಗೆ ಸುರಕ್ಷಿತ ಸ್ಥಳದಲ್ಲಿ ಅನಪೇಕ್ಷಿತ ಪದಾರ್ಥಗಳನ್ನು ಹೊಂದಿದ್ದ ಆರೋಪಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಾಗಿಯೂ ತಿಳಿಸಿದೆ. ಕಾರಾಗೃಹಕ್ಕೆ ಅನಪೇಕ್ಷಿತ ವಸ್ತುಗಳನ್ನು ತರಲು ಕಾರಾಗೃಹದ ಸಿಬ್ಬಂದಿಗಳೂ ಕಾರಣರಲ್ಲವೇ? ಆದ ಕಾರಣ ಅವರ ಮೇಲೂ ಅಪರಾಧ ಪ್ರಕರಣಗಳನ್ನು ದಾಖಲು ಮಾಡಿ ಇಲಾಖಾ ವಿಚಾರಣೆಯನ್ನೂ ನಡೆಸಬೇಕಾದುದು ಸರಕಾರದ ಕ್ರಮವಾಗಬೇಕು.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಯುಕೆಜಿಗೆ ಅನುತ್ತೀರ್ಣ ಸರಿಯೇ?

ಮಾನ್ಯರೆ,

ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ಮಗು ವಿದ್ಯಾಮಂದಿರದಲ್ಲಿ ತನ್ನ ಶಿಕ್ಷಣದ ಕಲಿಕೆ ಪ್ರಾರಂಭವಾಗುತ್ತದೆ. ಇತ್ತೀಚೆಗೆ ಯುಕೆಜಿ ಓದುತ್ತಿದ್ದ ಮಗುವಿಗೆ ಅನುತ್ತೀರ್ಣ ಮಾಡಿದ್ದಾರೆ ಎಂದರೆ ಅಚ್ಚರಿಯ ಸಂಗತಿ ಸರಿ. ಒಂದರಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕು ಎಂಬ ಕಾಯ್ದೆ ಇದೆ ಎಂಬುವುದನ್ನು ಸೆಂಟ್ ಜೋಸೆಫ್ ಚಾಮಿನೇಡ್ ಅಕಾಡೆಮಿ ಮರೆತಂತೆ ಕಾಣುತ್ತದೆ. ಆ ಶಾಲೆಯಲ್ಲಿ ಯುಕೆಜಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿ ನಂದಿನಿಯನ್ನು ಅನುತ್ತೀರ್ಣ ಮಾಡಲಾಗಿದೆ ಎಂದು ತಿಳಿದುಬಂದಿದೆ. ಲಕ್ಷ ಲಕ್ಷ ಹಣ ಪಡೆಯುವ ಖಾಸಗಿ ಶಿಕ್ಷಣ ಸಂಸ್ಥೆಗಳು ಕಲಿಕೆಯ ಜತೆಗೆ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಯಾವ ಪ್ರಭಾವ ಬೀರುತ್ತದೆ ಎಂಬುದನ್ನು ಅರಿತಿರಬೇಕು. ಶಿಕ್ಷಣಕ್ಕೆ ಸಂಬಂಧಿಸಿದ ಒತ್ತಡದಿಂದ ಭಾರತದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪ್ರಮುಖ ಕಾರಣಗಳಲ್ಲಿ ಒಂದು ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿ ಮಾಡಿದೆ. ಬದುಕಿನಲ್ಲಿ ತಮ್ಮದೇ ಕನಸನ್ನು ಕಂಡು ಓದಲು ಬಂದ ವಿದ್ಯಾರ್ಥಿಗಳ ಬಾಳಿಗೆ ಶಿಕ್ಷಣ ದಾರಿದೀಪವಾಗಬೇಕೇ ವಿನಹ ಕಂಟಕ ಆಗಬಾರದು. ಪ್ರಸ್ತುತ ಯುಕೆಜಿಯ ಮಗುವಿಗೆ ಅನುತ್ತೀರ್ಣ ಮಾಡಿರುವ ಖಾಸಗಿ ಶಾಲೆಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

–ಆನಂದ ಜೇವೂರ್, ಕಲಬುರಗಿ

ದಂಡ ಪಾವತಿ ಅವಧಿ ವಿಸ್ತರಣೆಯಾಗಲಿ

ಮಾನ್ಯರೆ,

ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳ ದಂಡ ಪಾವತಿಯಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿ ಫೆ. 11 ಕೊನೆಯ ದಿನಾಂಕವೆಂದು ನಿಗದಿಪಡಿಸಿರುವುದು ಶ್ಲಾಘನೀಯ. ಆದರೆ ಸಂಚಾರಿ ಪೊಲೀಸ್ ಆ್ಯಪ್ ಮೂಲಕ ಪಾವತಿ ಮಾಡಲು ಯತ್ನಿಸಿದಾಗ ಸರ್ವರ್ ಡೌನ್ ಎಂದು ತೋರಿಸುತ್ತಿದೆ. ಜೊತೆಗೆ ಗೂಗಲ್ ಪೇ, ಫೋನ್ ಪೇ ಬದಲಾಗಿ ಕೇವಲ ಪೇಟಿಎಂ ಮೂಲಕ ಮಾತ್ರ ಪಾವತಿ ಮಾಡಬಹುದಾಗಿದೆ. ದಂಡ ಪಾವತಿಗೆ ಇನ್ನು ಉಳಿದಿರುವುದು ಕೇವಲ ಒಂದು ದಿನ ಮಾತ್ರ. ಅಷ್ಟರೊಳಗೆ ಎಲ್ಲರೂ ಪ್ರಯತ್ನಿಸುವುದರಿಂದ ಆ್ಯಪ್ ಸ್ಪಂದಿಸದಿರಬಹುದು. ಗಡುವಿನೊಳಗೆ ಪಾವತಿ ಮಾಡಲಾಗದಿದ್ದರೆ ಪೂರ್ಣವಾಗಿ ಪಾವತಿಸಬೇಕು. ಹೀಗಾದರೆ ಜನರು ದಂಡ ಪಾವತಿಗೆ ಉದಾಸೀನ ತೋರಬಹುದು. ಹೀಗಾಗಿ ಶೇ. 50 ರ ರಿಯಾಯಿತಿಯೊಂದಿಗೆ ದಂಡ ಪಾವತಿ ಅವಧಿಯನ್ನು ಫೆಬ್ರವರಿ ತಿಂಗಳವರೆಗೂ ವಿಸ್ತರಿಸಿದರೆ ಅನುಕೂಲವಾಗುತ್ತದೆ. ಈ ಬಗ್ಗೆ ಸಂಚಾರಿ ಪೊಲೀಸರು ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಮನವಿ.

–ಚೇತನ್ ಕಾಂತರಾಜು, ಅಧ್ಯಕ್ಷರು, ಜೈ ಭೀಮ್ ಜನಸ್ಪಂದನ ವೇದಿಕೆ, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಬಹುರಾಜ್ಯ ಸಹಕಾರ ರಫ್ತು ಸೊಸೈಟಿ

ಭಾರತದ ಸಹಕಾರಿ ಕ್ಷೇತ್ರವು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ನೀಡುವಂತಹ ಉತ್ಕೃಷ್ಟ ಗುಣಮಟ್ಟದ ನೂರಾರು ಉತ್ಪನ್ನಗಳನ್ನು ಉತ್ಪಾದಿಸುತ್ತಿವೆ. ವಿವಿಧ ಸೇವೆ ಗಳನ್ನು ನೀಡುತ್ತಿವೆ. ಆದರೆ ಇವುಗಳನ್ನು ರಫ್ತು ಮಾಡಲು ಸರಿ ಯಾದ ವ್ಯವಸ್ಥೆಗಳಿಲ್ಲದಿರುವುದು ಸಹಕಾರ ಸಂಘಗಳ ಲಾಭವರ್ಧನೆಗೆ ಅಡ್ಡಿಯಾಗಿದೆ. ದೇಶದ ಸಹಕಾರಿ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಪಾರಂಪರಿಕ ಉತ್ಪನ್ನಗಳನ್ನು ಉತ್ಪಾದಿಸುವ ವಿಪುಲ ಅವಕಾಶಗಳಿವೆ. ಈ ಉತ್ಪನ್ನಗಳಿಗೆ ವಿದೇಶಗಳಲ್ಲಿ ಬೇಡಿಕೆ ಇದ್ದು, ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತವಾದ ಮಾರುಕಟ್ಟೆ ಸೃಷ್ಟಿಸಿದಲ್ಲಿ ಸಹಕಾರ ಕ್ಷೇತ್ರದಿಂದ ಗ್ರಾಮೀಣ ಜನರು ಆರ್ಥಿಕ ಸ್ವಾವಲಂಬನೆ ಹೊಂದುವ ಅವಕಾಶವಿದೆ. ಇದರಿಂದ ಗ್ರಾಮೀಣ ಜನರ ಬದುಕು ಹಸನಾಗಲಿದೆ.

ಸಹಕಾರ ರಫ್ತು ಸೊಸೈಟಿಯ ಸ್ಥಾಪನೆ


ಈ ಉದ್ದೇಶ ಸಾಧನೆಗಾಗಿ ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ದಿ. 11.1.2023ರಂದು ನಡೆದ ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಬಹುರಾಜ್ಯ ಸಹಕಾರ ಸಂಘಗಳ (ಎಂಎಸ್‌ಸಿಎಸ್) ಕಾಯ್ದೆ 2002ರ ಅಡಿ ರಾಷ್ಟ್ರೀಯ ಮಟ್ಟದ ಬಹುರಾಜ್ಯ ಸಹಕಾರ ರಫ್ತು ಸಂಘವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. ಇದಕ್ಕೆ ಸಂಬಂಧಿತ ಸಚಿವಾಲಯಗಳು ವಿಶೇಷವಾಗಿ ವಿದೇಶಾಂಗ ವ್ಯವಹಾರ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಗಳು ತಮ್ಮ ರಫ್ತು ಸಂಬಂಧಿ ನೀತಿಗಳು ಯೋಜನೆಗಳು ಮತ್ತು ಏಜೆನ್ಸಿಗಳ ಮೂಲಕ ಸಹಕಾರಿ ಸಂಸ್ಥೆಗಳು ಮತ್ತು ಸಂಬಂಧಿತ ಘಟಕಗಳು ಉತ್ಪಾದಿಸುವ ಎಲ್ಲಾ ರೀತಿಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳು ಮತ್ತು ಸೇವೆಗಳನ್ನು ರಫ್ತು ಮಾಡಲು ಅವಶ್ಯವಾದ ಬೆಂಬಲ ನೀಡಲಿವೆ.

ಪ್ರಾಸ್ತಾವಿತ ಅಥವಾ ಉದ್ದೇಶಿತ ರಫ್ತು ಸಂಸ್ಕೃತಿಯು ದೇಸೀಯ ಸಹಕಾರ ಸಂಘಗಳ ಸರಕು ಮತ್ತು ಸೇನೆಗಳನ್ನು ಉತ್ತೇಜಿಸುವ ಆಶ್ರಯ ಸಂಸ್ಥೆಯಾಗಿ ಕಾರ್ಯನಿರ್ವಹಿಸು ವುದರೊಂದಿಗೆ ಸಹಕಾರ ವಲಯದ ರಫ್ತಿಗೆ ಒತ್ತು ನೀಡುತ್ತದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಭಾರತೀಯ ಸಹಕಾರಿ ಸಂಸ್ಥೆಗಳ ರಫ್ತು ಸಾಮರ್ಥ್ಯವನ್ನು ಹೊರತಂದು ವೃದ್ಧಿಸಲು ಸಹಾಯ ನೀಡುತ್ತದೆ. ಈ ರಫ್ತು ಸೊಸೈಟಿಯ ಸಹಕಾರಿಗಳಿಗೆ ವಿವಿಧ ರಫ್ತು ಸಂಬಂಧಿತ ಯೋಜನೆಗಳು ಮತ್ತು ಭಾರತ ಸರಕಾರದ ಸಚಿವಾಲಯಗಳ ವಿವಿಧ ನೀತಿಗಳ ಪ್ರಯೋಜನಗಳನ್ನು ಸಂಪೂರ್ಣ ಸರ್ಕಾರಿ ವಿಧಾನದ ಮೂಲಕ ಎಲ್ಲರನ್ನೂ ಒಳಗೊಂಡಿಸಿ ಪಡೆಯಲು ಸಹಾಯ ಮಾಡುತ್ತವೆ.

ನೂತನ ರಫ್ತು ಸೊಸೈಟಿಯು ವಿವಿಧ ಹಂತಗಳಲ್ಲಿರುವ ಸಹಕಾರ ಸಂಘಗಳ ಉತ್ಪನ್ನಗಳ ರಫ್ತನ್ನು ವೃದ್ಧಿಸಿ ಉತ್ಪಾದನೆ ಹೆಚ್ಚಿಸುತ್ತದೆ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ಅವಕಾಶ ನೀಡುತ್ತದೆ. ಸಹಕಾರಿ ಉತ್ಪನ್ನಗಳ ರಫ್ತು ಪ್ರಮಾಣ ಹೆಚ್ಚಿಸುವುದರ ಮೂಲಕ ಮೇಕ್–ಇನ್–ಇಂಡಿಯಾ ಉತ್ತೇಜಿಸುವ ಜತೆಗೆ, ಆತ್ಮ ನಿರ್ಭರ ಭಾರತ ಕಟ್ಟಲು ಸಹಕಾರಿಯಾಗುತ್ತದೆ.

ರಫ್ತು ಸೊಸೈಟಿಯ ಪಾಲು ಬಂಡವಾಳ

ಸಹಕಾರಿ ಕ್ಷೇತ್ರಗಳಲ್ಲಿ ಉತ್ಪಾದನೆಯಾಗುವ ಉತ್ಕೃಷ್ಟ ಗುಣಮಟ್ಟದ ಪಾರಂಪರಿಕ ಉತ್ಪನ್ನಗಳ ರಫ್ತಿಗಾಗಿ ಪ್ರಾರಂಭ ವಾಗಲಿರುವ ಈ ರಫ್ತು ಸಹಕಾರ ಸಂಘದ ಅಧಿಕೃತ ಪಾಲು ಬಂಡವಾಳ ರೂ. 2000 ಕೋಟಿಯಾಗಿರುತ್ತದೆ. ಇದರಲ್ಲಿ ಆರಂಭಿಕ 500 ಕೋಟಿ ರೂ. ಪಾಲು ಪಂಡವಾಳವನ್ನು ಭಾರತದ ಐದು ಬೃಹತ್ ಸಹಕಾರ ಸಂಸ್ಥೆಗಳಾದ ಇಫ್ಕೋ (IFFCO), ಕ್ರಿಬ್ಕೋ (KRIBHCO), ರಾಷ್ಟ್ರೀಯ ಕೃಷಿ ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್



ನೂತನ ರಫ್ತು ಸೊಸೈಟಿಯು ವಿವಿಧ ಹಂತಗಳಲ್ಲಿರುವ ಸಹಕಾರ ಸಂಘಗಳ ಉತ್ಪನ್ನಗಳ ರಫ್ತನ್ನು ವೃದ್ಧಿಸಿ ಉತ್ಪಾದನೆ ಹೆಚ್ಚಿಸುತ್ತದೆ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ಅವಕಾಶ ನೀಡುತ್ತದೆ. ಸಹಕಾರಿ ಉತ್ಪನ್ನಗಳ ರಫ್ತು ಪ್ರಮಾಣ ಹೆಚ್ಚಿಸುವುದರ ಮೂಲಕ ಮೇಕ್–ಇನ್–ಇಂಡಿಯಾ ಉತ್ತೇಜಿಸುವ ಜತೆಗೆ, ಆತ್ಮ ನಿರ್ಭರ ಭಾರತ ಕಟ್ಟಲು ಸಹಕಾರಿಯಾಗುತ್ತದೆ.

(NAfed), ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಫೆಡರೇಷನ್ (GCMMF) ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿ (NCDS)ಗಳು ತಲಾ 100 ಕೋಟಿ ರೂ.ನಂತೆ ನೀಡಲಿವೆ. ನೂತನ ರಫ್ತು ಸಹಕಾರಿ ಸಂಸ್ಥೆಯ ಕೇಂದ್ರ ಕಚೇರಿ ದೆಹಲಿಯಲ್ಲಿರುವುದು. ಕೇಂದ್ರ ಸರಕಾರದ ಮಸೂದೆಯಿಂದ ಅಥವಾ ರಾಜ್ಯ ಸರ್ಕಾರಗಳ ಕಾನೂನಿನಿಂದ ಸ್ಥಾಪಿತವಾದ ಸಹಕಾರ ಸಂಘಗಳು ತಮ್ಮ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಕಲ್ಪಿಸಲು ಆ ಮೂಲಕ ಸಹಕಾರ ಸಂಘದ ಆದಾಯ ಹೆಚ್ಚಿಸಲು ಈ ರಫ್ತು ಸಂಸ್ಥೆ ಸೊಸೈಟಿಯ ಸದಸ್ಯರಾಗಬಹುದು. ಈ ರಫ್ತು ಸಂಸ್ಥೆಯು ದೇಶದ ಸಹಕಾರ ಸಂಘಗಳ ಉತ್ಪನ್ನಗಳ ರಫ್ತಿಗೆ ಬೇಕಾದ ಸಾಂಸ್ಥಿಕ ಬೆಂಬಲ, ಸಾಗಾಟ ವ್ಯವಸ್ಥೆ, ತಾಂತ್ರಿಕ ಮಾಹಿತಿ ಮತ್ತು ತರಬೇತಿ ನೀಡುತ್ತದೆ. ಮಾತ್ರವಲ್ಲ ಸಂಘಗಳ ಉತ್ಪನ್ನಗಳ ಖರೀದಿ ಕಾಪಾಡುವಿಕೆ – ಸಂಸ್ಕರಣೆ, ಮಾರುಕಟ್ಟೆ ಬ್ರಾಂಡಿಂಗ್, ಲೇಬಲಿಂಗ್, ಪ್ಯಾಕೇಜಿಂಗ್, ಪ್ರಮಾಣೀಕರಣ, ಸಂಶೋಧನೆ, ಸಹಿತ ಸಹಕಾರ ಸಂಘಗಳ ಉತ್ಪನ್ನಗಳ ರಫ್ತಿಗೆ ಎಲ್ಲಾ ರೀತಿಯ ಪ್ರೋತ್ಸಾಹ, ಬೆಂಬಲ ನೀಡುತ್ತದೆ. ಈ ಉದ್ದೇಶಗಳ ಸಾಧನೆಗಾಗಿ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು ರಫ್ತು ಸೊಸೈಟಿಯೊಂದಿಗೆ, ಸಾವಯವ ಉತ್ಪನ್ನಗಳು, ಬೀಜ ಗಳಿಗಾಗಿ (Seeds) ಇನ್ನೆರಡು ಬಹುರಾಜ್ಯ ಸೊಸೈಟಿಗಳನ್ನು ಸ್ಥಾಪಿಸಲು ಅನುಮೋದನೆ ನೀಡಿತು. ಈ ರೀತಿ ರಾಷ್ಟ್ರೀಯ ಸ್ತರದ ಸಹಕಾರಿ ಸಾವಯವ ಸೊಸೈಟಿ ಮತ್ತು ಸಹಕಾರಿ ಬೀಜ (Seeds) ಸೊಸೈಟಿಗಳನ್ನು ಸ್ಥಾಪಿಸಲು ಬಹುರಾಜ್ಯ ಸಹಕಾರಿ ಸೊಸೈಟಿ ಕಾಯ್ದೆ –2002 ರನ್ವಯ ಪರವಾನಗಿ ನೀಡಲಾಗುವುದು.

ಸಹಕಾರ ಸಂಘಗಳ ಸಂಖ್ಯೆ ಮತ್ತು ಸಾಧನೆ

ಪ್ರಸ್ತುತ ದೇಶದಲ್ಲಿ 854000 ನೋಂದಾಯಿತ ಸಹಕಾರ ಸಂಘಗಳಿದ್ದು, ಇವುಗಳಲ್ಲಿ 290 ಮಿಲಿಯನ್ (29 ಕೋಟಿ) ಸದಸ್ಯರಿದ್ದಾರೆ. ಸಾಮಾನ್ಯವಾಗಿ ಸಹಕಾರಗಳಲ್ಲಿ ಮಧ್ಯಮ, ಕೆಳ ಮಧ್ಯಮ ಮತ್ತು ಕೆಳ ಆದಾಯ ವರ್ಗದವರು ಸದಸ್ಯರಾಗಿದ್ದರು. ದೇಶದ ಹೆಚ್ಚಿನ ಎಲ್ಲಾ ಕ್ಷೇತ್ರಗಳಿಗೆ ಸಹಕಾರ ಚಳುವಳಿ ವ್ಯಾಪಿಸಿದೆ. ಸಹಕಾರ ಕ್ಷೇತ್ರದಲ್ಲಿ ಆಹಾರ ಧಾನ್ಯಗಳು, ಎಣ್ಣೆ ಬೀಜಗಳು, ಮೊದಲಾದ ಕೃಷಿ ಉತ್ಪನ್ನಗಳಿವೆ. ತೋಟ ಗಾರಿಕೆಯಲ್ಲಿ ಬರುವ ಹಣ್ಣುಗಳು, ತರಕಾರಿಗಳು, ಹೂಗಳು, ಸುಗಂಧ ದ್ರವ್ಯಗಳು, ಸಹಕಾರ ಕ್ಷೇತ್ರದಲ್ಲಿವೆ. ಅದೇ ರೀತಿ ಹೈನುಗಾರಿಕೆ, ಪಶು ಸಂಗೋಪನೆ, ಪೌಲ್ಟ್ರಿ, ಮೀನುಗಾರಿಕೆ, ಸಕ್ಕರೆ, ಸಾಂಬಾರ ಜಿನಸುಗಳು, ಸಾವಯವ ಉತ್ಪನ್ನಗಳು, ಸಾಮಾನ್ಯ ಅರಣ್ಯ ಉತ್ಪನ್ನಗಳು, ರಸಗೊಬ್ಬರಗಳು, ಸಂಸ್ಕರಿತ ಆಹಾರ ತಿನಿಸುಗಳು, ಚರ್ಮದ ಉತ್ಪನ್ನಗಳು ಸಹಕಾರ ಕ್ಷೇತ್ರದಲ್ಲಿವೆ. ವಿಶೇಷವಾಗಿ ಸಹಕಾರಿ ವಲಯವು ಶೇ. 28.8 ರಷ್ಟು ರಸಗೊಬ್ಬರ ಉತ್ಪಾದಿಸುತ್ತಿದ್ದು, ಇವುಗಳ ವಿತರಣೆ ಯಲ್ಲೂ ಶೇ. 35 ಪಾಲು ಹೊಂದಿದೆ. ಸಕ್ಕರೆ ಉತ್ಪಾದನೆಯಲ್ಲಿ ಶೇ. 30.6 ರಷ್ಟು ಹಾಗೂ ಶೇ. 17.5 ರಷ್ಟು ಹೆಚ್ಚುವರಿ ಉತ್ಪಾದನೆ ಯಾಗುತ್ತಿರುವ ಡೈರಿ ಉತ್ಪನ್ನಗಳ ಮೌಲ್ಯವನ್ನು ದೇಶದ ಆರ್ಥಿಕತೆಗೆ ನೀಡುತ್ತಿದೆ. ಈ ಎಲ್ಲಾ ಉತ್ಪನ್ನಗಳಿಗೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇದ್ದರೂ ನಿರ್ಯಾತಕ್ಕೆ ಅವಕಾಶ ನೀಡುವ ಸಹಕಾರ ಆಧಾರಿತ ರಫ್ತು ಸಂಸ್ಥೆಯು ಇಲ್ಲದ ಕಾರಣ ಇವುಗಳ ಬೆಳವಣಿಗೆ ಕುಂಠಿತಗೊಂಡಿದ್ದು ಪ್ರಾಸ್ತಾವಿತ ರಫ್ತು ಸಹಕಾರ ಸಂಸ್ಥೆ ಈ ಕೊರತೆಗಳನ್ನು ನಿವಾರಿಸಲಿದೆ. ತಮ್ಮ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಹೊಂದಲು ಆಸಕ್ತಿ ಇರುವ ದೇಸೀಯ ಸಹಕಾರ ಸಂಘಗಳು ಹೊಸದಾಗಿ ಆರಂಭವಾಗುತ್ತಿರುವ ಸಹಕಾರ ರಫ್ತು ಸಂಸ್ಥೆಯೊಂದಿಗೆ ನೋಂದಾಯಿಸಿ ಸದಸ್ಯತ್ವ ಪಡೆಯಬೇಕು.

ಇತ್ತೀಚಿನ ಮಾಹಿತಿಯಂತೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೆಲವು ಉತ್ಪನ್ನಗಳು ನೂತನ ಸಂಸ್ಥೆಯಿಂದ ರಫ್ತಾಗುವ ಸಾಧ್ಯತೆ ಇದೆ. ಮುಂದಿನ ಎರಡು ಅಥವಾ ಮೂರು ವರ್ಷಗಳಲ್ಲಿ ಈ ರಫ್ತು ಸಹಕಾರ ಸಂಸ್ಥೆಯು ಸಹಕಾರ ಕ್ಷೇತ್ರದಲ್ಲಿ ಒಂದು ಬೃಹತ್ ನಿರ್ಯಾತ ಸಂಸ್ಥೆಯಾಗಿ ಬೆಳೆಯಲಿದೆ. ಬೃಹತ್ ಸಹಕಾರಿ ಸಂಘಟನೆಗಳಾದ ಅಮೂಲ್ ಮತ್ತು ಇಫ್ಕೋ ಪ್ರಸ್ತುತ ಬ್ರೆಜಿಲ್, ಫಿಲಿಪೈನ್ಸ್, ಕೆನ್ಯಾ, ಕೆನಡಾ ಮೊದಲಾದ ದೇಶಗಳಿಗೆ ರಫ್ತು ಮಾಡುತ್ತಿವೆ. ಈ ಸಂಸ್ಥೆಗಳು ಇನ್ನೂ ಹೆಚ್ಚಿನ ದೇಶಗಳಿಗೆ ರಫ್ತು ಮಾಡಲು ರಫ್ತು ಸಹಕಾರ ಸಂಸ್ಥೆ ಸಹಕಾರ ನೀಡಲಿದೆ. ಇಫ್ಕೋದ ವಿಶೇಷ ಉತ್ಪನ್ನವಾದ ನ್ಯಾನೋ ರಸಗೊಬ್ಬರ ಹಾಗೂ ಅಮೂಲ್ ಡೈರಿ ಉತ್ಪನ್ನಗಳನ್ನು ಪ್ರಪ್ರಥಮವಾಗಿ ರಫ್ತು ಸಹಕಾರ ಸಂಸ್ಥೆಯಿಂದ ರಫ್ತು ಮಾಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕರ್ನಾಟಕದ ಸಹಕಾರ ವಲಯದ ಪ್ರತಿಷ್ಠಿತ ಸಂಸ್ಥೆಗಳಾದ ಕ್ಯಾಂಪ್ಕೋ, ಕೆ.ಎಂ.ಎಫ್ ಹಾಗೂ ಇನ್ನಿತರ ಸಂಘಗಳು ನೂತನ ರಫ್ತು ಸಹಕಾರ ಸಂಸ್ಥೆಯ ಮೂಲಕ ತಮ್ಮ ಉತ್ಪನ್ನಗಳಿಗೆ ವಿದೇಶಗಳಲ್ಲಿ ಬೇಡಿಕೆ ಕುದುರಿಸುವ ಅವಕಾಶವಿದೆ. ಈ ದೃಷ್ಟಿಯಿಂದ ಸಹಕಾರಿ ಸಂಸ್ಥೆಗಳು ಜಾಗತಿಕವಾಗಿ ಯೋಚಿಸಿ (Think globally) ಸ್ಥಳೀಯವಾಗಿ ಕಾರ್ಯನಿರ್ವಹಿಸಿ (Actlocally) ಆರ್ಥಿಕವಾಗಿ ಸದೃಢವಾಗಿಸಲು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರವು ನೂತನ ರಫ್ತು ಸಹಕಾರ ಸಂಸ್ಥೆ ಸ್ಥಾಪಿಸಲು ಅನುಮೋದನೆ ನೀಡಿದೆ.

ತ್ರಿಪುರಾಂತಕರದ್ದು ಬಹುಮುಖ ಪ್ರತಿಭೆ



'ಮೈಸೂರು ಮಿತ್ರ' ಬಳಗದ, ಓದುಗರ ಮೆಚ್ಚಿನ ಅಂಕಣಕಾರರಾದ ಜಿ.ಎಲ್. ತ್ರಿಪುರಾಂತಕ ಅವರು ಅಲ್ಪ ವಿರಾಮದ ನಂತರ ಮತ್ತೆ ಮರಳಿದ್ದಾರೆ. ಇನ್ನು ಮುಂದೆ ಹೊಸ ಅಂಕಣ 'ಬೇರು' ಮೂಲಕ 'ಮಿತ್ರ'ನ ಓದುಗರ ಬೆರಗಾಗಿಸಲಿದ್ದಾರೆ. ಇವರ ಅಂಕಣ ಮೊದಲಿನಂತೆಯೇ ಪ್ರತೀ ಸೋಮವಾರ ಪ್ರಕಟವಾಗಲಿದೆ.

ಈ ಹಿಂದೆಯೂ 'ಮೈಸೂರು ಮಿತ್ರ'ನಲ್ಲಿ 'ಮೈತ್ರಿ', 'ಲಹರಿ' ಹಾಗೂ 'ಸುಪ್ರಭೆ' ಅಂಕಣಗಳ ಮೂಲಕ ಇವರ ನಾನಾ ವಿಚಾರಮುತ್ತುಳ್ಳ 250ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಇಂತಹ ಬರಹಗಳ ಸಂಕಲನ 'ಬದುಕೊಂದು ಯಾತ್ರೆ' 2018ರಲ್ಲಿ ಬಿಡುಗಡೆಯಾಗಿ ಪುಸ್ತಕ ಪ್ರೇಮಿಗಳ ಹೃದಯ ಮುಟ್ಟಿದೆ. ಇವರ ಮೂರು ನಾಟಕಗಳ 'ರಂಗೋತ್ರಿ' ಕೃತಿ 2019ರಲ್ಲಿ ಬಿಡುಗಡೆಯಾಗಿದ್ದು, 'ದ ಪೇಯಿಂಗ್ ಗೆಸ್ಟ್' ನಾಟಕವನ್ನು ಮೈಸೂರು ಆಕಾಶವಾಣಿಗೆ ಅಳವಡಿಸಿ, ರಾಜ್ಯದ ಎಲ್ಲಾ ಬಾನುಲಿ ಕೇಂದ್ರಗಳಲ್ಲಿ ಪ್ರಸಾರವಾಗಿದೆ. ಅಲ್ಲದೆ ಈ ನಾಟಕ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನಕ್ಕೆ ಭಾಜನವಾಗಿದೆ.

ಜಿ.ಎಲ್.ತ್ರಿಪುರಾಂತಕ 'ಅಪ್ರಮೇಯ' ಅಂಕಿತನಾಮದಲ್ಲಿ 400ಕ್ಕೂ ಹೆಚ್ಚು ಚೌಪದಿಗಳ ರಚಿಸಿದ್ದು, ಅದರಲ್ಲಿ 101 ಚೌಪದಿಗಳನ್ನು 'ಅಪ್ರಮೇಯ ವಾಣಿ' ಪುಸ್ತಕದ ಮೂಲಕ 2021ರಲ್ಲಿ ಓದುಗರ ಮಡಿಲಿಗಿಟ್ಟಿದ್ದಾರೆ. ಇನ್ನು ಕಥಾ ಸಂಕಲನ 'ನಾಯಿ ಕುಳ' ಬಿಡುಗಡೆಗೆ ಸಿದ್ಧವಾಗುತ್ತಿದೆ. ಇವರು ಮೈಸೂರು ಆಕಾಶವಾಣಿಯಲ್ಲಿ ಹಲವು ಚಿಂತನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ದೂರದರ್ಶನ, ಚಂದನದಲ್ಲಿ ನೇರ ಪ್ರಸಾರಗೊಂಡ ಮೈಸೂರು ದಸರಾ (2021) ಜಂಬೂ ಸವಾರಿ ವೀಕ್ಷಕ ವಿವರಣೆ ನೀಡಿದ್ದಾರೆ. ವಿಶೇಷ ಉಪನ್ಯಾಸಕರಾಗಿ, ವ್ಯಕ್ತಿತ್ವ ವಿಕಸನ ತರಬೇತುದಾರರಾಗಿ, ಇಂಗ್ಲಿಷ್ ಸಂಪನ್ಮೂಲ ವ್ಯಕ್ತಿಯಾಗಿ ಹತ್ತಾರು ಪುನಶ್ಚೇತನ ಕಾರ್ಯಾಗಾರಗಳಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಮೊಬೈಲ್ ಕ್ಯಾಮರಾದಲ್ಲೇ ಅತ್ಯುತ್ತಮ ಚಿತ್ರಗಳನ್ನು ಸೆರೆ ಹಿಡಿಯುವ ಹವ್ಯಾಸವಿದ್ದು, ಕಳೆದ ವರ್ಷ ರಾಜ್ಯದಲ್ಲೇ ಮೊದಲ ಬಾರಿಗೆ 'ಮೊಬೈಲ್ ಛಾಯಾಚಿತ್ರ' ಪ್ರದರ್ಶನ ಏರ್ಪಡಿಸಿ, ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಬಹುಮುಖ ಪ್ರತಿಭೆ ಜಿ.ಎಲ್. ತ್ರಿಪುರಾಂತಕ ಎಂ.ಎ, ಬಿ.ಇಡಿ ಹಾಗೂ ಎಂಫಿಲ್ ಪದವೀಧರರಾಗಿದ್ದು ಮೈಸೂರಿನ ಸರ್ದಾರ್ ವಲ್ಲಭ ಬಾಯಿ ಪಟೇಲ್ ನಗರದಲ್ಲಿ ವಾಸವಿದ್ದಾರೆ. ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ, ನಂತರ ಕೊಳ್ಳೇಗಾಲದ ವಾಸವಿ ಪಪೂ. ಕಾಲೇಜು ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದ್ದಾರೆ. 16 ವರ್ಷ ಗಳಿಂದ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಯಾಗಿ 'ಕಾರ್ಯ ನಿರ್ವಹಿಸುವುದರ ಜೊತೆಗೆ 4 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ವಸತಿ ಶಾಲೆ ಮೇಲ್ವಿಚಾರಣೆಯನ್ನೂ ನಿಭಾಯಿಸುತ್ತಿದ್ದಾರೆ.

ಬಿಬಿಸಿ ಪ್ರಸಾರಕ್ಕೆ ನಿಷೇಧ ಕೋರಿದ್ದ ಅರ್ಜಿ ಸುಪ್ರೀಂಕೋರ್ಟ್‌ನಿಂದ ತಿರಸ್ಕೃತ

ನವದೆಹಲಿ, ಫೆ.10– ಪ್ರಧಾನಿ ನರೇಂದ್ರ ಮೋದಿ ಕುರಿತ ಬಿಬಿಸಿ ಸಾಕ್ಷ್ಯಚಿತ್ರ ಪ್ರಸಾರ ಮಾಡಿದ್ದ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಪ್ರಸಾರವನ್ನು ಭಾರತದಲ್ಲಿ ನಿಷೇಧಿಸುವಂತೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾ ಮಾಡಿದೆ.

2002ರ ಗುಜರಾತ್‌ಗೆ ಸಂಬಂಧಿಸಿದ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಎಂಬ ಶೀರ್ಷಿಕೆಯ ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಮತ್ತು ಬಿಬಿಸಿ ಇಂಡಿಯಾವನ್ನು ಭಾರತೀಯ ಭೂಪ್ರದೇಶದಿಂದ ಕಾರ್ಯನಿರ್ವಹಿಸದಂತೆ ಸಂಪೂರ್ಣ ನಿಷೇಧಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

2002ರ ಗುಜರಾತ್ ಗಲಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯ ಮೇಲೆ ದಾಳಿ ಮಾಡುವ ಬ್ರಿಟನ್‌ನ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಶನ್‌ನ (ಬಿಬಿಸಿ) ಎರಡು ಭಾಗಗಳ ಸರಣಿಯು ದೇಶದಲ್ಲಿ ತೀವ್ರ ವಿವಾದ ಹುಟ್ಟುಹಾಕಿತ್ತು. ಈ ವಿವಾದಿತ ಸಾಕ್ಷ್ಯಚಿತ್ರವನ್ನು ದೇಶಾದ್ಯಂತ ಹಲವು ಆಯ್ದ ವೇದಿಕೆಗಳಲ್ಲಿ ಪ್ರಸಾರ ಮಾಡಲಾಗಿತ್ತು.


ಬಾರ್ಡರ್–ಗವಾಸ್ಕರ್ ಟ್ರೋಫಿ

ಮೊದಲ ಟೆಸ್ಟ್‌ನ 2ನೇ ದಿನದಾಟ ಅಂತ್ಯ; ಭಾರತಕ್ಕೆ ಮುನ್ನಡೆ

ನಾಗಪುರ, ಫೆ.10– ಬಾರ್ಡರ್–ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 2ನೇ ದಿನದಾಟ ಮುಕ್ತಾಯವಾಗಿದ್ದು, ಭಾರತ 144 ರನ್ ಮುನ್ನಡೆ ಸಾಧಿಸಿದೆ.

ಜಮ್ತಾದಲ್ಲಿರುವ ವಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಮೊದಲ ಇನ್ನಿಂಗ್ಸ್‌ನ ಎರಡನೇ ದಿನದಾಟ ಅಂತ್ಯಕ್ಕೆ 114 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 321 ರನ್ ಗಳಿಸಿದೆ. ಇದರೊಂದಿಗೆ ಆಸ್ಟ್ರೇಲಿಯಾ ವಿರುದ್ಧ ಮೊದಲ ಇನ್ನಿಂಗ್ಸ್‌ನಲ್ಲಿ 144 ರನ್ ಅಂತರದಿಂದ ಮುನ್ನಡೆ ಸಾಧಿಸಿದೆ.

ನಾಯಕ ರೋಹಿತ್ ಶರ್ಮಾ 120 ರನ್ ಗಳಿಸಿ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಒಂಬತ್ತನೇ ಶತಕ ಸಾಧನೆ ಮಾಡಿದರು. ಇತ್ತ ರವೀಂದ್ರ ಜಡೇಜ ಔಟಾಗದೆ 66, ಅಕ್ಷರ್ ಪಟೇಲ್ ಔಟಾಗದೆ 52 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಆಸಿಸ್ ಪರ ಟಾಡ್ ಮಾರ್ಫಿ 5 ವಿಕೆಟ್ ಪಡೆದು ಮಿಂಚಿದರೆ, ನಾಥನ್ ಲಯಾನ್ ಮತ್ತು



ಪ್ಯಾಟ್ ಕಮಿನ್ಸ್ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮೊದಲು ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಉತ್ತಮ ಆರಂಭ ದೊರೆಯಿತು. ನಾಯಕ ರೋಹಿತ್ ಶರ್ಮಾ ಮತ್ತು ಕೆಎಲ್ ರಾಹುಲ್ ಜೋಡಿ 76 ರನ್‌ಗಳ ಜೊತೆಯಾಟವಾಡಿತು. ಈ ಹಂತದಲ್ಲಿ 20 ರನ್ ಗಳಿಸಿದ್ದ ರಾಹುಲ್ ಮರ್ಫಿ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಟೆಸ್ಟ್ ಸ್ಪೆಷಲಿಸ್ಟ್ ಚೇತೇಶ್ವರ ಪೂಜಾರ (7) ಹಾಗೂ ಭಾರತದ ರನ್ ಮೆಶಿನ್ ವಿರಾಟ್ ಕೊಹ್ಲಿ (12) ಕೂಡ ಬ್ಯಾಟಿಂಗ್ ವೈಫಲ್ಯ ಅನುಭವಿಸಿ ಬೇಗನೆ ವಿಕೆಟ್ ಒಪ್ಪಿಸಿದರು. ಈ ನಡುವೆ ಮತ್ತೊಂದು ತುದಿಯಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ನಾಯಕ ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ನಲ್ಲಿ ಒಂಬತ್ತನೇ ಶತಕ ಸಾಧನೆ ಮಾಡಿದರು.

ಇದರೊಂದಿಗೆ ಎಲ್ಲ ಮಾದರಿಯ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಟೀಮ್ ಇಂಡಿಯಾದ ಮೊದಲ ಕಪ್ತಾನ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ನಾಗಪುರದ ವಿದರ್ಭ ಕ್ರಿಕೆಟ್ ಸಂಸ್ಥೆಯ ಸ್ಟೇಡಿಯಂನಲ್ಲಿ ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ ರೋಹಿತ್ ಅಮೋಘ ಶತಕ ಗಳಿಸಿದರು. ಒಂದೆಡೆ ವಿಕೆಟ್ ಪತನಗೊಳ್ಳುತ್ತಿದ್ದರೂ ವಿಕೆಟ್‌ನ ಮತ್ತೊಂದು ತುದಿಯಿಂದ ಕಲಾತ್ಮಕ ಇನ್ನಿಂಗ್ಸ್ ಕಟ್ಟಿದ ರೋಹಿತ್, ಭಾರತವನ್ನು ಅಪಾಯದಿಂದ ಪಾರು ಮಾಡಿದರು.

ಚೊಚ್ಚಲ ಟೆಸ್ಟ್ ಪಂದ್ಯ ಆಡುತ್ತಿರುವ ಸೂರ್ಯಕುಮಾರ್ ಯಾದವ್ 8 ರನ್ ಗಳಿಸಿ ಔಟ್ ಆಗಿ ನಿರಾಸೆ ಅನುಭವಿಸಿದರು. ಆರ್. ಅಶ್ವಿನ್ 23 ಹಾಗೂ ಕೆ.ಎಲ್. ರಾಹುಲ್ 20 ರನ್ ಗಳಿಸಿ ಔಟ್ ಆದರು.

ಮರ್ಫಿಗೆ ಐದು ವಿಕೆಟ್: ಪದಾರ್ಪಣೆ ಪಂದ್ಯದಲ್ಲೇ ಐದು ವಿಕೆಟ್ ಕಬಳಿಸಿರುವ ಆಸ್ಟ್ರೇಲಿಯಾದ ಸ್ಪಿನ್ನರ್ ಟಾಡ್ ಮರ್ಫಿ, ಭಾರತವನ್ನು ಕಾಡಿದರು. ಗುರುವಾರ ಸ್ಪಿನ್ ದಾಳಿಗೆ ತತ್ತರಿಸಿದ್ದ ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ 63.5 ಓವರ್‌ಗಳಲ್ಲಿ 177 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತ್ತು. ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಐದು ವಿಕೆಟ್ ಗೊಂಚಲು ಗಳಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ

ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. PUC Pass / Fail, Degree Pass / Fail, Fixed Salary + Incentive, Age - below 33 years, Address: Nakshe Architecture, Near Nandi Circle, Dattagalli, Date: 12/02/2023, Time: 11pm to 5 pm, Contact No.

9686516666

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs

Doorstep Service

Mob: 9886226672

SITE FOR SALE

40x60 KHB Site, West Face, Hootagalli for Sale

9448054390

ಮಾಂಗಲ್ಯಂ ವಧು ವರರ ಸಂಗಮ

ಕುರುಬ, ನಾಯಕ, ತೆಲುಗು, ಬಣಜಿಗ, ತೆಲುಗು ಆರ್ಯ ವೈಶ್ಯ, ಕುಂಬಾರ, ಲಿಂಗಾಯತ ವಧುವರರ ಮಾಹಿತಿಗಾಗಿ ಸಂಪರ್ಕಿಸಿ, ವಿಧುರ, ವಿಧವೆಯರು, ಎರಡನೇ ವಿವಾಹ ಬಯಸುವವರು ಸಂಪರ್ಕಿಸಬಹುದು.

Mob: 82965 14367

ಬೇಕಾಗಿದ್ದಾರೆ

ಹೋಟೆಲ್ ಕೆಲಸಕ್ಕೆ ಕುಕ್ ಬೇಕಾಗಿದ್ದಾರೆ. ತಂದೂರಿ ಹಾಗೂ ಚೈನೀಸ್ ಕುಕ್

ALROUND COOK

6366725494, 9901618261

Converted (Commercial) LAND FOR SALE

Available at Sathyamangala Road, Chamarajanagara Town, near big tank, behind Horticulture & T.A.P.C.M.S. Office, 2.19 acres, behind Galipura Road, suitable for warehouse, school, college, software park, theatre, restaurant, mall, apartments etc. Interested may contact:

9845031567, 9740712347, 9886289808. Brokers excuse

ಜಮೀನು ಮಾರಾಟಕ್ಕಿದೆ

1 ಎಕರೆ 8 ಗುಂಟೆ ವಿಸ್ತೀರ್ಣ, ನಂಜನಗೂಡು ಜುಬಿಲಂಟ್ ಕಾರ್ಖಾನೆ ಇಂದ 1 ಕಿ.ಮೀ ಕಲ್ಲಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನದಿಗೆ ಹೊಂದಿಕೊಂಡಂತೆ ರೆಸಾರ್ಟ್ ಅಥವಾ ಫಾರ್ಮ್ ಹೌಸ್‌ಗೆ ಸೂಕ್ತವಾಗಿದೆ. ಸಂಪರ್ಕಿಸಿ:

9945385710

ಸೈಟು ಮಾರಾಟಕ್ಕಿದೆ

40x60

ದಕ್ಷಿಣ ದಿಕ್ಕು, ವಿಶಾಖನಗರ, ಆರ್.ಟಿ.ನಗರದ ಹತ್ತಿರ, ಮೈಸೂರು. ಸಂಪರ್ಕಿಸಿ:

8050245332

ಮುಡಾ ನಿವೇಶನ ಮಾರಾಟಕ್ಕಿದೆ

30x40 ಪೂರ್ವ ಮತ್ತು ಉತ್ತರ ದಿಕ್ಕಿನ ಕಾರ್ನರ್ ನಿವೇಶನ, ಸ್ಯಾಂಡಲ್‌ವುಡ್ ಲೇ ಔಟ್, ಶ್ರೀರಾಂಪುರ ರಿಂಗ್ ರಸ್ತೆಯ ಮಾರಮ್ಮನ ದೇವಸ್ಥಾನದ ಹತ್ತಿರ

9008739669

ತಕ್ಷಣ ಬೇಕಾಗಿದ್ದಾರೆ

ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.

9740324112 / 9035269781
0821-4852002 / 2303459

ಸೋಲಾರ್ ವಾಟರ್ ಹೀಟರ್ Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ

Vinaykrishna

9611648636

ನಿರ್ಮಲ ಸರ್ವೀಸ್

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಮೆಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು, ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.

8453408502 / 9108100117

ನಿವೇಶನ ಮಾರಾಟಕ್ಕಿದೆ

ಹುಣಸೂರು ತಾಲ್ಲೂಕು, ಬಿಳಿಕೆರೆ ಟೌನ್‌ನಲ್ಲಿ 0.5 ಗುಂಟೆ ಅನ್ಯಕ್ರಾಂತ ಆಗಿ 9 & 11ಎ ನಿವೇಶನ ಮಾರಾಟಕ್ಕಿದೆ.

9448889127

ಟೆಲಿಕಾಮ್ ಲೇಔಟ್ 30x40 ಸೈಟು N/F @ Rs. 25 ಲಕ್ಷ

ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು

9538583377

HOUSE FOR RENT

ಸಸ್ಯಹಾರಿಗಳಿಗೆ ಮಾತ್ರ, ಶ್ರೀರಾಂಪುರ 2ನೇ ಹಂತ, 2 ಕೊಠಡಿ, 1ನೇ ಮಹಡಿ (With Solar) ಸಂಪರ್ಕಿಸಿ

9663403191
8073062549

ಸೈಟುಗಳು ಮಾರಾಟಕ್ಕಿವೆ

ಶ್ರೀರಾಂಪುರ ರಿಂಗ್ ರೋಡ್, ಶ್ರೀನಗರ ಹಿಂಭಾಗ ಮೈಸೂರು

8050345574

ತಕ್ಷಣ ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ

9686667762
9986731199

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

(30X40) SALE

@ "Olive Enclave" Mys - B'lore Highway, 3 km from Ring Road, 25 Lakhs

9538839926

ತ್ವರೆ ಮಾಡಿ

ನಿಮ್ಮ ಕನಸಿನ ಮನೆಯನ್ನು ಬುಕ್ ಮಾಡಿ

20X30 45 ಲಕ್ಷ*
30X40 75 ಲಕ್ಷ*
30X50 95 ಲಕ್ಷ*

ಮೈಸೂರಿನ ಪ್ರಮುಖ ಸ್ಥಳಗಳಲ್ಲಿ

98800 65122 / 77956 09173

ಜಮೀನುಗಳು ಮಾರಾಟಕ್ಕಿವೆ

ಮೈಸೂರು ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಮುಡಾ ಮತ್ತು ಡಿ.ಸಿ. ಕನ್ವೆರ್ಷನ್ ನಿವೇಶನ ಮಾಡಲು ಮತ್ತು ತೋಟ ಮಾಡಲು ಒಳ್ಳೆಯ ಜಮೀನುಗಳು ಮಾರಾಟಕ್ಕಿವೆ.

9611320189

ಒಕ್ಕಲಿಗ ವಧು ವರರಿಗಾಗಿ ಇಂದೇ ಸಂಪರ್ಕಿಸಿ

ಒಕ್ಕಲಿಗ ಸಂಘ (ರಿ), ಮೈಸೂರು ಪೂರ್ವ ವಲಯ, ನಂ.481, ವಿನಯ ಮಾರ್ಗ, ಗಣಪತಿ ದೇವಸ್ಥಾನದ ಎದುರು, ಮೊದಲನೇ ಮಹಡಿ, ಸಿದ್ಧಾರ್ಥನಗರ, ಮೈಸೂರು – 11. ರಜಾದಿನ: ಮಂಗಳವಾರ, ಬೆಳಿಗ್ಗೆ : 10 ರಿಂದ 1 ಹಾಗೂ 4 ರಿಂದ 6.30, ಭಾನುವಾರ 10 ರಿಂದ 1 ರವರೆಗೆ ಮಾತ್ರ

9986585954 / 9845585008

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer

ಪಂಡಿತ್ ಸಂತೋಷ್. 9741250896

ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

Sudarshan Saur

SOLAR WATER HEATER



ATTRACTIVE OFFER

ಸೇಲ್ಸ್&ಸರ್ವೀಸ್

10 ವರ್ಷಗಳ ಗ್ಯಾರಂಟಿ

Bajaj Finserv Available

SUNZONE SOLAR SYSTEM
Vishwamanava Double Road, Kuvempunagar, Mysuru

9845175443

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: 9731839596

ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

HOUSE FOR SALE

30x40 Duplex, 4BHK, Vijayanagar 4th Stage, 2nd Phase, Near Marimallappa School.

9342289695 / 9342593154

ಸಂಜೀವಿನಿ ಆಯುರ್ವೇದ

ಈ ಅದ್ಭುತ ಮ್ಯಾಗ್ನೇಟಿಕ್ ಬೆಡ್ ಉಪಯೋಗಿಸುವುದರಿಂದ ಮಂಡಿನೋವು, ಸಕ್ಕರೆ ಕಾಯಿಲೆ, ಬಿಪಿ, ಹೃದಯದ ಸಮಸ್ಯೆಗಳು ಮತ್ತು 200 ಕ್ಕೂ ಹೆಚ್ಚು ಕಾಯಿಲೆಗಳನ್ನು ತಡೆಗಟ್ಟಬಹುದು ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ ಇಂದೇ ಸಂಪರ್ಕಿಸಿ:

9449408551 / 6361740552

ಬಾಡಿಗೆಗೆ ಇದೆ

800 ಚ.ಅಡಿ. ಹೋಟೆಲ್ ನಡೆಸಲು ಯೋಗ್ಯವಾದ ಸ್ಥಳ. ಹಿನಕಲ್, ಮೈಸೂರು, ಹುಣಸೂರು ಮುಖ್ಯ ರಸ್ತೆ.

Mob: 9844576436

ಗಣಪತಿ ದೇವಸ್ಥಾನದ ಎದುರು

CHANGE OF NAME

This is to declare that, I, Fathima Siddika, aged about 42 years (correct date of birth 1-1-1981) resident of #712, Kere Road, K.N. Pura Extension, Mysore-570 019, have changed my name to Siddika vide affidavit sworn to before Notary Mallikarjuna Swamy, on 6-2-2023. Hereafterwards I wish to be called and known for all acts, deeds and things as Siddikha only.

Sd/- Siddikha

ಕಳೆದಿದೆ

ಸಚಿನ್. ಎಸ್. ಆದ ನಾನು ಹೆಚ್.ಡಿ.ಎಫ್.ಸಿ. ಬ್ಯಾಂಕ್‌ನಲ್ಲಿ ಫೀಲ್ಡ್ ಎಕ್ಸಿಕ್ಯೂಟಿವ್ ಆಗಿ ಸರಸ್ವತಿಪುರಂನ ಬ್ರಾಂಚ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಈ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ದಿನಾಂಕ 20-01-2023 ಶುಕ್ರವಾರ ಸಮಯ ಸುಮಾರು ಮಧ್ಯಾಹ್ನ 2 ಗಂಟೆ ವೇಳೆ ನನ್ನ ಬಾಬ್ತು ಬ್ಯಾಂಕ್‌ನ ಐಡಿ ಕಾರ್ಡ್ ಕಳೆದುಹೋಗಿರುತ್ತದೆ. ಐಡಿ ಕಾರ್ಡ್ ವಿವರ ಕೆಳಕಂಡಂತೆ ಇರುತ್ತದೆ. Name: Sachin. S, ID Card No. 220335511600390. Issue Date: 01-04-2022. Valid till 31-03-2023. ಸಿಕ್ಕಿದವರು ಸಂಪರ್ಕಿಸಿ:

Mob: 8904216262

CHANGE OF NAME

This is to declare that I, Beebijan, aged about 64 years (correct date of birth 05-08-1958) and resident of #712, Kere Road, K.N. Pura, Mysore-570 019, have changed my name to Bibi Jan vide affidavit sworn to before Notary Sri Mallikarjuna Swamy, on 6-2-2023, hereafterwards I wish to be called and known for all acts, deeds and things as Bibi Jan only.

Sd/- Bibi Jan

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.

9740733021 / 9535028750

ನಿವೇಶನ ಮಾರಾಟಕ್ಕಿದೆ

ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ಸಮೀಪದಲ್ಲಿ ಇರುವ ಕೊಳ್ಳೇಗಾಲ ಲೇಔಟ್‌ನ ನಿವೇಶನ (30x40) ಮಾರಾಟಕ್ಕಿದೆ. ಸಂ. 322 "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

9380853161

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು

ಪಂ. ಎಸ್. ಕುಮಾರಸ್ವಾಮಿ

MOB: 9880583804

ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.

ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಸಂಪು ಕ್ಲೀನಿಂಗ್‌ಗಾಗಿ

ಸಂಪರ್ಕಿಸಿ:

8861612486

WE BUY

We Buy Old Furniture, Old Scrap, Old Papers Books, Old Vessel's and old UPS Battery's. We do Demolishing work

9900945675

ಕಳೆದಿದೆ

ನಿರ್ಮಲಾ.ಕೆ ಆದ ನಾನು ಈ ಮೂಲಕ ತಿಳಿಸುವುದೇನೆಂದರೆ ನನಗೆ ಸೇರಿರುವ ನಿವೇಶನ ಸಂಖ್ಯೆ 292/ಜಿ, 5ನೇ ಮೇನ್, ಎಸ್.ಜೆ.ಎಚ್ ರೋಡ್ ವಿದ್ಯಾರಣ್ಯಪುರಂ, ಮೈಸೂರು. ಈ ಸ್ವತ್ತಿಗೆ ಸಂಬಂಧ ಪಟ್ಟಂತೆ ಶ್ರೀ ಗೋವಿಂದಸ್ವಾಮಿ ನಾಯ್ಡುರವರ ಹೆಸರಿನಲ್ಲಿರುವ (ಟೈಟಲ್ ಡೀಡ್ ಸಂಖ್ಯೆ – 2984/71–72 ಹಾಗೂ ರಿಜಿಸ್ಟರ್ ಸಂಖ್ಯೆ.3898/71–72) ಮೂಲ ದಾಖಲಾತಿಯು ದಿನಾಂಕ 1/11/22 ರಂದು ಕಳೆದು ಹೋಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪೋಲಿಸ್ ದೂರು ದಾಖಲಾಗಿರುತ್ತದೆ. ಯಾರಿಗಾದರೂ ಈ ದಾಖಲಾತಿಯು ಸಿಕ್ಕಿದರೆ ಮೇಲ್ಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ ಅಥವಾ ಈ ಕೆಳಕಂಡ ದೂರವಾಣಿಯನ್ನು ಸಂಪರ್ಕಿಸಿ.

Call: 70223 32417

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888

ಬೇಕಾಗಿದ್ದಾರೆ

ಫರ್ನಿಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 35, ಸ್ಥಳ: ಸರಸ್ವತಿಪುರಂ, ಮೈಸೂರು

9902435523

40x60 ಸೈಟು @ Rs. 34 ಲಕ್ಷ

MUDA Approved Layout

ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ, ಚಾಮುಂಡಿ ಬೆಟ್ಟದ ಹಿಂಭಾಗ.

9538583377

ಸೈಟು ಮಾರಾಟಕ್ಕಿದೆ

ಮೈಸೂರಿನ ರೂಪನಗರದಲ್ಲಿ 30x40 ದಕ್ಷಿಣಾಭಿಮುಖ ಸೈಟ್ ಮಾರಾಟಕ್ಕಿದೆ. ದಲ್ಲಾಳಿಗಳು ಕ್ಷಮಿಸಿ. ಸಂಪರ್ಕಿಸಿ:

9740388928

KASHI FLIGHT PACKAGE

@ Rs. 30,000/- All Inclusive !! with Spl. Aarthi. Asian World tours Bangalore

9886460563

ಬೇಕಾಗಿದ್ದಾರೆ

ರಾಮಣ್ಣ ಮಸಾಲ ಪೌಡರ್‌ನ್ನು ಮನೆಮನೆಗೆ ಮಾರಾಟ (Door to Door) ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ:

9481336330

SITE FOR SALE

40x60 Site for Sale, Suvarna Layout, Bogadi (Near Rainbow School)

9880273834

SITE FOR SALE

30x40 East face ; 30x40 West Face ; 30x60 East / North corner ; 40x60 North face Opp. University Layout, Near Ring Road.

Chandru Properties

Mob: 9900372792

SITE FOR SALE

31x43 North West Corner Site for Sale in Mahalakshmi Layout, T.Narasipura Road, Ready to Construction Place. Contact:

9686895205

WANTED

Civil Engineer (Male Only)
Min 2-3 yrs Exp. as a Site Engineer.
Electrical Field Supervisor, Qualification: Diploma / BE Electrical Engineering (Male Only) 2 Years + Experience in handling CESCOM and MESCOM (GK, WS and Linkline works) Contact

7760066611 / 6366366388

Call Between : 10am to 6 pm
Mail your C.V. to: acpltd123@gmail.com

ಮನೆ ಭೋಗ್ಯಕ್ಕಿದೆ

25x35 ಅಳತೆಯ ಪೂರ್ವ ದಿಕ್ಕಿನ 2BHK 3 ವಾಡ್ರೂಬ್ಸ್, ಸೋಲಾರ್, 24 hrs ನೀರಿನ ಎಲ್ಲಾ ಸೌಲಭ್ಯಗಳುಳ್ಳ ವಾಸ್ತು ಪ್ರಕಾರ ಮನೆ ಇದೆ. # 8ನೇ ಕ್ರಾಸ್, ಮಹದೇಶ್ವರ ಬಡಾವಣೆ, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜ್ ಎದುರು, ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು.

8951666811

ಅವ್ಯಾನ್ ಐ ಕೇರ್ & ಕಾಂಟ್ಯಾಕ್ಟ್ ಲೆನ್ಸ್‌ಸ್

AVYAAN EYE CARE AND CONTACT LENSES

#398, ಆರ್.ಟಿ.ಆರ್. ಆರ್ಕೆಡ್, 4ನೇ ಮುಖ್ಯರಸ್ತೆ, 16ನೇ ಕ್ರಾಸ್, ಅಪೋಲೋ ಫಾರ್ಮಸಿ ಎದುರು, ವಿದ್ಯಾರಣ್ಯಪುರಂ, ಮೈಸೂರು

ಉಚಿತ ಕಣ್ಣಿನ ತಪಾಸಣೆ ಶಿಬಿರ

ದಿನಾಂಕ: 11 ಮತ್ತು 12ನೇ ಫೆಬ್ರವರಿ 2023 ಇದೇ ಶನಿವಾರ ಮತ್ತು ಭಾನುವಾರ
ಶಿಬಿರದ ಸ್ಥಳ: ಅವ್ಯಾನ್ ಐ ಕೇರ್ ಕಾಂಟ್ಯಾಕ್ಟ್ ಲೆನ್ಸ್‌ಸ್, ವಿದ್ಯಾರಣ್ಯಪುರಂ, ಮೈಸೂರು

8123001688

ಮನೆ ಸಾಲ

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/A, ಸರಸ್ವತಿಪುರಂ, ಮೈಸೂರು

ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ. Loan Amount 5,00,000 to 20,00,000.

8088647887

FOR SALE

1) 30x40 30x50 sites in Defence Apartment Near Kote Road
2) 28 Guntas Land in Varkodu Bannur and TNP Road Near
3) 17/60 3 BHK Kamakshi Hospital Near Saraswathi Puram
4)40x60 KC layout
5)30x40 Duplex House Srirampura

90359 90359 / 95386 90359

ಸುವರ್ಣಯಾತ್ರ

ನೇಪಾಳ ಪ್ರವಾಸ 9 ದಿನಗಳು 09.03.23 ಕಠ್ಮಂಡು, ಪೋಕ್ರ, ಜನಕಪುರ ಮುಕ್ತಿನಾಥ ಇತರೆ. ಗುಜರಾತ್ ಪ್ರವಾಸ 8 ದಿನಗಳು 06.04.23 ಚಾರ್ ಧಾಮ್ ಪ್ರವಾಸ 21.05.23, 13 ದಿನಗಳು ಇತರೆ ಪ್ರವಾಸಗಳು.

9008381022
9019462508

HOUSE FOR SALE

20x40 North West Corner, Ground Floor, 2BHK, 1st & 2nd Floor, 3BHK Kaveri Layout, Roopa Nagar, Mysore.

9886245930 / 9844167889

MUDA ಸೈಟುಗಳು ಮಾರಾಟಕ್ಕಿದೆ

20x30, 30x40, 30x50

25 ಲಕ್ಷದಿಂದ ಆರಂಭ ಉತ್ತನಹಳ್ಳಿ ರಿಂಗ್ ರಸ್ತೆ, ನೇರ ಡೆವಲಪರ್ಸ್, No Brokerage

9060507585
7795081234

WANTED

Security and Manpower Agency

ಮ್ಯಾನೇಜರ್ / ಮಾರ್ಕೆಟಿಂಗ್ ಆಫೀಸರ್ / ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಅನುಭವ : 1 ವರ್ಷ ಹಾಗೂ ಹೆಚ್ಚಿಗೆ ವಯಸ್ಸು – 40 ರ ಒಳಗೆ. ಸಂಪರ್ಕಿಸಿ:

6361439167 / 7619622404

ಹೋಂನರ್ಸಿಂಗ್ ಕೆಲಸ

ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ / ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ: ಬೇರೆ ಕಡೆ ಕೆಲಸ ಮಾಡಿ ಅನುಭವ ಇರುವವರಿಗೆ ಆಕರ್ಷಕ ಸಂಬಳ ಇರುತ್ತದೆ.

7483960098
9035113222

ಬಾಡಿಗೆಗೆ /ಭೋಗ್ಯಕ್ಕೆ

20x30 ಅಳತೆಯ 2BHK ಮನೆ, ಗ್ರೌಂಡ್ ಫ್ಲೋರ್, ನಂದಿ ಬಾಗಿಲು, ಕುವೆಂಪುನಗರ ಡಿಪೋ ಹತ್ತಿರ, ಅರವಿಂದನಗರ 10th ಕ್ರಾಸ್

7899109926 / 8073758867

WANTED SITES

@ Bogadi SBM, Dattagalli Bramin's Layout, Vijayanagar & Mysore Surrounding. Quick Regn.

9342125252

WANTED

Life Time Opportunity for Part Time Job Seekers Above 35 years age group, Benefit : upto Rs.40,000 Salary +ESI, PF, Incentives

9739011965

WANTED

Sales, Girls or Boys, Minimum Experience 2 years, All kinds of Sarees, Suitting, Shirting, Dress. Contact:

8105365050

ಸಿದ್ಧ ಸಮಾಧಿ ಯೋಗ ಶಿಬಿರ

ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿತ್ವ ವಿಕಾಸ ಸಂಪೂರ್ಣ ಆರೋಗ್ಯ ಮತ್ತು ಮನಃಶಾಂತಿಗಾಗಿ ತರಗತಿಗಳು ಪ್ರಾರಂಭ 13.02.23 ನೇ ಸೋಮವಾರದಿಂದ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9448458050 / 8618762110

HOUSE FOR SALE

North Face East Door Thriflex, Total 24 Square Gangothri Layout, 1st Stage, Mysuru

9342336886 / 9449821499

WANTED

Sales Boys and Girls Full Time and Part Time for a Sports Shop in Mysore. Contact:

7760109047
8105368325

ಕಳೆದಿದೆ

ಶ್ರೀಮತಿ ಫಾಮೀದಾ ಬಿ ಕೋಂ ಸೈಯ್ಯದ್ ಅಬ್ದುಲ್ ಸಲಾಂ ರವರಿಗೆ ಸೇರಿದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕ್ಯಾತಮಾರನಹಳ್ಳಿ ಗ್ರಾಮ ಸರ್ವೆ ನಂಬರ್‌ಗಳಲ್ಲಿ ವಿಂಗಡಿಸಿರುವ ಹಾಲಿ ಸ್ವತ್ತು ಮೈಸೂರು ಸಿಟಿ, ಶಾಂತಿನಗರ ಮಹದೇವ ಪುರ ಮುಖ್ಯ ರಸ್ತೆ ಆಯಿಷಾ ಮಸೀದಿ ಹತ್ತಿರ 7ನೇ ಕ್ರಾಸ್ ಮನೆ ನಂ.78 ರ ಪೂರ್ವ ಪಶ್ಚಿಮ :– 30.00 ಅಡಿಗಳು ಮತ್ತು ದಕ್ಷಿಣೋತ್ತರ :– 25.00 ಅಡಿಗಳುಳ್ಳ ಪೂರ್ವಕ್ಕೆ:– ಖಾಸಗಿ ಸ್ವತ್ತು, ಪಶ್ಚಿಮಕ್ಕೆ:– ಜಾವಿದ್ ರವರ ಮನೆ, ಉತ್ತರಕ್ಕೆ :– ರಸ್ತೆ ಮತ್ತು ದಕ್ಷಿಣಕ್ಕೆ :– ಖಾಸಗಿ ಸ್ವತ್ತಿನ ಮೂಲ ದಾನಪತ್ರ ಮತ್ತು ಕ್ರಯಪತ್ರಗಳು ಕಳೆದುಹೋಗಿರುತ್ತದೆ ಸಿಕ್ಕಿದವರು ಈ ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ಕೋರಿದೆ. ಮೊ: 7204588643, 8147272945, 8970050803.

ಸಹಿ/– M.Yogesha Advicate

FOR RENT

Around 400 Square feed Suitable for Office, clinic or Godown in Vijayanagar 2nd Stage Semi commerical Dr. Ambarish Road near water tank. Contact:

9164899319

ANNOUNCEMENT

I, Reehana Tabassum W/o Arshad Hasan Khan, residing at # 2, 1st Cross, Tank Field Road, N R Mohalla, Mysore - 570017. Karnataka State, do hereby state on before Notary C R Seetharam, Mysore Dated 04-02-2023 that my correct name is Reehana Tabassum as in my Aadhar Card and SSLC Marks Card But in my passport my name is wrongly mentioned as Rehana Thabassum instead of Reehana Tabassum.

Sd/- Reehana Tabassum

FOR SALE

* 30x40 House for Sale in J P Nagar Ground and 1st Floor.
* 20x40 Site for Sale in Vinakaya Enclave Near J P Nagar Ring Road.
45x60 House for Sale in Vidyaranya Puram

9880344263

ಶುಭಲಗ್ನಂ.ಕಾಂ

ಎಲ್ಲಾ ಜಾತಿಯ ಹಾಗೂ ಎಲ್ಲಾ ವಯಸ್ಸಿನ ವಧು ವರರು ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.

ಡಾ. ಗುರೂಜಿ ಮೈಸೂರು & ಬೆಂಗಳೂರು

9448229184
7899625268

shubalagnam.com

IMMIDIATE REQUIREMENTS

We Electrical India Pvt. Lmt. Only for Male Candidates Freshers (B.Com and Diploma Passed and (DTP,Tally) Experience) Hootagalli Industrial Area.

7676928664 / 7795790081

MUDA SITE FOR SALE

Jnabharathi Layout, 2nd Phase, Dadadahalli, East Facing, 24 Lakhs 30x40

9342123373

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ

ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಶ್ರೀರಂಗಪಟ್ಟಣದಲ್ಲಿ 'ಸ್ವಚ್ಛ ಮಂದಿರ ಅಭಿಯಾನ'ಕ್ಕೆ ಚಾಲನೆ

ದೇವಾಲಯಗಳ ಶುಚಿತ್ವ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ

ತ್ಯಾಜ್ಯ ನಿರ್ವಹಣೆ ಘಟಕ ಉದ್ಘಾಟಿಸಿದ ಸಚಿವೆ ಶಶಿಕಲಾ ಜೊಲ್ಲೆ



ಶ್ರೀರಂಗಪಟ್ಟಣ, ಫೆ.10– ಭಾರತೀಯ ಸಂಸ್ಕೃತಿಯಲ್ಲಿ ಭಕ್ತರು ಮತ್ತು ದೇವಸ್ಥಾನಕ್ಕೂ ಅವಿನಾಭಾವ ಸಂಬಂಧವಿದೆ. ದೇವರನ್ನು ಬಹಳ ಭಯ, ಭಕ್ತಿಯಿಂದ ಪೂಜೆ ಮಾಡುತ್ತಿದ್ದು, ದೇವಾಲಯಗಳ ಆವರಣಗಳನ್ನು ಶುಚಿಯಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

'ಸ್ವಚ್ಛ ಮಂದಿರ ಅಭಿಯಾನ' ಯೋಜನೆಯಡಿ ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡುವ ರಾಜ್ಯದ 'ಎ' ಶ್ರೇಣಿ ದೇವಾಲಯವಾದ ಶ್ರೀನಿಮಿಷಾಂಬ ದೇವಸ್ಥಾನದಲ್ಲಿ ಶುಕ್ರವಾರ ಮೊದಲ ಹಂತದಲ್ಲಿ ತ್ಯಾಜ್ಯ ನಿರ್ವಹಣೆ ಘಟಕ ಉದ್ಘಾಟಿಸಿ ನಂತರ ವೀಡಿಯೋ ಕಾನ್ಫರೆನ್ಸ್ ಮೂಲಕ ಬೆಂಗಳೂರು ನಗರ ಜಿಲ್ಲೆ ಬನಶಂಕರಿ ದೇವಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ರಾಮನಗರ ತಾಲೂಕು ರೇವಣ ಸಿದ್ದೇಶ್ವರ ದೇವಾಲಯ ಸೇರಿದಂತೆ 11 ದೇವಸ್ಥಾನಗಳ ಘಟಕಗಳಿಗೆ ಚಾಲನೆ ನೀಡಿ ಮಾತನಾಡಿದರು.

ನವ ಭಾರತ ನಿರ್ಮಾಣದ ಕನಸು ಹೊಂದಿರುವ ಪ್ರಧಾನಿ ಮೋದಿ ಅವರ ಅಯೋಧ್ಯೆ, ಕಾಶಿ ಕಾರಿಡಾರ್, ಉಜ್ಜೈನಿ ಹಾಗೂ ನವ ಕರ್ನಾಟಕ ಅಭಿವೃದ್ಧಿಗೆ ಸಿಎಂ ಬೊಮ್ಮಾಯಿ ಅವರು ಅಂಜನಾದ್ರಿ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಿದ್ದಾರೆ. ದೇವಾಲಯಗಳಲ್ಲಿ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಸ್ವಚ್ಛ ಮಂದಿರ ಅಭಿಯಾನ ಪ್ರಾರಂಭಿಸಿದ್ದೇವೆ ಎಂದರು.

ರಥಸಪ್ತಮಿ ಅಂಗವಾಗಿ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಹಾಕಲಾಗಿದ್ದ ಜಾಯಿಂಟ್‌ವ್ಹೀಲ್ ರೇಡ್‌ನಲ್ಲಿ 14 ವರ್ಷದ ಬಾಲಕಿ ತಲೆ ಕೂದಲು ಸಹಿತ ಚರ್ಮ ಕಿತ್ತು ಬಂದ ಘಟನೆಗೆ ಪ್ರತಿಕ್ರಿಯಿಸಿದ ಅವರು, ಜಾತ್ರೆ ವೇಳೆ ಎಷ್ಟೇ ಮುನ್ನೆಚ್ಚರಿಕೆ ಕೈಗೊಂಡರೂ, ಅವಘಡಗಳು ಸಂಭವಿಸಲಿದೆ. ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಬಾಲಕಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸುತ್ತೇನೆ ಎಂದರು.

ರಾಜ್ಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಮಾತನಾಡಿ, ಸಚಿವೆ ಶಶಿಕಲಾ ಜೊಲ್ಲೆ ಅವರು ದೇವಸ್ಥಾನಗಳಲ್ಲಿ ಸ್ವಚ್ಛತೆ ಇಲ್ಲದೇ ಭಕ್ತರು ಪಡುತ್ತಿರುವ ತೊಂದರೆ ನಿವಾರಿಸುವ ನಿಟ್ಟಿನಲ್ಲಿ ಈ ಯೋಜನೆ ಆರಂಭಿಸಿದ್ದಾರೆ ಎಂದರು.

ಸ್ವಚ್ಛ ಮಂದಿರ ಅಭಿಯಾನದ ಮೂಲಕ ದೇವಸ್ಥಾನಗಳ ಆವರಣದಲ್ಲಿ ಉತ್ಪತ್ತಿಯಾಗುವ ಘನ, ದ್ರವ ತ್ಯಾಜ್ಯಗಳಿಗೆ ವೈಜ್ಞಾನಿಕ ರೀತಿ ಪರಿಹಾರ ಒದಗಿಸಲಾಗುತ್ತಿದೆ. ತ್ಯಾಜ್ಯ ಉತ್ಪಾದನೆ ಕಡಿಮೆ ಮಾಡಲು ವ್ಯವಸ್ಥಿತ ಕ್ರಮ ಹುಟ್ಟು ಹಾಕುವುದು ಮತ್ತು ದೇವಾಲಯಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಸಂಗ್ರಹಿಸುವುದು, ಸಾಗಿಸುವುದು, ಸಂಸ್ಕರಿಸುವುದು ಮತ್ತು ವಿಲೇವಾರಿ ಮಾಡಲು ಅಗತ್ಯ ವ್ಯವಸ್ಥೆಗಳೊಂದಿಗೆ ಮೂಲದಲ್ಲಿ ತ್ಯಾಜ್ಯ ಪ್ರತ್ಯೇಕಿಸುವುದು ಮತ್ತು ತ್ಯಾಜ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಸೌಲಭ್ಯಗಳನ್ನು ಸ್ಥಾಪಿಸುವ ಮೂಲಕ ದೇವಸ್ಥಾನವನ್ನು ಸುಸ್ಥಿರ ಸಂಸ್ಥೆ ಮತ್ತು ಶೂನ್ಯ ತ್ಯಾಜ್ಯ ಆವರಣವನ್ನಾಗಿ ಮಾಡುವ ಗುರಿ ಈ ಯೋಜನೆ ಹೊಂದಿದೆ ಎಂದರು.

ಈ ವೇಳೆ ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೃಷ್ಣಪ್ಪ, ದೇವಾಲಯದ ಇಓ ಮಹೇಶ್, ಮುಜರಾಯಿ ತಹಸೀಲ್ದಾರ್ ಉಮಾ ಸೇರಿದಂತೆ ಇತರರಿದ್ದರು.

ಮೊದಲ ಹಂತದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ಹೊಂದಿರುವ ದೇವಸ್ಥಾನಗಳು

1. ಶ್ರೀ ನಿಮಿಷಾಂಬ ದೇವಸ್ಥಾನ ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
2. ಶ್ರೀ ಬನಶಂಕರಿ ದೇವಾಲಯ ಕರಿಯಪ್ಪ ರಸ್ತೆ, ಬೆಂಗಳೂರು,
3. ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಬೆಂಗಳೂರು ಗ್ರಾಮಾಂತರ
4. ಶ್ರೀ ರೇವಣ್ಣ ಸಿದ್ದೇಶ್ವರ ದೇವಾಲಯ, ರಾಮನಗರ ಜಿಲ್ಲೆ
5. ಶ್ರೀ ಕಬ್ಬಾಳಮ್ಮ ದೇವಾಲಯ, ಕನಕಪುರ ತಾಲೂಕು, ರಾಮನಗರ ಜಿಲ್ಲೆ
6. ಶ್ರೀ ಕೆಂಗಲ್ ಆಂಜನೇಯಸ್ವಾಮಿ ದೇವಾಲಯ, ರಾಮನಗರ ಜಿಲ್ಲೆ
7. ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
8. ಶ್ರೀ ಚೆನ್ನಕೇಶವಸ್ವಾಮಿ ದೇವಾಲಯ, ಬೇಲೂರು ತಾಲೂಕು, ಹಾಸನ ಜಿಲ್ಲೆ
9. ಶ್ರೀ ದುರ್ಗಪರಮೇಶ್ವರಿ ದೇವಾಲಯ, ಮಂದಾರ್ತಿ, ದಕ್ಷಿಣ ಕನ್ನಡ ಜಿಲ್ಲೆ
10. ಶ್ರೀಗುರು ತಿಪ್ಪೇರುದ್ರಸ್ವಾಮಿ ದೇವಾಲಯ, ನಾಯಕನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ
11. ಶ್ರೀ ಲಕ್ಷ್ಮಿನರಸಿಂಹಸ್ವಾಮಿ ದೇವಾಲಯ, ದೇವರಾಯನ ದುರ್ಗ, ತುಮಕೂರು
12. ಶ್ರೀ ಪೊಳಲಿ ರಾಜರಾಜೇಶ್ವರಿ ದೇವಾಲಯ, ದಕ್ಷಿಣ ಕನ್ನಡ ಜಿಲ್ಲೆ

ಮರ ಬಿದ್ದು ಪೌರಕಾರ್ಮಿಕ ಸಾವು

ಮಂಡ್ಯ, ಫೆ.10– ಬೃಹತ್ ಮರ ಧರೆಗುರುಳಿದ ಪರಿಣಾಮ ಪೌರ ಕಾರ್ಮಿಕನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುತ್ತಲಿನ ಅಪ್ಪು ಕ್ಯಾಂಟಿನ್ ಬಳಿಯ ಪಾರ್ಕ್ ಮುಂಭಾಗ ಗುರುವಾರ ರಾತ್ರಿ ಸಂಭವಿಸಿದೆ.

ಮಂಡ್ಯ ನಗರಸಭೆ ಪೌರಕಾರ್ಮಿಕ ಉದಯ್ (30) ಸ್ಥಳದಲ್ಲೇ ಮೃತಪಟ್ಟರೆ, ಆತನ ಪತ್ನಿ ಹಾಗೂ ಮಗುವಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕಾರ್ಯನಿಮಿತ್ತ ಕುಟುಂಬಸ್ಥರೊಂದಿಗೆ ತೆರಳಿದ್ದ ಉದಯ್ ಗುರುವಾರ ರಾತ್ರಿ ನೆಹರು ನಗರದ ಪಿಕೆ ಕಾಲೋನಿಯ ತಮ್ಮ ನಿವಾಸಕ್ಕೆ ಗುತ್ತಲು ಮಾರ್ಗವಾಗಿ ವಾಪಸ್ಸಾಗುತ್ತಿದ್ದ. ಈ ವೇಳೆ ಅಪ್ಪು ಕ್ಯಾಂಟೀನ್ ಸಮೀಪದ ಪಾರ್ಕ್ ಬಳಿ ಇದ್ದ ಬೃಹತ್ ಮರವೊಂದು ಬೈಕ್ ಮೇಲೆ ಉರುಳಿದ ಪರಿಣಾಮ ಉದಯ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಆತನ ಪತ್ನಿ ಹಾಗೂ ಮಗು ಮಂಡ್ಯ ಮಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಸಂಬಂಧ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಪಂ 2022–23ನೇ ಸಾಲಿನ ವಾರ್ಡ್ ಮತ್ತು ಗ್ರಾಮ ಸಭೆ ಅಧ್ಯಕ್ಷೆ ರೇಖಾ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ ಉಪಾಧ್ಯಕ್ಷೆ ಜಯಲಕ್ಷ್ಮಿ, ಪಿಡಿಓ ರವಿ, ಸದಸ್ಯರಾದ ಪ್ರಕಾಶ್, ಲೋಕೇಶ್, ದಿನೇಶ್, ಕಲಾ, ವಿಮಲಾ, ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಪಡಿತರ ಹಂಚಿಕೆ

ಮಂಡ್ಯ, ಫೆ.10– ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರ ಗಮನಕ್ಕೆ, ಫೆಬ್ರವರಿ–2023ರ ಮಾಹೆಗೆ ಹಂಚಿಕೆ ನೀಡಲಾಗಿರುತ್ತದೆ.

ಅಂತ್ಯೋದಯ ಪ್ರತಿ ಪಡಿತರ ಚೀಟಿಗೆ– 35 ಕೆಜಿ ಅಕ್ಕಿ ಉಚಿತ, ಬಿಪಿಎಲ್ ಪ್ರತಿ ಯೂನಿಟ್‌ಗೆ – 7 ಕೆಜಿ ಅಕ್ಕಿ ಉಚಿತ ಹಾಗೂ ಎಪಿಎಲ್ (ವಿಲ್ಲಿಂಗ್‌ನೆಸ್) ಏಕ ಸದಸ್ಯ ಅಕ್ಕಿ–5 ಕೆಜಿ–2 ಮತ್ತು ಹೆಚ್ಚಿನ ಸದಸ್ಯರಿಗೆ ಅಕ್ಕಿ–10 ಕೆಜಿ ಪ್ರತಿ ಕೆ.ಜಿ.ಗೆ ರೂ. 15/–ಗಳಂತೆ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಲು ಪ್ರಕಟಣೆ ತಿಳಿಸಿದೆ.

ನೇರ ಸಂದರ್ಶನ

ಮಂಡ್ಯ, ಫೆ.10– ಬಿಡದಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈ.ಲಿ. ವತಿಯಿಂದ ಐಟಿಐ ತೇರ್ಗಡೆಯಾದ ಅರ್ಹ ಅಭ್ಯರ್ಥಿಗಳಿಗೆ ಫೆ.13ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಪ್ರೆಂಟಿಸ್ ನೇಮಕಾತಿಗಾಗಿ ನೇರ ಸಂದರ್ಶನ ಆಯೋಜಿಸಲಾಗಿದೆ.

ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ಐಟಿಐ ತೇರ್ಗಡೆಯಾಗಿರಬೇಕು. ವಯೋಮಿತಿ 18 ರಿಂದ 24 ವಯಸ್ಸಿನವರಾಗಿರಬೇಕು. ನೇಮಕವಾದವರಿಗೆ ಸ್ಟೈಫಂಡ್ 15,750 ರೂ., ಉಚಿತ ಕ್ಯಾಂಟೀನ್ ವ್ಯವಸ್ಥೆ, ಉಚಿತ ಸಮವಸ್ತ್ರ, ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ: 8217803781, 08232–295124ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮಂಡ್ಯ, ಫೆ.10– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರದಿಂದ ನಗದು ಪುರಸ್ಕಾರವನ್ನು ನೀಡಲಾಗುವುದು. ಆಸಕ್ತರು DBT-MIS Portal (https://dbtvas-sports.gov.in ಮೂಲಕ ಏ.30 ರೊಳಗೆ ಅರ್ಜಿ ಸಲ್ಲಿಸಬಹುದು.

ಬಜೆಟ್‌ನಲ್ಲಿ ಮಂಡ್ಯಕ್ಕೆ 300 ಕೋಟಿ ರೂ. ವಿಶೇಷ ಪ್ಯಾಕೇಜ್‌ಗೆ ಮನವಿ

ಮಂಡ್ಯ, ಫೆ.10– ನಗರದ ಅಭಿವೃದ್ಧಿ, ಮೈಷುಗರ್ ಕಾರ್ಖಾನೆ ಹಾಗೂ ಜಿಲ್ಲೆಯ ರಸ್ತೆ, ಚರಂಡಿಗಳ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ 300 ಕೋಟಿ ರೂ. ವಿಶೇಷ ಪ್ಯಾಕೇಜ್ ಘೋಷಿಸುವಂತೆ ಬಿಜೆಪಿ



ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಅವರು, ಈ ಬಾರಿಯ ಬಜೆಟ್‌ನಲ್ಲಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದರು.

ರಸ್ತೆ, ಚರಂಡಿ ಅಭಿವೃದ್ಧಿಗೆ 100 ಕೋಟಿ: ಜಿಲ್ಲೆಯಲ್ಲಿ ಇತ್ತೀಚೆಗೆ ಭಾರೀ ಮಳೆಯಿಂದಾಗಿ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗಿದೆ. ಆದ್ದರಿಂದ ರಸ್ತೆಗಳು ಹಾಗೂ ಚರಂಡಿಗಳ ಅಭಿವೃದ್ಧಿಗೆ 100 ಕೋಟಿ ರೂ. ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಮಂಡ್ಯ ನಗರಕ್ಕೆ 100 ಕೋಟಿ ರೂ: ನಗರದ ರಸ್ತೆಗಳು ಸಹ ಮಳೆಯಿಂದ ತುಂಬಾ ಶಿಥಿಲಗೊಂಡಿವೆ. ಒಳಚರಂಡಿ ವ್ಯವಸ್ಥೆ ಅಧ್ವಾನಗೊಂಡಿದ್ದು, ನಗರದ ಜನತೆಗೆ ಸಾಕಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ನಗರದ ರಸ್ತೆ, ಒಳಚರಂಡಿ ಸೇರಿದಂತೆ ವಿವಿಧ ಸಮಸ್ಯೆಗಳ ನಿವಾರಣೆಗೆ 100 ಕೋಟಿ ರೂ. ವಿಶೇಷ ಅನುದಾನ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಮೈಷುಗರ್ ಕಾರ್ಖಾನೆಗೆ 100 ಕೋಟಿ ರೂ: ಜಿಲ್ಲೆಯ ರೈತರ ಜೀವನಾಡಿ ಮೈಷುಗರ್ ಕಾರ್ಖಾನೆಗೆ 100 ಕೋಟಿ ರೂ. ವಿಶೇಷ ಅನುದಾನ ನೀಡುವ ಮೂಲಕ ಕಾರ್ಖಾನೆ ಗತವೈಭವ ಮರುಕಳುಹಿಸುವಂತೆ ಮಾಡಬೇಕು. ಈಗಾಗಲೇ ಕಾರ್ಖಾನೆ ಆರಂಭ ಮಾಡಿದ್ದು, ರೈತರಲ್ಲಿ ಸಂತಸವನ್ನುಂಟು ಮಾಡಿದೆ. ಆದ್ದರಿಂದ ಬಜೆಟ್‌ನಲ್ಲಿ ಕಾರ್ಖಾನೆಗೆ 100 ಕೋಟಿ ರೂ. ವಿಶೇಷ ಅನುದಾನ ನೀಡುವ ಮೂಲಕ ರೈತರ ಅಭಿವೃದ್ಧಿಗೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಅತ್ತಿಗಾನಹಳ್ಳಿ ಡೈರಿ ಕಟ್ಟಡ ಉದ್ಘಾಟಿಸಿದ ಶಾಸಕ ಸಿಎಸ್‌ಪಿ



ಪಾಂಡವಪುರ, ಫೆ.10– ತಾಲೂಕಿನ ಅತ್ತಿಗಾನಹಳ್ಳಿಯಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡವನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅತ್ತಿಗಾನಹಳ್ಳಿಯಲ್ಲಿ ಡೇರಿ ಕಟ್ಟಡ ನಿರ್ಮಿಸುವ ಸಂದರ್ಭ ಗ್ರಾಮಸ್ಥರು ಅನುದಾನ ನೀಡುವಂತೆ ಮನವಿ ಮಾಡಿದರು. ಅದರಂತೆ ನಾನು 5 ಲಕ್ಷ ಅನುದಾನ ನೀಡಿದ್ದೇನೆ. ಅಲ್ಲದೇ ಮನ್‌ಮುಲ್‌ನಿಂದ 5 ಲಕ್ಷ ಅನುದಾನ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ 1 ಲಕ್ಷ ಅನುದಾನ ನೀಡಲಾಗಿದೆ. ಎಲ್ಲರೂ ಒಗ್ಗಟ್ಟಿನಿಂದ ಡೇರಿ ಮುನ್ನಡೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಮಾತನಾಡಿ, ಡೇರಿ ಕಟ್ಟಡಕ್ಕೆ ಮನ್‌ಮುಲ್‌ನಿಂದ ಈ ಹಿಂದೆ 5 ಲಕ್ಷ ಅನುದಾನ ನೀಡುತ್ತಿದ್ದೇವು. ಇದೀಗ 6.50 ಲಕ್ಷ ಅನುದಾನ ನೀಡುತ್ತಿದ್ದೇವೆ. ಶಾಸಕ ಸಿ.ಎಸ್.ಪುಟ್ಟರಾಜು ಅತ್ತಿಗಾನಹಳ್ಳಿ ಡೇರಿ ಕಟ್ಟಡಕ್ಕೆ 5 ಲಕ್ಷ ಅನುದಾನ ನೀಡುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲನ್ನು ಪೂರೈಕೆ ಮಾಡಬೇಕು. ಡೇರಿಗೆ ಬರುವ ಹಾಲನ್ನು ಪರೀಕ್ಷೆ ಮಾಡಿ ಫ್ಯಾಟ್ ಆಧಾರದ ಮೇಲೆ ರೈತರಿಗೆ ಧರ ನೀಡಬೇಕು. ಆ ಮೂಲಕ ರೈತರ ಆರ್ಥಿಕಾಭಿವೃದ್ಧಿಗೆ ಸಹಕಾರ ನೀಡಬೇಕು. ಮನ್‌ಮುಲ್ ಒಕ್ಕೂಟ ಹಾಲಿನ ಗುಣಮಟ್ಟದಲ್ಲಿ ಕೊನೆಯ ಸ್ಥಾನದಲ್ಲಿತ್ತು. ಇದೀಗ ಗುಣಮಟ್ಟದಲ್ಲಿ 3ನೇ ಸ್ಥಾನಕ್ಕೆ ಬಂದಿದ್ದೇವೆ. ರೈತರು ಗುಣಮಟ್ಟದ ಹಾಲು ಪೂರೈಕೆ ಮಾಡಿದರೆ ಮಾತ್ರ ಸರ್ಕಾರದ ಪ್ರೋತ್ಸಾಹಧನ ದೊರೆಯುತ್ತದೆ. ಹಾಗಾಗಿ ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿ ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ಗ್ರಾಪಂ ಅಧ್ಯಕ್ಷ ಎನ್.ಮಹೇಶ್, ಮಾಜಿ ಅಧ್ಯಕ್ಷ ಜೆ.ದೇವೇಗೌಡ, ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿ ಮಂಜುನಾಥ್, ಡೇರಿ ಅಧ್ಯಕ್ಷೆ ಕಲ್ಪನಾ, ಉಪಾಧ್ಯಕ್ಷ ಸಿ.ಜಗದೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ.ದೇವೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿ.ಶಿವಣ್ಣ, ಡೇರಿ ಕಾರ್ಯದರ್ಶಿ ಪುಷ್ಪ, ಪವಿತ್ರ ಸೇರಿದಂತೆ ಡೇರಿ ನಿರ್ದೇಶಕರು, ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಕೊಡವರ ಸಂಸ್ಕೃತಿ, ಆಚಾರ–ವಿಚಾರ ಸಂರಕ್ಷಿಸಬೇಕಿದೆ

ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ





ಮೈಸೂರು, ಫೆ.10– ಕೊಡವ ಸಮುದಾಯದ ಪೂರ್ವಿಕರು ಕೊಡವರ ಶ್ರೀಮಂತ ಸಂಸ್ಕೃತಿ, ಆಚಾರ–ವಿಚಾರಗಳನ್ನು ಉಳಿಸಿ ಹೋಗಿದ್ದು, ಇಂದಿನ ಕೊಡವರು ಸಂಘಟಿತರಾಗಿ ಅದನ್ನು ಸಂರಕ್ಷಿಸಬೇಕಿದೆ ಎಂದು ಹೈಕೋರ್ಟ್ ವಕೀಲ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಕರೆ ನೀಡಿದ್ದಾರೆ.

ಕೊಡವರು ಮತ್ತು ಕೊಡಗಿನ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲು ಮೈಸೂರಿನ ವಿಜಯ ನಗರದಲ್ಲಿರುವ ಕೊಡವ ಸಮಾಜದಲ್ಲಿ ಏರ್ಪಡಿಸಲಾಗಿದ್ದ ಕೊಡವರ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಸ್ತುತ ಜಮ್ಮಾ ಸಮಸ್ಯೆ ಕೊಡವರು ಮತ್ತು ಕೊಡಗಿನಲ್ಲಿರುವ ಜಮ್ಮಾ ಹಿಡುವಳಿದಾರರನ್ನು ಕಾಡುತ್ತಿದೆ ಎಂದರು.

ಸೇನೆ, ಅರೆ ಸೇನಾಪಡೆ ಮತ್ತು ಇನ್ನಿತರ ಕೆಲಸ ಅರಸಿ ಹೊರ ಜಿಲ್ಲೆ, ರಾಜ್ಯಗಳಲ್ಲಿ ನೆಲೆಸಿರುವವರ ಹೆಸರಿಗೆ ಜಮ್ಮಾ ಭೂಮಿಯ ಆರ್‌ಟಿಸಿಯಲ್ಲಿ ಹೆಸರು ದಾಖಲಾಗುತ್ತಿಲ್ಲ. ಆರ್‌ಟಿಸಿಯ 9ನೇ ಕಲಂ ನಲ್ಲಿ ಹೆಸರು ದಾಖಲಾಗದೇ ಹೋದಲ್ಲಿ ಜಮ್ಮಾ ಭೂಮಿ ಸಮಸ್ಯೆ ಮತ್ತಷ್ಟು ಜಟಿಲವಾಗಲಿದೆ. ಕೊಡವರ ಅಸ್ತಿತ್ವಕ್ಕೂ ಧಕ್ಕೆಯಾಗಲಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕೊಡಗಿನಲ್ಲಿ ಹುಲಿ, ವನ್ಯ ಪ್ರಾಣಿಗಳ ಹಾವಳಿ ಕಂಡು ಬರುತ್ತಿದೆ. ಇದೀಗ ಕಾಫಿ ತೋಟಗಳನ್ನೇ ತಮ್ಮ ಆವಾಸ ಸ್ಥಾನ ಮಾಡಿಕೊಂಡಿರುವ ಕಾಡಾನೆಗಳಿಂದ ಹಾನಿ ಸಂಭವಿಸುತ್ತಿದೆ. ಕೊಡಗಿನಲ್ಲಿ ಇಂತಹ 200 ಆನೆಗಳಿದ್ದು, ಸರಕಾರ ಮತ್ತು ಅರಣ್ಯ ಇಲಾಖೆ ಈ ಸಮಸ್ಯೆ ಪರಿಹರಿಸಲು ವಿಫಲವಾಗಿದೆ ಎಂದು ಅವರು ಆಪಾದಿಸಿದರು.

ಕೆ.ಆರ್.ನಗರದಲ್ಲಿ ರವಿಶಂಕರ್ ಗೆಲುವು ಖಚಿತ

ಪೂರ್ವಭಾವಿ ಸಭೆಯಲ್ಲಿ ಕ್ಷೇತ್ರದ ಉಸ್ತುವಾರಿ ಡಾ. ರವೀಂದ್ರ ವಿಶ್ವಾಸ



ಕೆ.ಆರ್.ನಗರ, ಫೆ.10– ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ತಾವೇ ಶಾಸಕರಾಗಲಿದ್ದೇವೆ ಎಂಬ ಭಾವನೆಯಿಂದ ಕೆಲಸ ಮಾಡಬೇಕು. ಆಗ ಮಾತ್ರ ಡಿ.ರವಿಶಂಕರ್ ಅತ್ಯಧಿಕ ಮತಗಳಿಂದ ಚುನಾಯಿತರಾಗಲು ಸಾಧ್ಯ ಎಂದು ಕ್ಷೇತ್ರದ ಉಸ್ತುವಾರಿ ಡಾ. ರವೀಂದ್ರ ಹೇಳಿದರು.

ಪಟ್ಟಣದ ಶ್ರೀ ಕೃಷ್ಣ ಮಂದಿರದಲ್ಲಿ ಡಿ.ಕೆ. ಶಿವಕುಮಾರ್ ನೇತೃತ್ವದ ಪ್ರಜಾಧ್ವನಿ ಯಾತ್ರೆ ಆಗಮಿಸುವ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಡಿ.ರವಿ ಶಂಕರ್ ಪ್ರಸಕ್ತ ಚುನಾವಣೆಯಲ್ಲಿ ಶಾಸಕ ರಾಗುವುದು ಖಚಿತ. ಇದಕ್ಕೆ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಸಹಕರಿಸಬೇಕು ಎಂದು ಕೋರಿದರು.

ಫೆ.16ರಂದು ಪ್ರಜಾಧ್ವನಿ ಯಾತ್ರೆ ಕೆ.ಆರ್. ನಗರದ ಗರುಡಗಂಭ ವೃತ್ತದಿಂದ ಹಂಪಾಪುರ, ಮಂಚನಹಳ್ಳಿ, ಗಂಧನಹಳ್ಳಿ ಮತ್ತು ಮಿರ್ಲೆ ಸೇರಿದಂತೆ ಇತರ ಗ್ರಾಮಗಳಲ್ಲಿ ಸಂಚರಿಸಿ ಸಾಲಿಗ್ರಾಮ ತಾಲೂಕು ಕೇಂದ್ರದಲ್ಲಿ ಸಮಾವೇಶ ನಡೆಯಲಿದೆ. ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಾತ್ರೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜೆಡಿಎಸ್‌ನಿಂದ ಒಕ್ಕಲಿಗ ಸಮುದಾಯ ದವರು ಸ್ಪರ್ಧೆ ಮಾಡುತ್ತಿದ್ದರೂ ಸಹ ಒಕ್ಕಲಿಗರು ಸೇರಿದಂತೆ ಎಲ್ಲಾ ಸಮುದಾಯದವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಯಾತ್ರೆಯಲ್ಲಿ ಬಿ.ಕೆ.ಹರಿಪ್ರಸಾದ್, ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿ ಹೊಳಿ ಸೇರಿದಂತೆ ಇತರ ರಾಜ್ಯ ಮಟ್ಟದ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಅಂದು ನಡೆಯುವ ಸಮಾವೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಳ್ಳಬೇಕು ಎಂದರು.

ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ.ವಿಜಯ ಕುಮಾರ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಕಾಂಗ್ರೆಸ್ ಮುಖಂಡ ಡಿ.ರವಿ ಶಂಕರ್ ಮತ್ತಿತರರು ಮಾತನಾಡಿದರು. ಪುರಸಭಾಧ್ಯಕ್ಷ ಸೈಯದ್‌ಸಿದ್ದಿಕ್, ಮಾಜಿ ಅಧ್ಯಕ್ಷರಾದ ಕೆ.ಜಿ.ಸುಬ್ರಮಣ್ಯ, ಪ್ರಕಾಶ್, ನರಸಿಂಹರಾಜು, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಾಜಿ ಸದಸ್ಯ ಸಣ್ಣಪ್ಪ, ಎಪಿಎಂಸಿ ಮಾಜಿ ನಿರ್ದೇಶಕರಾದ ಹೆಚ್.ಪಿ.ಪ್ರಶಾಂತ್, ತೋಟಪ್ಪ ನಾಯಕ, ಹೆಚ್.ಹೆಚ್.ನಾಗೇಂದ್ರ, ಮುಖಂಡ ರಾದ ಸಿ.ಪಿ.ರಮೇಶ್, ಶ್ರೀನಿವಾಸ್, ನಾಗರಾಜ ನಾಯಕ, ದಿಲೀಪ್, ಎಲ್.ಪಿ.ರವಿಕುಮಾರ್, ಜೆ.ಶಿವಣ್ಣ, ಕೃಷ್ಣೇಗೌಡ, ಸರಿತಾ, ಲತಾ, ರಾಣಿ, ಮಹದೇವ್, ಕೆ.ಎಲ್.ಕುಮಾರ್, ಗಾರೆ ರವಿ, ಶಾಂತಿ, ಶೇಖರ್, ಎಂ.ಆರ್.ನಾಗೇಶ್, ಮಂಜು ನಾಥ್ ಸೇರಿದಂತೆ ಇನ್ನಿತರರಿದ್ದರು.

ನಟಿ ಅಭಿನಯಾಗೆ ಜಾಮೀನು; ವರದಕ್ಷಿಣೆ ಕೇಸ್‌ನಲ್ಲಿ ತಾತ್ಕಾಲಿಕ ರಿಲೀಫ್

ಬೆಂಗಳೂರು, ಫೆ.10– ವರದಕ್ಷಿಣೆ ಕೇಸ್‌ನಲ್ಲಿ ಜೈಲು ಪಾಲಾಗುವ ಆತಂಕದಲ್ಲಿದ್ದ ನಟಿ ಅಭಿನಯಾ ಅವರಿಗೆ ಈಗ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ಸುಪ್ರೀಂ ಕೋರ್ಟ್‌ನಲ್ಲಿ



ಅವರಿಗೆ ಜಾಮೀನು ದೊರೆತಿದೆ. ಅಭಿನಯಾ ಜೊತೆಗೆ ಅವರ ತಾಯಿ ಜಯಮ್ಮ ಮತ್ತು ಸಹೋದರ ಚೆಲುವರಾಜು ಕೂಡ ಜಾಮೀನು ಪಡೆದುಕೊಂಡಿದ್ದಾರೆ. ಸದ್ಯಕ್ಕೆ ಈ ಮೂವರು ನಿಟ್ಟುಸಿರು ಬಿಡುವಂತಾಗಿದೆ. ಅತ್ತಿಗೆಗೆ ವರದಕ್ಷಿಣೆ ಕಿರುಕುಳ ನೀಡಿದ ಪ್ರಕರಣದಲ್ಲಿ ಅಭಿನಯಾ ಅವರಿಗೆ ಇತ್ತೀಚೆಗೆ ಎರಡು ವರ್ಷ ಜೈಲು ಶಿಕ್ಷೆ ಪ್ರಕಟ ಆಗಿತ್ತು. ಹೈಕೋರ್ಟ್ ನೀಡಿದ ಈ ತೀರ್ಪನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಅಲ್ಲಿ ಅವರಿಗೆ ಜಾಮೀನು ಮಂಜೂರಾಗಿದೆ.

ತಲೆ ಮರೆಸಿಕೊಂಡಿದ್ದ ಅಭಿನಯಾ: ಅತ್ತಿಗೆ ಮೇಲೆ ಕೌಟುಂಬಿಕ ದೌರ್ಜನ್ಯ ನಡೆಸಿದ್ದಕ್ಕಾಗಿ ಅಭಿನಯಾ ಹಾಗೂ ಅವರ ತಾಯಿ ಮತ್ತು ಸಹೋದರನಿಗೆ ಹೈಕೋರ್ಟ್ ಜೈಲು ಶಿಕ್ಷೆ ನೀಡಿತ್ತು. ಪೊಲೀಸರು ಈ ಮೂವರನ್ನೂ ಬಂಧಿಸಿ ಕೋರ್ಟ್‌ಗೆ ಹಾಜರು ಪಡಿಸಬೇಕಿತ್ತು. ಆದರೆ ಅಷ್ಟರಲ್ಲಾಗಲೇ ಅವರು ತಲೆಮರೆಸಿಕೊಂಡರು. ಬಳಿಕ ಚಂದ್ರಾ ಲೇಔಟ್ ಪೊಲೀಸರು ಲುಕ್‌ಔಟ್ ನೋಟೀಸ್ ಜಾರಿ ಮಾಡಿದರು. ಅಪರಾಧಿಗಳ ಬಗ್ಗೆ ಸುಳಿವು ಸಿಕ್ಕರೆ ಕೂಡಲೇ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಪೊಲೀಸರು ಮನವಿ ಮಾಡಿಕೊಂಡಿರುವ ಕರಪತ್ರ, ಪೋಸ್ಟರ್ ವೈರಲ್ ಆಗಿದೆ. ಅದರ ಬೆನ್ನಲ್ಲೇ ಅಭಿನಯಾ ಕುಟುಂಬದವರು ಸುಪ್ರೀಂಕೋರ್ಟ್ ಮೊರೆ ಹೋದರು.

ಅಭಿನಯಾ ಕೇಸ್ ವಿಚಾರಣೆ ಮುಂದೂಡಿಕೆ: ಅಭಿನಯಾ ಅವರ ಅಣ್ಣನ ಪತ್ನಿ ಲಕ್ಷ್ಮಿದೇವಿ ಅವರು 2002ರಲ್ಲಿ ವರದಕ್ಷಿಣೆ ಕೇಸ್ ದಾಖಲಿಸಿದ್ದರು. ಅದಕ್ಕೆ ಸಂಬಂಧಪಟ್ಟಂತೆ 2022ರ ಡಿಸೆಂಬರ್‌ನಲ್ಲಿ ಹೈಕೋರ್ಟ್ ತೀರ್ಪು ನೀಡಿತು. ಆದರೆ ಅದನ್ನು ಪ್ರಶ್ನಿಸಿ ಅಭಿನಯಾ ಕುಟುಂಬದವರು ಈಗ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೂವರಿಗೂ ಷರತ್ತುಬದ್ಧ ಜಾಮೀನು ನೀಡ ಲಾಗಿದೆ. ಪ್ರಕರಣದ ವಿಚಾರಣೆಯನ್ನು ಮುಂದೂಡಲಾಗಿದೆ.

ಲಕ್ಷ್ಮಿದೇವಿ ಆರೋಪ ಏನು: 1998ರಲ್ಲಿ ಅಭಿನಯಾ ಸಹೋದರ ಶ್ರೀನಿವಾಸ್ ಜೊತೆ ಲಕ್ಷ್ಮಿದೇವಿ ವಿವಾಹ ನೆರವೇರಿತ್ತು. ಮದುವೆ ಬಳಿಕ ಶ್ರೀನಿವಾಸ್ ಕುಟುಂಬದವರು ವರದಕ್ಷಿಣೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಲಕ್ಷ್ಮಿದೇವಿ ದೂರು ದಾಖಲಿಸಿದ್ದರು. ಹೆರಿಗೆ ಬಳಿಕ ಪತಿ ಮನೆಯವರು ತಮ್ಮನ್ನು ಸೇರಿಸಿಕೊಳ್ಳಲಿಲ್ಲ. ಪೋಷಕರ ಮನೆಯಲ್ಲಿ ಉಳಿದುಕೊಳ್ಳುವಂತೆ ತಮ್ಮ ಮೇಲೆ ಒತ್ತಡ ಹೇರಿದರು. ಕೊಲೆ ಬೆದರಿಕೆಯನ್ನೂ ಹಾಕಿದರು ಎಂದು ದೂರಿನಲ್ಲಿ ಲಕ್ಷ್ಮಿದೇವಿ ತಿಳಿಸಿದ್ದರು.



ಜೆಇಇ ಮೇನ್ಸ್‌ನಲ್ಲಿ ಕೆ.ಬಿ. ಈಶನ್‌ಗೆ ಶೇ. 99.09 ಅಂಕ

ಮೈಸೂರು, ಫೆ. 10– ಜೆಇಇ ಮೇನ್ಸ್ ಪರೀಕ್ಷೆಯ 2023ರ ಮೊದಲ ಸೆಷನ್‌ನಲ್ಲಿ ಕೆ.ಬಿ. ಈಶನ್ ಶೇ. 99.09 ಅಂಕ ಗಳಿಸುವ ಮೂಲಕ ತೇರ್ಗಡೆಯಾಗಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಿಳಿಸಿದೆ

ಜೆ. ವಿಜಯಗೆ ಪಿಹೆಚ್‌ಡಿ



ಮೈಸೂರು: ಡಾ. ಬಿ.ಎಸ್. ಯಶೋಧ ಅವರ ಮಾರ್ಗದರ್ಶನದಲ್ಲಿ ಜೆ. ವಿಜಯ ಅವರು ಅಂಬೇಡ್ಕರ್ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ನೂತನ ಕಚೇರಿ ಉದ್ಘಾಟನೆ



ಬೈಲಕುಪ್ಪೆ, ಫೆ.10– ಕುಶಾಲನಗರದ ಬಾಪೂಜಿ ಬಡಾವಣೆಯಲ್ಲಿ ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ನೂತನ ಕಚೇರಿಯ ಉದ್ಘಾಟನಾ ಕಾರ್ಯಕ್ರಮ ಗುರುವಾರ ನಡೆಯಿತು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ, ಕಣಗಾಲ್, ಸೇರಿದಂತೆ ಬಲಿಜ ಪರಿವಾರವನ್ನು ಒಟ್ಟಾಗಿ ಕುಶಾಲನಗರ ಬಲಿಜ ಸಂಘಕ್ಕೆ ಸೇರ್ಪಡೆ ಮಾಡಿಕೊಂಡು ಸಂಘದ ಅಧ್ಯಕ್ಷ ಆರ್.ಬಾಬುರವರ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳೊಂದಿಗೆ ಕಚೇರಿ ಉದ್ಘಾಟಿಸಲಾಯಿತು.

ಈ ಕುರಿತು ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎಸ್. ನಿರಂಜನ್, ಶ್ರೀ ಯೋಗಿ ನಾರೇಯಣ ಬಲಿಜ ಸಂಘವು 2014ರಲ್ಲಿ ಸ್ಥಾಪನೆಯಾಗಿ ಇಂದಿಗೆ 9 ವರ್ಷಗಳು ಕಳೆದಿವೆ. ಸಂಘದ ವತಿಯಿಂದ ಸಂಘದ ಕಾರ್ಯ ಚಟುವಟಿಕೆಗಾಗಿ ಸ್ಥಳದ ಕೊರತೆಯಿದ್ದು, ಜಾಗ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರಸ್ತಾವನೆಯೂ ಪ್ರಗತಿಯ ಹಂತದಲ್ಲಿದೆ. ಮುಂದಿನ ಮಾ.7ರಂದು ತಾತಯ್ಯ ನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಸಂಘದ ವತಿಯಿಂದ ತೀರ್ಮಾನಿಸ ಲಾಗಿದೆ ಹಾಗೂ ಚಿಂತಾಮಣಿಯ ಐತಿಹಾಸಿಕ ಪ್ರಸಿದ್ಧ ಶ್ರೀ ಕೈವಾರ ಕ್ಷೇತ್ರಕ್ಕೆ ಸಂಘದ ವತಿಯಿಂದ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಆ ನಿಟ್ಟಿನಲ್ಲಿ ಸಂಘದ ವತಿಯಿಂದ ಮುಂದೆ ಅಭಿವೃದ್ಧಿಯ ಕಡೆ ಚಿಂತನೆ ನಡೆಸಲಾಗುವುದು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಎಂ.ಆರ್. ಗಣೇಶ್ ಮಾತನಾಡಿದರು. ಕಾರ್ಯದರ್ಶಿ ಟಿ.ಎನ್. ಜಯರಾಮ್, ಖಜಾಂಚಿ ಟಿ.ಪಿ. ಸತೀಶ್, ನಿರ್ದೇಶಕ ಸವಿತಾ ದಯಾನಂದ್, ಟಿ.ಆರ್. ತುಳಸಿ ಕಿರಣ್, ಶ್ರೀನಿವಾಸ್, ಸಿ.ಕೆ. ಕಾಂತರಾಜ್, ಎನ್ ಸ್ವಾಮಿ, ಸಿ.ಎನ್. ಮಹೇಶ್ ಮತ್ತಿತರರು ಹಾಜರಿದ್ದರು.



ಮೈಸೂರು ತಾಲೂಕಿನ ಕಡಕೊಳ ಪಟ್ಟಣ ಪಂಚಾಯಿತಿಯಲ್ಲಿ 2023–24ನೇ ಸಾಲಿನ ಆಯವ್ಯಯ ಕುರಿತು ಸಾರ್ವಜನಿಕ ಸಭೆ ನಡೆಯಿತು. ಈ ವೇಳೆ ಮುಖ್ಯಾಧಿಕಾರಿ ವೆಂಕಟೇಶ್, ದಿ ಯೂನಿಯನ್ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ. ಗ್ರಾಮ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಂಜಪ್ಪ ನಾಯಕ್, ಮಾಜಿ ಗ್ರಾಪಂ ಮಾಜಿ ಅಧ್ಯಕ್ಷ ಜೆ.ರಮೇಶ್, ಶಿವಕುಮಾರ್, ಎಲ್ಲಪ್ಪ ನಾಯಕ್, ನಾಗರಾಜು, ಜಮೀರ್ ಅಹಮದ್, ಕಿರಣ್, ರಾಕೇಶ್, ಅಧಿಕಾರಿಗಳಾದ ಮಹೇಶ್, ಶಿವಕುಮಾರ್, ಸತೀಶ್ ಕುಮಾರ್, ನಾಗೇಶ್, ರಾಮಚಂದ್ರು ಇತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟೇಗೌಡನಕೊಪ್ಪಲು ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದ ಸಿಸಿ ರಸ್ತೆಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡ ಗಗನ್, ಗ್ರಾಮದ ಮುಖಂಡರಾದ ಮಹದೇವಶೆಟ್ಟಿ, ವಿಎಸ್‌ಎಸ್‌ಎನ್ ಅಧ್ಯಕ್ಷ ರವಿ, ಜಗದೀಶ್, ಹಾರಂಗಿ ನೀರಾವರಿ ವಿಭಾಗದ ಸಹಾಯಕ ಕಾರ್ಯಪಾಲಕ ರಂಗಯ್ಯ, ಸಹಾಯಕ ಇಂಜಿನಿಯರ್ ಮಂಜುನಾಥ್, ಪಿಡಿಓ ರಾಜಶೇಖರ್, ಗ್ರಾಪಂ ಸದಸ್ಯರು ಇತರರಿದ್ದರು.

ಗೃಹಿಣಿಯೊಂದಿಗೆ ಸಲುಗೆಯಿಂದ ಇದ್ದ ವ್ಯಕ್ತಿ ಆಕೆಯ ಅರೆಬೆತ್ತಲೆ ಚಿತ್ರಣ ತೋರಿಸಿ ಬ್ಲಾಕ್‌ಮೇಲ್ ಯತ್ನ

ಚಾ.ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಚಾಮರಾಜನಗರ, ಫೆ.10–ಸಾಮಾಜಿಕ ಜಾಲತಾಣದ ಮೂಲಕ ಪರಿಚಯವಾದ ಗೃಹಿಣಿಯನ್ನು ಪುಸಲಾಯಿಸಿ ಅರೆಬೆತ್ತಲೆ ವೀಡಿಯೋ ಕಾಲ್ ರೆಕಾರ್ಡ್ ಮಾಡಿ ಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದ ಆರೋಪದ ಮೇರೆಗೆ ಬೆಳಗಾವಿಯುವನೆನ್ನಲಾದ ವ್ಯಕ್ತಿಯೋರ್ವನ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಕೊಳ್ಳೇಗಾಲ ತಾಲೂಕಿನ ಗ್ರಾಮವೊಂದರ 29 ವರ್ಷ ವಯಸ್ಸಿನ ಗೃಹಿಣಿಗೆ ಇನ್‌ಸ್ಟಾಗ್ರಾಂ ಮೂಲಕ ಬೆಳಗಾವಿ ಜಿಲ್ಲೆಯ ಮಹಾಲಿಂಗ ಪುರದವನಾದ ಅಜಿತ್ ಎಂಬಾತ ಕಳೆದ 3 ವರ್ಷದ ಹಿಂದೆ ಪರಿಚಯವಾಗಿದ್ದಾನೆ. ಇಬ್ಬರು ಸಲುಗೆಯಿಂದ ಮಾತನಾಡುತ್ತಾ, ಫೋನ್ ನಂಬರ್‌ಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. ಪದೇ ಪದೆ ಕರೆ ಮಾಡಿ ತನ್ನನ್ನು ಪ್ರೀತಿಸಬೇಕೆಂದು ಗೃಹಿಣಿಯನ್ನು ಆತ ಪೀಡಿಸಿದ್ದಾನೆ. ಈಕೆ ತನಗೆ ಮದುವೆಯಾಗಿದ್ದು, ಮಕ್ಕಳಿರುವ ಬಗ್ಗೆಯೂ ಹೇಳಿ ಪ್ರೀತಿಯನ್ನು ನಿರಾಕರಿಸಿದ್ದಾಳೆ.

ಆದರೂ ಬಿಡದ ಅಜಿತ್, ಒಮ್ಮೆ ವೀಡಿಯೋ ಕಾಲ್ ಮಾಡಿ ತನ್ನನ್ನು ಪ್ರೀತಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಕೈಯ್ಯನ್ನು ಕೊಯ್ದುಕೊಂಡಿದ್ದಾನೆ. ಇದರಿಂದ ಹೆದರಿದ ಗೃಹಿಣಿ ಆತನೊಂದಿಗೆ ಮತ್ತೆ ಸಲುಗೆಯಿಂದ ಮಾತನಾಡಲಾರಂಭಿಸಿದ್ದಾಳೆ. ಈ ವೇಳೆ ಆತ ಆಕೆಯನ್ನು ಅರೆಬೆತ್ತಲೆಯಾಗಿ ವೀಡಿಯೋ ಚಾಟ್ ಮಾಡುವಂತೆ ಪುಸಲಾಯಿಸಿದ್ದಾನೆ. ಅದೇ ವೇಳೆ ಆ ದೃಶ್ಯಗಳನ್ನು ರೆಕಾರ್ಡ್ ಮಾಡಿಕೊಂಡಿದ್ದಾನೆ. 2022ರ ನವೆಂಬರ್‌ನಲ್ಲಿ ತನ್ನ ಸ್ನೇಹಿತ ಆನಂದ್ ಎಂಬಾತನೊಡಗೂಡಿ ಕೊಳ್ಳೇಗಾಲಕ್ಕೆ ಬಂದಿದ್ದ ಅಜಿತ್, ಮರಡಿಗುಡ್ಡದಲ್ಲಿ ಗೃಹಿಣಿಯನ್ನು ಭೇಟಿ ಮಾಡಿ ಹೋಗಿದ್ದಾನೆ. ಈ ವಿಷಯ ತಿಳಿದು ಅಜಿತ್‌ನ ಪತ್ನಿ ಲಕ್ಷ್ಮಿ ಎಂಬಾಕೆ ಗೃಹಿಣಿಯೊಂದಿಗೆ ಗಲಾಟೆ ಮಾಡಿದ್ದಾಳೆ ಎಂದು ದೂರಿನಲ್ಲಿ ತಿಳಿಸ ಲಾಗಿದೆ. ಇದರಿಂದಾಗಿ ಗೃಹಿಣಿಯು ಅಜಿತ್‌ನ ನಂಬರ್ ಅನ್ನು ಬ್ಲಾಕ್ ಮಾಡಿದ್ದಲ್ಲದೇ, ತನ್ನ ಇನ್‌ಸ್ಟಾಗ್ರಾಂ ಖಾತೆಯನ್ನೂ ಡಿಲೀಟ್ ಮಾಡಿದ್ದಾಳೆ.

ಆಗ ಬೇರೆ ನಂಬರ್‌ನಿಂದ ಕಾಲ್ ಮಾಡಿದ ಅಜಿತ್, ಟಾರ್ಚರ್ ಕೊಡಲು ಪ್ರಾರಂಭಿಸಿದಾಗ ಆಕೆ ಸಿಮ್ ಬದಲಾಯಿಸಿದ್ದಾಳೆ. ಅಲ್ಲದೇ ಆತನಿಗೆ ಕರೆ ಮಾಡಿ ಇನ್ನು ಮುಂದೆ ತನ್ನ ನಂಬರ್‌ಗೆ ಕರೆ ಮಾಡಬಾರದೆಂದು ತಾಕೀತು ಮಾಡುವುದರ ಜೊತೆಗೆ ಕರೆ ಮಾಡಿದರೆ ಅದು ತನ್ನ ಪತಿಗೆ ಹೋಗುತ್ತದೆ ಎಂದು ಎಚ್ಚರಿಸಿದ್ದಾಳೆ. ಇದಾದ ಮರು ದಿನವೇ ಕೊಳ್ಳೇಗಾಲಕ್ಕೆ ಬಂದು ಗೃಹಿಣಿಯನ್ನು ಭೇಟಿ ಮಾಡಿದ ಆತ, ಆಕೆಗೆ ಕಾಲ್ ಚೈನ್ ಕೊಡಿಸಿ ಹಿಂತಿರುಗಿದ್ದಾನೆ. ನಂತರ ಸುಮ್ಮನಿರದ ಅಜಿತ್, ಗೃಹಿಣಿಯೊಂದಿಗೆ ತಾನು ಮಾತನಾಡಿದ ಕಾಲ್ ಡಿಟೈಲ್ಸ್ ಸ್ಕ್ರೀನ್ ಶಾಟ್, ಆಕೆಯ ಅರೆಬೆತ್ತಲೆ ಫೋಟೋ ಮತ್ತು ವೀಡಿಯೋ ಚಾಟ್ ವೇಳೆ ಅರೆನಗ್ನಳಾಗಿದ್ದ ವೀಡಿಯೋ ಫುಟೇಜ್‌ಗಳನ್ನು ಗೃಹಿಣಿಯ ಪತಿಗೆ ವಾಟ್ಸಾಪ್ ಮಾಡಿ, 50 ಸಾವಿರ ರೂ. ಕೊಡದಿದ್ದರೆ ವೀಡಿಯೋ ಹಾಗೂ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾನೆ ಎಂದು ಗೃಹಿಣಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಚಾಮರಾಜನಗರ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರಲ್ಲಿ ಮಹಾಶಿವರಾತ್ರಿಗೆ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 3ಡಿ ಮಾದರಿಯ ಶಿವಲಿಂಗ

- 5 ಲಕ್ಷಕ್ಕೂ ಅಧಿಕ ರುದ್ರಾಕ್ಷಿಯೊಂದಿಗೆ ಕಂಗೊಳಿಸಲಿದೆ
- ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿವಿಯಿಂದ ನಿರ್ಮಾಣ





ಮೈಸೂರು, ಫೆ.10(ಜಿಎ)– ಮೈಸೂರಿನಲ್ಲಿ ಮಹಾಶಿವರಾತ್ರಿಗೆ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 5 ಲಕ್ಷಕ್ಕೂ ಅಧಿಕ ರುದ್ರಾಕ್ಷಿಯೊಂದಿಗೆ ಶಿವಲಿಂಗ 3ಡಿ ಮಾದರಿಯಲ್ಲಿ ಕಂಗೊಳಿಸಲಿದೆ.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಆಲನಹಳ್ಳಿ ಸೇವಾ ಕೇಂದ್ರದ ವತಿಯಿಂದ ನಗರದ ಆಲನಹಳ್ಳಿಯ ಲಲಿತ ಮಹಲ್ ಅರಮನೆ ಮೈದಾನದಲ್ಲಿ ಮಹಾಶಿವರಾತ್ರಿಯ ಪ್ರಯುಕ್ತ ಬೃಹತ್ ಆಕಾರದ ಹಿಮಾಚ್ಛಾದಿತ ಕೈಲಾಸ ಪರ್ವತ ನಿರ್ಮಾಣಗೊಳ್ಳುತ್ತಿದ್ದು, ಸಿದ್ಧತಾ ಕಾರ್ಯಗಳು ಭರದಿಂದ ಸಾಗಿದೆ. ಮಹಾಶಿವರಾತ್ರಿಯಂದು ಭಾರತದಾದ್ಯಂತ ಶಿವ ಭಕ್ತಾದಿಗಳು ಹಿಮಾಲಯ, ಕೇದಾರನಾಥ, ಕಾಶಿ ವಿಶ್ವನಾಥ ಸೇರಿದಂತೆ ಸ್ಥಳೀಯ ಪ್ರಮುಖ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ. ಅದರಂತೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯವು ಅಷ್ಟು ದೂರ ತೆರಳಲು ಸಾಧ್ಯವಾಗದ ಶಿವ ಭಕ್ತರಿಗೆ ಅಲ್ಲಿನ ಪ್ರತಿಕೃತಿಗಳನ್ನು ಮೈಸೂರಿನ ಕೆಲವೆಡೆ ವಿಭಿನ್ನವಾಗಿ ನಿರ್ಮಿಸಿ, ವಿಶೇಷ ಅನುಭವವನ್ನು ನೀಡುತ್ತಿದ್ದಾರೆ. ಅಂತೆ ಕಳೆದ ಬಾರಿ ಬೃಹತ್ ತೆಂಗಿನ ಕಾಯಿ ಶಿವಲಿಂಗ ನಿರ್ಮಾಣ ಮಾಡಿ ಎಲ್ಲರ ಗಮನ ಸೆಳೆದಿತ್ತು.

ಈ ಬಾರಿಯೂ ವಿಭಿನ್ನವಾಗಿ 20 ಲಕ್ಷಕ್ಕೂ ಅಧಿಕ ವೆಚ್ಚದಲ್ಲಿ ಹಿಮಾಲಯದ ಪ್ರತಿಕೃತಿ ನಿರ್ಮಿಸಿ, ಅದರ ಮೇಲೆ 21 ಅಡಿಯ ಶಿವಲಿಂಗವೂ 5 ಲಕ್ಷಕ್ಕೂ ಅಧಿಕ ರುದ್ರಾಕ್ಷಿಗಳಿಂದ ನಿರ್ಮಾಣಗೊಳ್ಳಲಿದೆ. ಫೆ.1ರಿಂದ ಸಿದ್ಧತಾ ಕಾರ್ಯ ಆರಂಭವಾಗಿದ್ದು, 100X100 ಅಡಿ ಪ್ರದೇಶದಲ್ಲಿ ಪಿಓಪಿ, ಮರದ ಕಟ್ಟಿಗೆ ಗೋಣಿಯನ್ನು ಬಳಸಿ ಹಿಮಾಚ್ಛಾದಿತ ಕೈಲಾಸ ಪರ್ವತದ ಪ್ರತಿಕೃತಿ ಸಿದ್ಧವಾಗುತ್ತಿದ್ದು, ಸುಮಾರು 50ಕ್ಕೂ ಅಧಿಕ ಮಂದಿ ಪ್ರತಿಕೃತಿ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಅತ್ಯಂತ ಅಚ್ಚುಕಟ್ಟಾಗಿ ಕೈಲಾಸ ಪರ್ವತದ ಒಳ ಭಾಗದಲ್ಲಿ ಧ್ಯಾನ ಗುಹೆಯೂ ನಿರ್ಮಾಣಗೊಳ್ಳುತ್ತಿದ್ದು, ಅದರ ಸುತ್ತಲೂ ಜ್ಯೋತಿರ್ಲಿಂಗ ಮತ್ತು ಆಧ್ಯಾತ್ಮಿಕ ಚಿಂತನೆ ಹಾಗೂ ಶಿವ ಚರಿತ್ರೆಗಳು ಕಾಣಸಿಗಲಿವೆ. ಹರಿದ್ವಾರದಿಂದ ಮೈಸೂರು ತಲುಪಿರುವ 5,16,108 ಲಕ್ಷ ರುದ್ರಾಕ್ಷಿಯಿಂದ ನಿರ್ಮಾಣವಾಗಿರುವ 21 ಅಡಿ ಎತ್ತರ 20 ಅಡಿ ಅಗಲದ ಬೃಹತ್ ಶಿವಲಿಂಗವೂ ಕಂಗೊಳಿಸಲಿದ್ದು, ಫೆ.15ರಿಂದ ಫೆ.22ರವರೆಗೂ ಸಾರ್ವಜನಿಕರಿಗೆ ವೀಕ್ಷಣೆಗೆ ಉಚಿತವಿರಲಿದೆ.

ಪೊಲೀಸ್ ಸೋಗಿನಲ್ಲಿ ಬಂದು ಸ್ನೇಹಿತನೊಂದಿಗೆ ಮಾತನಾಡುತ್ತಾ ಕುಳಿತಿದ್ದ ಮಹಿಳೆ ಸರ ಸುಲಿಗೆ



ಮೈಸೂರು, ಫೆ.10–ಒಮ್ನಿಯಲ್ಲಿ ಕುಳಿತು ಸ್ನೇಹಿತನೊಂದಿಗೆ ಮಾತನಾಡುತ್ತಿದ್ದ ಗೃಹಿಣಿ ಬಳಿ ಪೊಲೀಸರ ಸೋಗಿನಲ್ಲಿ ಬಂದ ಖದೀಮನೋರ್ವ ಚಿನ್ನದ ಸರ ಪಡೆದು ಪರಾರಿಯಾಗಿರುವ ಘಟನೆ ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆದಿದೆ.

ಮೂಲತಃ ಕೊಡಗಿನ ವಿರಾಜಪೇಟೆ ತಾಲೂಕು ಚೆನ್ನಯ್ಯನ ಕೋಟೆ ಗ್ರಾಮದವರಾಗಿದ್ದು, ಮೈಸೂರಿನ ಸರಸ್ವತಿಪುರಂ ರೋಟರಿ ಶಾಲೆ ಮುಂಭಾಗದ ಅನಿಲ್ ಪಿಜಿಯಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಹೆಚ್.ಕೆ.ಶಶಿಕಲಾ(33) ಸರ ಕಳೆದುಕೊಂಡವರಾಗಿದ್ದು, ಇವರಿಗೆ ಸುಮಾರು 10 ವರ್ಷದಿಂದ ಪರಿಚಯವಿರುವ ಚೆನ್ನಯ್ಯನ ಕೋಟೆ ಗ್ರಾಮದ ಶಿವಲಿಂಗ ಅಲಿಯಾಸ್ ದಿನೇಶ್ ಎಂಬುವರು ಆಗಿಂದಾಗ್ಗೆ ಮೈಸೂರಿಗೆ ಬಂದು ಈಕೆಯನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದರು.

ಫೆ.8ರಂದು ತನ್ನ ಸ್ನೇಹಿತನ ಒಮ್ನಿ ವ್ಯಾನ್‌ನಲ್ಲಿ (ಕೆಎ 8 ಜೆಡ್ 6358) ಮೈಸೂರಿಗೆ ಬಂದಿದ್ದ ಶಿವಲಿಂಗ ಪಿಜಿಗೆ ಹೋಗಿ ಶಶಿಕಲಾ ಅವರನ್ನು ಕರೆದುಕೊಂಡು ರಿಂಗ್ ರಸ್ತೆಯಲ್ಲಿರುವ ಲಕ್ಷ್ಮಿ ಸ್ಟೀಲ್ಸ್ ಎದುರಿನ ಸರ್ವೀಸ್ ರಸ್ತೆಯಲ್ಲಿ ಒಮ್ನಿ ವ್ಯಾನ್ ಅನ್ನು ನಿಲ್ಲಿಸಿಕೊಂಡು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ವ್ಯಾನ್‌ನ ಹಿಂಬದಿ ಸೀಟ್‌ನಲ್ಲಿ ಇಬ್ಬರು ಕುಳಿತು ಸಂಸಾರದ ಕಷ್ಟ–ಸುಖಗಳ ಬಗ್ಗೆ ಮಾತನಾಡುತ್ತಿದ್ದ ವೇಳೆ ಪಲ್ಸರ್ ಬೈಕ್‌ನಲ್ಲಿ ಬಂದ ಖದೀಮ, ಇವರ ಕಾರಿನಲ್ಲಿ ಬಂದು ಕುಳಿತು ತಾನು ಪೊಲೀಸ್ ಎಂದು ಹೇಳಿಕೊಂಡಿದ್ದಲ್ಲದೇ ಇಬ್ಬರ ಪರ್ಸ್‌ಗಳನ್ನು ಪಡೆದು ಪರಿಶೀಲಿಸಿದ್ದಾನೆ. ಆದರೆ ಅದರಲ್ಲಿ ತಲಾ 500 ರೂ. ಮಾತ್ರ ಇದ್ದಿದ್ದರಿಂದ ನೀವಿಬ್ಬರೂ ಪೊಲೀಸ್ ಠಾಣೆಗೆ ಬರಬೇಕು ಎಂದು ತಾಕೀತು ಮಾಡಿದ್ದಾನೆ. ಮಧ್ಯೆ ನೀವು ತಪ್ಪಿಸಿಕೊಂಡು ಹೋಗಿಬಿಡಬಹುದು ಎಂದು ಹೇಳಿ ಶಶಿಕಲಾ ಕತ್ತಿನಲ್ಲಿದ್ದ 10 ಗ್ರಾಂ ತೂಕದ ಚಿನ್ನದ ಸರವನ್ನು ಪಡೆದು ತನ್ನ ಬೈಕ್ ಅನ್ನು ಹಿಂಬಾಲಿಸಿಕೊಂಡು ಠಾಣೆಗೆ ಬರುವಂತೆ ಸೂಚಿಸಿ ತೆರಳಿದ್ದಾನೆ. ಆದರೆ ಆತ ಬೈಕ್‌ನಲ್ಲಿ ರಾಜರಾಜೇಶ್ವರಿ ನಗರದ ಸಿಗ್ನಲ್‌ನಿಂದ ಎಡಕ್ಕೆ ತಿರುಗಿ ವೇಗವಾಗಿ ಹೋಗಿದ್ದರಿಂದ ಇವರು ಆತನನ್ನು ಹಿಂಬಾಲಿಸಲು ಸಾಧ್ಯವಾಗಿಲ್ಲ. ಜೊತೆಗೆ ಆತ ಪೊಲೀಸ್ ಅಲ್ಲ ಎಂಬುದು ಇವರಿಗೆ ಮನವರಿಕೆಯಾಗಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.14ಕ್ಕೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ಮೈಸೂರು, ಫೆ.10– ಫೆ.14 ರಂದು ಬೆಳಗ್ಗೆ 11ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಜಲು ವಾಹನ ರಹದಾರಿ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿದಾರರು ಸದರಿ ಸಭೆಗೆ ಅಗತ್ಯ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಹಾಜರಾಗಬೇಕೆಂದು ಕಾರ್ಯದರ್ಶಿ ಹಾಗೂ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ.50 ರಿಯಾಯಿತಿಯಲ್ಲಿ ದಂಡ ಪಾವತಿಗೆ ಇಂದು ಮಧ್ಯರಾತ್ರಿ 12 ಗಂಟೆವರೆಗೆ ಅವಕಾಶ

ಮೈಸೂರು, ಫೆ.10(ಆರ್‌ಕೆ)– ಶೇ.50 ರಷ್ಟು ರಿಯಾಯಿತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ದಂಡ ಪಾವತಿಸಲು ನಾಳೆ (ಫೆ.11) ಮಧ್ಯರಾತ್ರಿ 12 ಗಂಟೆವರೆಗೆ ಅವಕಾಶವಿದೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಸರ್ಕಾರ ಶೇ.50ರ ರಿಯಾಯಿತಿ ಘೋಷಿಸುತ್ತಿದ್ದಂತೆಯೇ ದಂಡದ ಹಣ ಪಾವತಿಸಿ ತಮ್ಮ ವಾಹನಗಳ ಮೇಲಿರುವ ಬಾಕಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾರ್ವಜನಿಕರು ಮುಂದೆ ಬರುತ್ತಿದ್ದು, ಎಲ್ಲಾ ಸಂಚಾರ ಠಾಣೆಗಳಲ್ಲಿ ಇಂದೂ ಕೂಡ ನೂಕು ನುಗ್ಗಲು ಉಂಟಾಗಿತ್ತು ಎಂದು ಅವರು ತಿಳಿಸಿದರು.

ನಾಳೆ (ಫೆ.11) ರಿಯಾಯಿತಿಗೆ ಕಡೇ ದಿನವಾಗಿರುವುದರಿಂದ ತಡ ರಾತ್ರಿ 12 ಗಂಟೆವರೆಗೂ ಅವಕಾಶ ಕಲ್ಪಿಸಲಾಗಿದ್ದು, ನಂತರ ಸಾಫ್ಟ್‌ವೇರ್ ಕಾರ್ಯ ಸ್ಥಗಿತಗೊಳ್ಳುತ್ತದೆ. ಆದ್ದರಿಂದ ಸಾರ್ವಜನಿಕರು ಕಡೇ ಅವಕಾಶ ಬಳಸಿಕೊಂಡು ತಡರಾತ್ರಿ 12 ಗಂಟೆಯೊಳಗಾಗಿ ಬಾಕಿ ದಂಡವನ್ನು ಪಾವತಿಸಬೇಕೆಂದು ಪರಶುರಾಮಪ್ಪ ತಿಳಿಸಿದ್ದಾರೆ. ಮೈಸೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಯಾಗಿದ್ದ 25,51,048 ಪ್ರಕರಣಗಳು ಬಾಕಿ ಇದ್ದು, ಒಟ್ಟು 127.83 ಕೋಟಿ ರೂ. ದಂಡ ಪಾವತಿಸಬೇಕಾಗಿತ್ತು. ನಿನ್ನೆ (ಗುರುವಾರ) ಸಂಜೆ 7 ಗಂಟೆವರೆಗೆ 3,92,97,700 ರೂ.ಗಳನ್ನು ಶೇ.50 ರಷ್ಟು ರಿಯಾಯಿತಿ ಅವಕಾಶ ಬಳಸಿಕೊಂಡು ಸಾರ್ವಜನಿಕರು ಪಾವತಿಸಿದ್ದರು. ರಿಯಾಯಿತಿಗೆ ಕಡೇ ದಿನದ ಮುನ್ನಾ ದಿನವಾದ ಇಂದು ಮಧ್ಯಾಹ್ನ 3 ಗಂಟೆವರೆಗೆ 5,03,51,150 ರೂ, ಸಂಜೆ 6 ಗಂಟೆವರೆಗೆ 5,65,21,650 ರೂ.ಗಳನ್ನು ಪಾವತಿಸಲಾಗಿದ್ದು, ಒಟ್ಟು 2,72,805 ಪ್ರಕರಣಗಳು ಇತ್ಯರ್ಥವಾದಂತಾಗಿದೆ ಎಂದು ಅವರು ತಿಳಿಸಿದ್ದಾರೆ.

ಕುಂಚಿಟಿಗರ ಸಂಘದ ಚುನಾವಣೆಗೆ ತಡೆಯಾಜ್ಞೆ

ಮೈಸೂರು, ಫೆ. 10– ಮೈಸೂರಿನ ಕುಂಚಿಟಿಗರ ಸಂಘಕ್ಕೆ ಫೆಬ್ರವರಿ 12ರಂದು ನಡೆಯಬೇಕಾಗಿದ್ದ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಸಂಘದ ಬೈಲಾ ಉಲ್ಲಂಘಿಸಿ ಕಾನೂನು ಬಾಹಿರವಾಗಿ ಸಂಘದ ಅಧ್ಯಕ್ಷ ಎಂ.ಪಿ. ನಾಗರಾಜ್ ಅವರು ಚುನಾವಣೆ ನಡೆಸಲು ಮುಂದಾಗಿದ್ದಾರೆ ಎಂದು ಆಕ್ಷೇಪಣೆ ವ್ಯಕ್ತಪಡಿಸಿ ಸಂಘದ ಕಾರ್ಯದರ್ಶಿ ಎಂ.ಆರ್. ಯೋಗೇಶ ಅವರು ರಾಜ್ಯ ಸರ್ಕಾರ, ಜಿಲ್ಲಾ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕುಂಚಿಟಿಗರ ಸೊಸೈಟಿ ಹಾಗೂ ಚುನಾವಣಾಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿಗಳು, ಫೆಬ್ರವರಿ 12ರ ಚುನಾವಣೆಗೆ ತಡೆಯಾಜ್ಞೆ ನೀಡಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಎಂ.ಆರ್. ಯೋಗೇಶ, ಆಂತರಿಕ ಲೆಕ್ಕ ಪರಿಶೋಧಕರಾದ ವಿಕ್ರಂ ಮಹಾದೇವ ಮತ್ತು ದಿನೇಶ್ ತಿಳಿಸಿದ್ದಾರೆ.

ನಾಳೆಯಿಂದ 15ರವರೆಗೆ ಕೆಲವೆಡೆ ನೀರು ಸರಬರಾಜು ವ್ಯತ್ಯಯ

ಮೈಸೂರು, ಫೆ.10– ನಗರದ ವಿವಿ ಮೊಹಲ್ಲಾ ಉಪ ವಿಭಾಗದಲ್ಲಿ ಚೆಸ್ಕಾನಿಂದ ತುರ್ತು ವಿದ್ಯುತ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.12 ಮತ್ತು 13 ರಂದು ವಾರ್ಡ್ ನಂ.4, 5, 6, 7, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ,, ಲೂರ್ದ್‌ನಗರ, ಮೀನಾ ಬಜಾರ್, ವಾರ್ಡ್ ಸಂಖ್ಯೆ 8, 17, 18, 19, 23 ರಿಂದ 27 ರವರೆಗೆ 40, 41, 55, 60, 61, 62 ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯವಾಗಲಿದೆ.

ಇದೇ ರೀತಿ ದೇವನೂರು ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ವತಿಯಿಂದ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.14 ಮತ್ತು 15 ರಂದು ವಾರ್ಡ್ ನಂ.9 ರಿಂದ 16, 28 ರಿಂದ 39, 52, 53, ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, ಕಲ್ಯಾಣಗಿರಿ, ಯರಗನಹಳ್ಳಿ, ಸಿದ್ದಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಮತದಾನ ಜಾಗೃತಿ ಕಾರ್ಯಕ್ರಮ

ಮೈಸೂರು, ಫೆ.10– ಮತದಾನವು ಪಿಸ್ತೂಲಿನಲ್ಲಿರುವ ಗುಂಡಿಗಿಂತಲೂ ಪ್ರಭಾವ ಶಾಲಿಯಾಗಿದೆ. 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯು ಮತದಾನ ಮಾಡಬೇಕು. ಮತವನ್ನು ಮಾರಿಕೊಳ್ಳಬಾರದು, ಮತವನ್ನು ದಾನ ಮಾಡಬೇಕು. ಇದು ದೇಶಕ್ಕೆ ನಾವು ನೀಡುವ ಕೊಡುಗೆ ಎಂದು ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್ ತಿಳಿಸಿದರು.

ವಿಧಾನಸಭಾ ಚುನಾವಣೆ–2023ರ ಹಿನ್ನೆಲೆ ನಂಜನಗೂಡು ತಾಲೂಕು ಪಂಚಾಯಿತಿಯಲ್ಲಿ ಮತದಾನ ಜಾಗೃತಿ ಕುರಿತು ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಇಂದು ಸಂಜೀವಿನಿ ಒಕ್ಕೂಟದ ಮಹಿಳೆಯರು ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ನಡೆದ ಸಭೆಯಲ್ಲಿ ಮಾತನಾಡಿದರು. ವಿನೂತನ ರೀತಿಯಲ್ಲಿ ಸ್ವೀಪ್ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಈ ಬಾರಿ ನಂಜನಗೂಡಿನಲ್ಲಿ ಹೆಚ್ಚು ಮತದಾನವಾಗುವಂತೆ ಎಲ್ಲರೂ ಶ್ರಮಿಸೋಣ. 18 ವರ್ಷ ಮೇಲ್ಪಟ್ಟ ಯಾರೊಬ್ಬರೂ ಮತದಾನದಿಂದ ಹೊರಗುಳಿಯದಂತೆ ನೋಡಿಕೊಳ್ಳೋಣ ಎಂದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಸಿ.ಕೆ. ಮಹೇಶ್ ಸೇರಿದಂತೆ, ತಾಲೂಕಿನ ಎನ್.ಆರ್.ಎಲ್.ಎಂ. ಸಿಬ್ಬಂದಿ, ತಾಲೂಕು ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು


ಮೈಸೂರು, ಫೆ.10–ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಕಾರಂಜಿ ಕೆರೆ ಜಂಕ್ಷನ್‌ನಲ್ಲಿ ಸಂಭವಿಸಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲೂಕು ಗುಂಡೇನಹಳ್ಳಿ ನಿವಾಸಿ ಜಿ.ಸಿ.ರಾಧಾಕೃಷ್ಣ(23) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ಮೈಸೂರಿನ ಗಿರಿದರ್ಶಿನಿ ಬಡಾವಣೆಯಲ್ಲಿರುವ ತನ್ನ ಸೋದರಮಾವ ಲಕ್ಷ್ಮಿನಾರಾಯಣ ಎಂಬುವರ ಮನೆಗೆ ಬಂದಿದ್ದ ಎಂದು ಹೇಳಲಾಗಿದೆ. ಜ.9ರಂದು ಬೆಳಗ್ಗೆ 10.30ರ ಸುಮಾರಿನಲ್ಲಿ ಈತ ಪಲ್ಸರ್ ಬೈಕ್ (ಕೆಎ 04 ಜೆಎಸ್ 9884) ನಲ್ಲಿ ಮೈಸೂರು ಸಿಟಿ ಕಡೆಯಿಂದ ಲೋಕರಂಜನ್ ರಸ್ತೆಯಲ್ಲಿ ತೆರಳುತ್ತಿದ್ದು, ಕಾರಂಜಿಕೆರೆ ಜಂಕ್ಷನ್‌ನಲ್ಲಿ ಬೈಕ್ ಅನ್ನು ಬಲಕ್ಕೆ ತಿರುಗಿಸಿದಾಗ ಲಲಿತ ಮಹಲ್ ಕಡೆಯಿಂದ ಬಂದ ಲಾರಿ (ಕೆಎ 01 ಎಹೆಚ್ 2329) ಈತನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿಯೊಂದಿಗಿನ ರಾಸಲೀಲೆ ವೀಡಿಯೋ ವೈರಲ್: ವ್ಯಕ್ತಿ ವಿರುದ್ಧ ಪ್ರಕರಣ ದಾಖಲು

ಬನ್ನೂರು, ಫೆ.10–ಗೃಹಿಣಿಯನ್ನು ಪುಸಲಾಯಿಸಿ ದೈಹಿಕ ಸಂಪರ್ಕ ಹೊಂದಿ, ಅದನ್ನು ವೀಡಿಯೋ ರೆಕಾರ್ಡ್ ಮಾಡಿಕೊಂಡಿದ್ದ ವ್ಯಕ್ತಿಯೋರ್ವ ಮತ್ತೆ ಆಕೆ ಸಹಕರಿಸದ ಕಾರಣ ವೀಡಿಯೋ ವೈರಲ್ ಮಾಡಿದ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ.

ತಿ.ನರಸೀಪುರ ತಾಲೂಕಿನ ಗ್ರಾಮವೊಂದರ ನಿವಾಸಿ ಯೋಗಾನಂದ ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಅದೇ ಗ್ರಾಮದ 26 ವರ್ಷದ ಗೃಹಿಣಿ ಜಮೀನಿನಲ್ಲಿ ಕೆಲಸಕ್ಕೆ ಹೋಗಿದ್ದಾಗ ಆಕೆಯನ್ನು ಬಲವಂತವಾಗಿ ಕತ್ತು ಹಿಡಿದು ಮುತ್ತು ಕೊಟ್ಟಿದ್ದಾನೆ. ಅಲ್ಲದೇ ಅದನ್ನು ಬೇರೆ ಯಾರಿಂದಲೋ ಮೊಬೈಲ್‌ನಲ್ಲಿ ಫೋಟೋ ತೆಗೆಸಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ. ಅದನ್ನು ತೋರಿಸಿಯೇ ಗೃಹಿಣಿಯನ್ನು ಪುಸಲಾಯಿಸಿದ ಈತ ಪತಿ ಇಲ್ಲದೇ ಇರುವಾಗ ಆಕೆಯ ಮನೆಯಲ್ಲಿ ಹಾಗೂ ಜಮೀನಿನ ಬಳಿ ಗೃಹಿಣಿ ಜೊತೆ ದೈಹಿಕ ಸಂಪರ್ಕ ಹೊಂದಿದ್ದಲ್ಲದೇ ಅದನ್ನು ವೀಡಿಯೋ ರೆಕಾರ್ಡ್ ಮಾಡಿಕೊಂಡಿದ್ದಾನೆ. ಕೆಲ ದಿನಗಳ ನಂತರ ಗೃಹಿಣಿ ಆತನಿಗೆ ಸಹಕರಿಸದಿದ್ದಾಗ ವೀಡಿಯೋ ಮತ್ತು ಫೋಟೋ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ಅದಕ್ಕೆ ಆಕೆ ಮಣಿಯದಿದ್ದಾಗ ಗ್ರಾಮದಲ್ಲಿ ತಮ್ಮ ಸ್ನೇಹಿತರಿಗೆ ಗೃಹಿಣಿಯೊಂದಿಗೆ ತಾನು ನಡೆಸಿದ ರಾಸಲೀಲೆ ವೀಡಿಯೋಗಳನ್ನು ವೈರಲ್ ಮಾಡಿದ್ದಾನೆ. ಈ ಸಂಬಂಧ ಗೃಹಿಣಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಬನ್ನೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮದುವೆಯಾಗುವುದಾಗಿ ನಂಬಿಸಿ ಲಕ್ಷಾಂತರ ಹಣ, ಚಿನ್ನಾಭರಣ ಪಡೆದು ವರ್ತಕನಿಗೆ ಮಹಿಳೆ ವಂಚನೆ



ಮೈಸೂರು, ಫೆ.10–ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆಯೋರ್ವಳು ಮದುವೆಯಾಗುವುದಾಗಿ ನಂಬಿಸಿ ರಾಜಾಸ್ಥಾನ ಮೂಲದ ವರ್ತಕನೊಬ್ಬನಿಂದ 10.29 ಲಕ್ಷ ರೂ. ಹಾಗೂ 16 ಗ್ರಾಂ ತೂಕದ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ರಾಜಾಸ್ಥಾನ ಮೂಲದ ಅಮರ್ ಸಿಂಗ್ (26) ವಂಚನೆಗೊಳಗಾದವರಾ ಗಿದ್ದು, ಇವರು ನಂಜನಗೂಡಿನಲ್ಲಿ ಕಳೆದ ಮೂರೂವರೆ ವರ್ಷದಿಂದ ತನ್ನ ದೊಡ್ಡಪ್ಪನ ಮಗ ಅಶೋಕನೊಡಗೂಡಿ ಪಾತ್ರೆ ವ್ಯಾಪಾರ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷದ ಹಿಂದೆ ಫೇಸ್‌ಬುಕ್ ಮೂಲಕ ವಿಜಯ ರಂಜಿನಿ ಎಂಬಾಕೆ ಇವರಿಗೆ ಪರಿಚಯವಾಗಿದ್ದಾಳೆ. ಮೆಸೆಂಜರ್‌ನಲ್ಲಿ ಚಾಟ್ ಮಾಡುತ್ತಿದ್ದ ಇವರು ಸಲುಗೆ ಬೆಳೆದಂತೆ ಫೋನ್ ನಂಬರ್‌ಗಳನ್ನು ವಿನಿಮಯ ಮಾಡಿ ಕೊಂಡಿದ್ದಾರೆ. ಈ ವೇಳೆ ಆಕೆ ತನಗೆ ಮದುವೆಯಾಗಿದ್ದು, ಗಂಡನಿಂದ ವಿಚ್ಛೇದನ ಪಡೆದು ತಂದೆ ಮನೆಯಲ್ಲಿ ವಾಸಿ ಸುತ್ತಿರುವುದಾಗಿಯೂ ಅಮರ್ ಸಿಂಗ್‌ನನ್ನು ಮದುವೆಯಾಲು ಸಿದ್ಧವಿರುವುದಾಗಿಯೂ ಪ್ರಸ್ತಾಪಿಸಿದ್ದಾಳೆ.

ಇದಕ್ಕೆ ಅಮರ್ ಸಿಂಗ್ ಸಮ್ಮತಿ ಸೂಚಿಸಿದಾಗ 2021ರ ಡಿಸೆಂಬರ್ ತಿಂಗಳಿನಲ್ಲಿ ಇವರಿಬ್ಬರೂ ಮೈಸೂರಿನ ಬೋಗಾದಿಯಲ್ಲಿರುವ ಪಾರ್ಕ್‌ವೊಂದರಲ್ಲಿ ಭೇಟಿಯಾಗಿದ್ದಾರೆ. ಆ ವೇಳೆ ತನ್ನ ತಂದೆಗೆ ಅನಾರೋಗ್ಯವೆಂದು ತಿಳಿಸಿ ಅಮರ್ ಸಿಂಗ್‌ನಿಂದ ವಿಜಯ ರಂಜಿನಿ 2021ರಿಂದ 2023ರ ಜ.16ರವರೆಗೆ ಹಂತ ಹಂತವಾಗಿ 10,29,403 ರೂ.ಗಳನ್ನು ತನ್ನ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡಿದ್ದಾಳೆ. ಮದುವೆಯಾಗಿರುವುದಾಗಿ ನಂಬಿಸಿದ್ದ ಈಕೆ ತಮಿಳುನಾಡಿನ ಸೇಲಂನಲ್ಲಿರುವ ಭೀಮಾ ಜ್ಯುವೆಲರ್‌ಗೆ ಅಮರ್ ಸಿಂಗ್‌ನನ್ನು ಕರೆದೊಯ್ದು 12.450 ಗ್ರಾಂ ತೂಕದ ಚಿನ್ನದ ಬ್ರೇಸ್‌ಲೆಟ್ ಮತ್ತು 3.680 ಗ್ರಾಂ ತೂಕದ ಚಿನ್ನದ ಕಿವಿಯ ಡ್ರಾಪ್ಸ್ ಅನ್ನು ಆತನಿಂದ ಪಡೆದಿದ್ದಾಳೆ.

2023ರ ಜ.30ರಂದು ಅಮರ್ ಸಿಂಗ್‌ಗೆ ಕರೆ ಮಾಡಿದ್ದ ವಿಜಯ ರಂಜಿನಿ, ಮೈಸೂರಿಗೆ ಬನ್ನಿ, ಯಾವುದಾದರೂ ದೇವಸ್ಥಾನದಲ್ಲಿ ಮದುವೆಯಾಗೋಣ ಎಂದು ತಿಳಿಸಿದ್ದಾಳೆ. ಆದರೆ ಒಂದು ಗಂಟೆ ನಂತರ ಮತ್ತೆ ಕರೆ ಮಾಡಿ ತನಗೆ ಹುಷಾರಿಲ್ಲ, ಆದ್ದರಿಂದ ಬೇರೊಂದು ದಿನ ಮದುವೆಯಾಗೋಣ ಎಂದು ತಿಳಿಸಿ ಕರೆ ಕಟ್ ಮಾಡಿದ್ದಾಳೆ. ನಂತರ ಅಮರ್ ಸಿಂಗ್ ವಿಜಯ ರಂಜಿನಿ ತಂದೆಗೆ ಕರೆ ಮಾಡಿ ಆಕೆ ಲಕ್ಷಾಂತರ ರೂ. ಹಣ ಪಡೆದಿದ್ದು, ಮದುವೆಯಾಗಲು ಸತಾಯಿಸುತ್ತಿದ್ದಾಳೆ ಎಂದು ತಿಳಿಸಿದಾಗ ಅವರು ತಮಗೂ, ಮಗಳಿಗೂ ಹೆಚ್ಚಿನ ಸಂಪರ್ಕವಿಲ್ಲ. ನೀವು ಏನಾದರೂ ಮಾಡಿಕೊಳ್ಳಿ ಎಂದು ಉತ್ತರಿಸಿದರಷ್ಟೇ. ಮತ್ತೆ ಆಕೆಗೆ ಅಮರ್ ಸಿಂಗ್ ಕರೆ ಮಾಡಿದಾಗ, ತನ್ನ ತಂಟೆಗೆ ಬಂದರೆ ನಮ್ಮ ಕಡೆಯವರು ನಿನಗೆ ಬುದ್ಧಿ ಕಲಿಸುತ್ತಾರೆ ಎಂದು ಬೆದರಿಕೆ ಹಾಕಿ ಕರೆ ಕಟ್ ಮಾಡಿದ್ದಾಳೆ. ಅಲ್ಲದೇ ಫೇಸ್‌ಬುಕ್‌ನಲ್ಲಿ ತನ್ನೊಂದಿಗೆ ಅಮರ್ ಸಿಂಗ್ ಚಾಟ್ ಮಾಡಲಾಗದಂತೆ ಮೆಸೆಂಜರ್ ಬ್ಲಾಕ್ ಮಾಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ರಾಜ್ಯ ಬಜೆಟ್‌ನಲ್ಲಿ ಕಾರ್ಮಿಕರ ನಾನಾ ಬೇಡಿಕೆಗಳಿಗೆ ಮನ್ನಣೆ ನೀಡಲು ಆಗ್ರಹಿಸಿ ಪ್ರತಿಭಟನೆ



ಮೈಸೂರು, ಫೆ10(ಎಂಟಿವೈ)– ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜಿಲ್ಲಾ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು, ರಾಜ್ಯದಲ್ಲಿ ಕಾರ್ಮಿಕರ ಹಿತ ಕಾಯಲು ಸರ್ಕಾರ ಮುಂದಾಗಬೇಕು. 29 ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿರುವ ಕೇಂದ್ರದ ಶಾಸನಗಳ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು. ಕಾರ್ಮಿಕರ ಪರವಾದ ಕಾನೂನುಗಳ ಜಾರಿ ಮಾಡಬೇಕು. ವಿದ್ಯುತ್ ಇಲಾಖೆಯನ್ನು ಖಾಸಗೀಕರಣ ಮಾಡುವ ಹುನ್ನಾರದಿಂದ ಹಿಂದೆ ಸರಿಯಬೇಕು. ವಿದ್ಯುತ್ ತಿದ್ದುಪಡಿ ಮಸೂದೆ 2020ನ್ನು ತಿರಸ್ಕರಿಸಬೇಕು. ಬೆಲೆ ಏರಿಕೆ ಆಧಾರದಲ್ಲಿ ತುಟ್ಟಿಭತ್ಯೆಯೊಂದಿಗೆ ಎಲ್ಲಾ ವಿಭಾಗಗಳ ಕಾರ್ಮಿಕರಿಗೂ ಕನಿಷ್ಠ ವೇತನ 31 ಸಾವಿರ ರೂ. ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಆಟೋ, ಟ್ಯಾಕ್ಸಿ ಸೇರಿದಂತೆ ವಿವಿಧ ಅಸಂಘಟಿತ ಸಾರಿಗೆ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಬೇಕು. ಹಮಾಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಟೈಲರ್, ಮನೆಗೆಲಸದ ಮಹಿಳೆಯರು ಸೇರಿ ವಿವಿಧ ವಿಭಾಗಗಳಿಗೆ ಈಗಾಗಲೇ ಕಾರ್ಮಿಕ ಇಲಾಖೆ ರೂಪಿಸಿರುವ ಅಸಂಘಟಿತ ಕಾರ್ಮಿಕರ ಭವಿಷ್ಯ ನಿಧಿ ಕರಡನ್ನು ಶಾಸನವನ್ನಾಗಿ ವಿಧಾನಸಭೆಯಲ್ಲಿ ಅಂಗೀಕರಿಸಬೇಕು. ಅದಕ್ಕೆ ಅಗತ್ಯವಿರುವ ಸೆಸ್ ಸಂಗ್ರಹಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ರಾಜ್ಯದಲ್ಲಿ ಕಾರ್ಖಾನೆ ಕಾಯ್ದೆಗೆ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ಕೈಗಾರಿಕಾ ನಿಶ್ಚಿತ ಕಾಲಾವಧಿ ಕಾರ್ಮಿಕರ ನೇಮಕದ ಮಾದರಿ ಸ್ಥಾಯಿ ಆದೇಶಗಳಿಗೆ ಮಾಡಲಾಗಿರುವ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ವಾಪಸ್ಸು ಪಡೆಯಬೇಕು. ಸಾರ್ವಜನಿಕ ಉದ್ದಿಮೆಗಳ ಹಾಗೂ ಸೇವೆಗಳ ಖಾಸಗೀಕರಣದ ನೀತಿಗಳನ್ನು ಕೈಬಿಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆಯನ್ನು ಬಲಪಡಿಸಿ ಅಭಿವೃದ್ಧಿಪಡಿಸಬೇಕು. ಬಿಸಿಯೂಟ ನೌಕರರಿಗೆ ವೇತನ ಹೆಚ್ಚಳ ಮಾಡಬೇಕು. ನಿವೃತ್ತಿ ವೇತನ ಸೌಲಭ್ಯವಿಲ್ಲದೆ ಯಾರನ್ನೂ ಕೆಲಸದಿಂದ ಬಿಡುಗಡೆ ಮಾಡಬಾರದು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜಿಲ್ಲಾಧ್ಯಕ್ಷ ಜಿ.ಜಯರಾಂ, ಪ್ರಧಾನ ಕಾರ್ಯದರ್ಶಿ ಬಾಲಾಜಿ ರಾವ್, ಕಾರ್ಯಾಧ್ಯಕ್ಷ ಎಚ್.ಎಸ್. ಜಗದೀಶ್, ಎಂ. ಅಣ್ಣಪ್ಪ ಬಾಲಾಜಿ ರಾವ್, ಲೋಕೇಶ, ಮಹಬೂಬ್, ರಾಜು, ವೆಂಕಟೇಶ್, ಬಸವರಾಜು, ಶ್ರೀಕಾಂತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮುಖ್ಯ ರಸ್ತೆ ಪಕ್ಕದಲ್ಲಿ ಕಸ ಸುರಿದವರಿಗೆ 10 ಸಾವಿರ ರೂ. ದಂಡ

ಮಡಿಕೇರಿ, ಫೆ.10– ವಾಲ್ನೂರು–ತ್ಯಾಗತ್ತೂರು ಗ್ರಾಪಂ ವ್ಯಾಪ್ತಿಯ ಅಭ್ಯತ್ ಮಂಗಲ ವಾರ್ಡ್‌ಗೆ ಸೇರಿದ ಮುಖ್ಯ ರಸ್ತೆಯ ಪಕ್ಕದಲ್ಲಿ ಅನಧಿಕೃತವಾಗಿ ಕಸ ಸುರಿದವರಿಗೆ ಗ್ರಾಪಂನಿಂದ 10 ಸಾವಿರ ರೂ. ದಂಡ ವಿಧಿಸಲಾಗಿದೆ.

ಕಸದ ರಾಶಿಯ ಬಗ್ಗೆ ಸಾರ್ವಜನಿಕರಿಂದ ಬಂದ ಖಚಿತ ಮಾಹಿತಿಯ ಮೇರೆಗೆ ಜನಪ್ರತಿನಿಧಿಗಳು ಮತ್ತು ಗ್ರಾಪಂ ಸಿಬ್ಬಂದಿ ಹಾಗೂ ನೌಕರರೊಡನೆ ಕಾರ್ಯಾಚರಣೆ ನಡೆಸಿ ಕಸದಲ್ಲಿ ದೊರೆತ ಮೊಬೈಲ್ ಸಂಖ್ಯೆಯನ್ನು ಆಧರಿಸಿ ಸಂಬಂಧಪಟ್ಟವರಿಗೆ ದಂಡವನ್ನು ವಿಧಿಸಿ, ಮತ್ತೆ ಕಸ ಸುರಿಯದಂತೆ ಎಚ್ಚರಿಕೆ ನೀಡಲಾಯಿತು.

ಇಂದು ಶ್ರೀ ಮಡಿವಾಳ ಮಾಚಿದೇವ ಜಯಂತಿ

ಮಡಿಕೇರಿ, ಫೆ.10– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಗೂ ಮಡಿವಾಳರ ಅಭಿವೃದ್ಧಿ ಸಂಘದ ಸಹಭಾಗಿತ್ವದಲ್ಲಿ ಶ್ರೀ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ ಫೆ.11 ರಂದು ಸಂಜೆ 4 ಗಂಟೆಗೆ ನಗರದ ಮಡಿಕಟ್ಟೆ, ದಾಸವಾಳ ರಸ್ತೆಯಲ್ಲಿರುವ ಶ್ರೀ ವೀರಭದ್ರ ಮುನೇಶ್ವರ ದೇವಾಲಯ ಸಭಾಂಗಣದಲ್ಲಿ ನಡೆಯಲಿದೆ.

ಶಾಲಾ ಶಿಕ್ಷಣ, ಸಾಕ್ಷರತೆ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ. ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಎಂ.ಪಿ.ಸುಜಾಕುಶಾಲಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎಲ್. ಭೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಇತರರು ಪಾಲ್ಗೊಳ್ಳಲಿದ್ದಾರೆ.

ಅಂಚೆ ಅದಾಲತ್ ಸಭೆ

ಮಡಿಕೇರಿ, ಫೆ10– ಅಂಚೆ ಅದಾಲತ್‌ನ ಮುಂದಿನ ಸಭೆಯು ಫೆ.24 ರಂದು ಮಧ್ಯಾಹ್ನ 3 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿಯಲ್ಲಿ ನಡೆಯಲಿದೆ. ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ಎಲ್ಲಾ ತರಹದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ದೂರುಗಳಿದ್ದಲ್ಲಿ 'ಅಂಚೆ ಅದಾಲತ್' ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿಗೆ ಫೆ.23 ರೊಳಗೆ ತಲುಪುವಂತೆ ಕಳುಹಿಸಲು ಕೋರಿದೆ.

ರಾಷ್ಟ್ರೀಯ ಗ್ರಂಥಾಲಯ ಸಮ್ಮೇಳನಕ್ಕೆ ಚಾಲನೆ

ಆರೋಗ್ಯ ವಿಜ್ಞಾನ ಗ್ರಂಥಾಲಯಗಳು ಮಾಹಿತಿ, ಜ್ಞಾನದ ಭಂಡಾರ: ಡಾ.ಕೆಂಪರಾಜು



ಮಡಿಕೇರಿ, ಫೆ.10– ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗ್ರಂಥಾಲಯ ವಿಭಾಗ ವತಿಯಿಂದ ಕರ್ನಾಟಕ ಆರೋಗ್ಯ ವಿಜ್ಞಾನಗಳ ಗ್ರಂಥಾಲಯಗಳ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಮತ್ತು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ಕಾಲ ಏರ್ಪಡಿಸಿರುವ 14 ನೇ 'ರಾಷ್ಟ್ರೀಯ ಗ್ರಂಥಾಲಯ ಸಮ್ಮೇಳನ'ಕ್ಕೆ ಶುಕ್ರವಾರ ಗಣ್ಯರಿಂದ ಚಾಲನೆ ದೊರೆಯಿತು. ಈ ಬಾರಿ ಗ್ರಂಥಪಾಲಕರು ಮತ್ತು ವೈದ್ಯರಿಗೆ ಆರೋಗ್ಯ ವಿಜ್ಞಾನದ ಮಾಹಿತಿ ಎಂಬ ಶೀರ್ಷಿಕೆಯಡಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಟಿ.ಡಿ.ಕೆಂಪರಾಜು ಅವರು ಮಾತನಾಡಿ ಭಾರತವನ್ನು ಜ್ಞಾನ ಸಮಾಜವಾಗಿ, ಗ್ರಂಥಾ ಲಯಗಳಾಗಿ ಪರಿವರ್ತಿಸುವುದು ದೃಷ್ಟಿಯಾಗಿದೆ. ಆ ನಿಟ್ಟಿನಲ್ಲಿ ಆಧುನಿಕ ದಿನಗಳಲ್ಲಿ ಗ್ರಂಥಾಲಯಗಳು ತಮ್ಮ ಕಾರ್ಯಕ್ರಮ, ಕಾರ್ಯವಿಧಾನಗಳು, ಉಪಕರಣಗಳು ಮತ್ತು ತಂತ್ರಗಳನ್ನು ವಿವಿಧ ಗ್ರಂಥಾಲಯದ ಕೆಲಸಗಳು ಮತ್ತು ಸೇವೆಗಳಲ್ಲಿ ಮರು ವಿನ್ಯಾಸಗೊಳಿಸುವ ಅಗತ್ಯವಿದೆ ಎಂದರು. ಕರ್ನಾಟಕ ಆರೋಗ್ಯ ವಿಜ್ಞಾನಗಳ ಗ್ರಂಥಾಲಯಗಳ ಸಂಘದ ಅಧ್ಯಕ್ಷರಾದ ಡಾ.ಎಚ್.ಎಸ್. ಸಿದ್ದಮಲ್ಲಯ್ಯ ಅವರು ಮಾತನಾಡಿ ಗ್ರಂಥಾಲಯಗಳ ಸಂಘವು ಪ್ರತಿ ವರ್ಷ ವಿವಿಧ ವೈದ್ಯಕೀಯ ಕಾಲೇಜಿನಲ್ಲಿ ಸಮ್ಮೇಳನವನ್ನು ಆಯೋಜಿಸುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಂಶುಪಾಲರಾದ ಡಾ.ವಿಶಾಲ್ ಕುಮಾರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಸ್ವಾಮಿ ಎ.ಎಲ್, ವೈದ್ಯಕೀಯ ಅಧೀಕ್ಷರಾದ ಡಾ.ರೂಪೇಶ್ ಗೋಪಾಲ್, ಸಂಸ್ಥೆಯ ಆರ್ಥಿಕ ಸಲಹೆಗಾರರಾದ ಕೆ.ಆನಂದ, ಡಾ.ಮೇದಾ ಜೋಶಿ, ಸಂಸ್ಥೆಯ ಮಕ್ಕಳ ವಿಭಾಗದ ಪ್ರಾಧ್ಯಾಪಕರಾದ ಡಾ.ಪುರುಷೋತ್ತಮ್ ಡಿ.ಆರ್. ಅವರು ಮಾತನಾಡಿದರು. ಸಭಾ ಕಾರ್ಯಕ್ರಮದ ನಂತರ ವಿವಿಧ ವಿಷಯಗಳ ಬಗ್ಗೆ ವೈಜ್ಞಾನಿಕ ಕಾರ್ಯಕ್ರಮ ನಡೆಯಿತು.

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಟಿ.ಡಿ.ಕೆಂಪರಾಜು, ಕೊಡಗು ವೈದ್ಯಕೀಯ ಕಾಲೇಜಿನ ನಿವೃತ ಮುಖ್ಯ ಆಡಳಿತಾಧಿಕಾರಿ ಮೇರಿ ನಾಣಯ್ಯ ಹಾಗೂ ಇತರರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ಹಾಗೂ ಮುಖ್ಯ ಗ್ರಂಥಪಾಲ ಸ್ವಾಮಿ ನಾಯಕ ಸಿ.ಕೆ, ಕಾಲೇಜಿನ ಅಕಾಡೆಮಿಕ್ ರಿಜಿಸ್ಟ್ರಾರ್ ಡಾ.ರವಿಕಿರಣ್ ಕಿಸಾನ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ನಂಜುಂಡಯ್ಯ, ಸ್ಥಾನೀಯ ವೈದ್ಯಾಧಿಕಾರಿ ಡಾ.ಸತೀಶ್ ವಿ.ಎಸ್. ಇತರರು ಇದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಆರೋಗ್ಯ ವಿಜ್ಞಾನಗಳ ಗ್ರಂಥಾಲಯಗಳ ಸಂಘದ ಪದಾಧಿಕಾರಿಗಳು ಸೇರಿದಂತೆ ರಾಜ್ಯ ಹಾಗೂ ದೇಶದ ವಿವಿಧ ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್, ಪ್ಯಾರಾಮೆಡಿಕಲ್ ಮತ್ತು ಫಿಸಿಯೋ ಥೆರಪಿ ಕಾಲೇಜುಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಡಾ.ವಿಶಾಲ್ ಕುಮಾರ್ ಸ್ವಾಗತಿಸಿದರು. ಡಾ.ನರಸಿಂಹ ಬಿ.ಸಿ ವಂದಿಸಿದರು.

ಹಿರಿಯ ಕಾಂಗ್ರೆಸ್ ಮುಖಂಡ ಟಿ. ಜಾನ್ ನಿಧನ

ಮಡಿಕೇರಿ, ಫೆ.10– ಕೊಡಗಿನ ಹಿರಿಯ ರಾಜಕಾರಣಿ, ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿದ್ದ ಮಾಜಿ ಸಚಿವ ಟಿ.ಜಾನ್(92) ಬೆಂಗಳೂರಿನ ತಮ್ಮ ನಿವಾಸದಲ್ಲಿ ಚಿರನಿದ್ರೆಗೆ ಜಾರಿದ್ದಾರೆ. ಮೃತರ ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ಶನಿವಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಮೃತರು ಪತ್ನಿ ಚಾಚಮ್ಮ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಅಪಾರವಾದ ಕೊಡುಗೆ ನೀಡಿದ್ದ ಟಿ.ಜಾನ್ ಅವರು, ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಕೊಡಗಿನ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಇದೇ ಅವಧಿಯಲ್ಲಿ ರಾಜ್ಯ ಮೂಲಭೂತ ಸೌಲಭ್ಯ ಮತ್ತು ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಕಾಂಗ್ರೆಸ್ ಪಕ್ಷ ನಿಷ್ಠೆಯೊಂದಿಗೆ ಜನಾನುರಾಗಿಯಾಗಿದ್ದ ಟಿ.ಜಾನ್ ಅವರು, ಕೊಡಗಿನ ವಿವಿಧೆಡೆಗಳಲ್ಲಿನ ಅಭಿವೃದ್ಧಿ ಪರ ಕಾರ್ಯಗಳಿಗೆ, ಸಂಘ ಸಂಸ್ಥೆಗಳಿಗೆ ಜಾತಿ ಮತಗಳ ಭೇದವಿಲ್ಲದೆ ನೆರವನ್ನು ನೀಡುವ ಮೂಲಕ ಕೊಡುಗೈ ದಾನಿ ಎಂದೇ ಖ್ಯಾತರಾಗಿದ್ದರು.

ನೆರೆಯ ಕೇರಳದ ಕೊಟ್ಟಾಯಂನ ವೈಕೋಂನಲ್ಲಿ 1931ರ ಅಕ್ಟೋಬರ್ 9ರಂದು ಜನಿಸಿದ ಟಿ.ಜಾನ್ ಅವರು, ಕೊಡಗನ್ನು ತಮ್ಮ ಬದುಕಿನ ನೆಲೆಯಾಗಿ ಗುರುತಿಸಿಕೊಂಡು, ತಮ್ಮ ಕಾರ್ಯಚಟುವಟಿಕೆಗಳ ಮೂಲಕ ಉನ್ನತ ಸ್ಥಾನಕ್ಕೇರಿದ್ದರು. ಇವರು ರಾಜಕೀಯದೊಂದಿಗೆ ಉದ್ಯಮದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಲ್ಲದೇ, ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ ತಮ್ಮ ಛಾಪನ್ನು ಮೂಡಿಸಿದ್ದರು. ಟಿ.ಜಾನ್ ಅವರು ಬದುಕಿನ ತಮ್ಮ ಬಹು ಕಾಲವನ್ನು ಮಡಿಕೇರಿಯ ಗಣಪತಿ ಬೀದಿಯಲ್ಲಿನ ಮನೆಯಲ್ಲಿ ಕಳೆದಿದ್ದು, ಇಳಿ ಪ್ರಾಯದಲ್ಲಿ ಬೆಂಗಳೂರಿನಲ್ಲಿ ತಮ್ಮ ಕುಟುಂಬದೊಂದಿಗೆ ನೆಲೆಸಿದ್ದರು.

ಸಂತಾಪ: ಹಿರಿಯ ರಾಜಕಾರಣಿ, ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಟಿ.ಜಾನ್ ಅವರ ನಿಧನಕ್ಕೆ ಕೊಡಗು ಜಿಲ್ಲಾ ಕಾಂಗ್ರೆಸ್ ಮುಖಂಡರು, ಕ್ರೈಸ್ತ ಸೇವಾ ಸಂಘದ ಅಧ್ಯಕ್ಷ ಕೆ.ಟಿ.ಬೇಬಿ ಮ್ಯಾಥ್ಯು ಹಾಗೂ ಮಡಿಕೇರಿ ನಗರ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೆ.ಜಿ.ಪೀಟರ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಕಾರ್ಮಿಕರ ವೇತನ ಹೆಚ್ಚಳ, ಬೆಲೆ ನಿಯಂತ್ರಣಕ್ಕೆ ಆಗ್ರಹಿಸಿ ಮಡಿಕೇರಿಯಲ್ಲಿ ಸಿಐಟಿಯು ಪ್ರತಿಭಟನೆ



ಮಡಿಕೇರಿ, ಫೆ.10– ಸಂಘಟಿತ ಕಾರ್ಮಿಕರಿಗೆ ವೇತನ ಹೆಚ್ಚಿಸಬೇಕು, ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ಸಂಘಟನೆ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ನೌಕರರು, ಕಟ್ಟಡ ಹಾಗೂ ತೋಟ ಕಾರ್ಮಿಕರು, ಹೊರಗುತ್ತಿಗೆ ಕಾರ್ಮಿಕರಿಗೆ ಬೆಲೆ ಏರಿಕೆಗೆ ಅನುಗುಣವಾಗಿ 31 ಸಾವಿರ ರೂಪಾಯಿಗಳ ಕನಿಷ್ಠ ವೇತನ ನಿಗದಿಮಾಡಬೇಕು. ಹೊರಗುತ್ತಿಗೆ ಕಾರ್ಮಿಕರನ್ನು ಕಡಿಮೆ ವೇತನ ನೀಡಿ ಹೆಚ್ಚಿನ ವೇಳೆ ದುಡಿಸಿಕೊಳ್ಳಲಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಸರಕಾರ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಪ್ರಸ್ತುತ ಸಾಲಿನ ಬಜೆಟ್‌ನಲ್ಲಿ ಸರಕಾರ ಅಂಗೀಕರಿಸಬೇಕೆಂದು ಒತ್ತಾಯಿಸಿದರು. ಬಳಿಕ ಪ್ರತಿಭಟನೆಯ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಸಲ್ಲಿಸಲಾಯಿತು.

ಗಾಂಜಾ ಮಾರುತ್ತಿದ್ದ ನಾಲ್ವರ ಬಂಧನ

2 ಕೆಜಿಗೂ ಅಧಿಕ ಗಾಂಜಾ, ಕಾರು, ಸ್ಕೂಟರ್, ಆಟೋ, ಮೊಬೈಲ್‌ಗಳ ವಶ

ವಿರಾಜಪೇಟೆ ನಗರ, ಗ್ರಾಮಾಂತರ ಪೊಲೀಸರ ಪ್ರತ್ಯೇಕ ಕಾರ್ಯಾಚರಣೆ

ವಿರಾಜಪೇಟೆ, ಫೆ10– ವಿರಾಜಪೇಟೆ ನಗರ ಮತ್ತು ಗ್ರಾಮಾಂತರ ಠಾಣೆ ಪೊಲೀಸರು ಪ್ರತ್ಯೇಕವಾಗಿ ದಾಳಿ ನಡೆಸಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿ ಎರಡು ಕೆಜಿಗೂ ಹೆಚ್ಚು ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಗುರುವಾರ ಬೆಳಗ್ಗೆ ಆರ್ಜಿ ಗ್ರಾಮದ ಕಿರುಮಕ್ಕಿ ರಸ್ತೆ ಜಂಕ್ಷನ್‌ನಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವಿಷಯ ತಿಳಿದ ನಗರ ಠಾಣೆ ಪೊಲೀಸರು ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿ, ಅವರಿಂದ 1 ಕೆಜಿ 561 ಗ್ರಾಂ ಗಾಂಜಾ ಮತ್ತು ಮಾರಾಟಕ್ಕೆ ಬಳಸಿದ್ದ ಗೂಡ್ಸ್ ಆಟೋ (ಕೆಎ12 ಎ4926) ಮತ್ತು ಆಲ್ಟೋ ಕಾರು (ಕೆಎ50 ಎಂಬಿ1186), 990 ರೂ. ನಗದು ಹಾಗೂ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ವಿರಾಜಪೇಟೆ ತಾಲೂಕು ಕಾಕೋಟು ಪರಂಬುವಿನ ವಾಸಿ ವಿ.ಆರ್. ಕಿರಣ್‌ಕುಮಾರ್ (32), ಸುಂಟಿಕೊಪ್ಪದ ಹರಂಗದೂರು ವಾಸಿ ಹೆಚ್.ಡಿ. ವೇಣುಕುಮಾರ್ (29) ಹಾಗೂ ಅರಸುನಗರದ ಎಂ. ಜೀವನ್ ಕುಮಾರ್ (30) ಬಂಧಿತ ಆರೋಪಿಗಳಾಗಿದ್ದಾರೆ.

ಅದೇ ದಿನ ಮಧ್ಯಾಹ್ನ ಮತ್ತೊಂದು ಪ್ರಕರಣದಲ್ಲಿ ವಿರಾಜಪೇಟೆ ಗ್ರಾಮಾಂತರ ಪೊಲೀಸರು ತಮಗೆ ದೊರೆತ ಖಚಿತ ಮಾಹಿತಿ ಮೇರೆಗೆ ಬಿಟ್ಟಂಗಾಲ ಗ್ರಾಮದ ಬಳಿ ದಾಳಿ ನಡೆಸಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿ ವಿರಾಜಪೇಟೆ ತಾಲೂಕಿನ ಪೆರುಂಬಾಡಿ ವಾಸಿ ರಶೀದ್ ಎಂಬಾತನನ್ನು ಬಂಧಿಸಿ, ಆತನಿಂದ 535 ಗ್ರಾಂ ಗಾಂಜಾ ಮತ್ತು ಕೃತ್ಯಕ್ಕೆ ಬಳಸಿದ್ದ ಬಜಾಜ್ ಸ್ಕೂಟರ್ ಮತ್ತು ಮೊಬೈಲ್ ಅನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ಅಡಿಷನ್ ಎಸ್ಪಿ ಸುಂದರ್ ರಾಜ್, ಡಿವೈಎಸ್ಪಿ ನಿರಂಜನ ರಾಜೇಅರಸ್ ನೇತೃತ್ವದಲ್ಲಿ ನಡೆದ ಈ ಎರಡು ಪ್ರಕರಣಗಳ ಕಾರ್ಯಾಚರಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ, ಸಬ್‌ಇನ್ಸ್‌ಪೆಕ್ಟರ್ ಡಿ.ಆರ್. ರವಿಕುಮಾರ್, ಸಿಬ್ಬಂದಿಗಳಾದ ಸತೀಶ್, ಜೋಶ್ ನಿಶಾಂತ್, ರಾಮಪ್ಪ, ಧರ್ಮ, ಗಿರೀಶ್, ಪ್ರವೀಣ್, ಸಾಗರ್ ಅವರುಗಳು ಭಾಗವಹಿಸಿದ್ದರು. ವಿರಾಜಪೇಟೆ ನಗರ ಮತ್ತು ಗ್ರಾಮಾಂತರ ಪೊಲೀಸರ ಈ ಕಾರ್ಯಾಚರಣೆ ಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಶ್ಲಾಘಿಸಿದ್ದಾರೆ.

ಕಾರಿನಲ್ಲಿ ಶ್ರೀಗಂಧ ತುಂಡುಗಳ ಸಾಗಾಟ; ಆರೋಪಿ ಪರಾರಿ, ಕಾರು, ಮರದ ತುಂಡು ವಶ



ಮಡಿಕೇರಿ, ಫೆ.10– ಕಾರಿನಲ್ಲಿ ಅಕ್ರಮವಾಗಿ ಶ್ರೀಗಂಧ ಮರದ ಕೊರಡುಗಳನ್ನು ಸಾಗಿಸುತ್ತಿದ್ದ ಪ್ರಕರಣವನ್ನು ಮಡಿಕೇರಿ ವಲಯ ಅರಣ್ಯ ಇಲಾಖೆ ಪತ್ತೆ ಹಚ್ಚಿದೆ. ಮೇಕೇರಿ ಬಳಿ ಈ ಘಟನೆ ನಡೆದಿದ್ದು, ಕೃತ್ಯಕ್ಕೆ ಬಳಸಿದ್ದ ಕಾರು ಸಹಿತ ಒಟ್ಟು 3 ಲಕ್ಷ ರೂ. ಮೌಲ್ಯದ ಶ್ರೀಗಂಧದ ಕೊರಡು ಹಾಗೂ ಮರ ಕತ್ತರಿಸುವ ಒಂದು ಯಂತ್ರವನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣದ ಆರೋಪಿ ದಾಳಿಯ ಸಂದರ್ಭ ಪರಾರಿಯಾಗಿದ್ದು, ಆತನ ಪತ್ತೆಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ.

ಡಿಸಿಎಫ್ ಎ.ಟಿ. ಪೂವಯ್ಯ ಮಾರ್ಗದರ್ಶನದಲ್ಲಿ ಎಸಿಎಫ್ ಮೋಷೀನ್ ಬಾಷಾ, ನೇತೃತ್ವದಲ್ಲಿ ಮಡಿಕೇರಿ ವಲಯ ಆರ್‌ಎಫ್‌ಓ ಹನುಮಂತ ರಾಜು, ಡಿಆರ್‌ಎಫ್‌ಓಗಳಾದ ಬಾಬು ರಾಥೋಡ್, ಮಲ್ಲಯ್ಯ ಹೀರೇಮಠ, ಅರಣ್ಯ ಪಾಲಕಿ ಭವ್ಯ ಯತೀಶ್, ಅರಣ್ಯ ವೀಕ್ಷಕರಾದ ವಾಸುದೇವ, ವಾಹನ ಚಾಲಕ ಸಂಜು, ಮೋಹನ್, ಕುಶ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಖಚಿತ

ಚಾ.ನಗರ ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷರಾಗಿ ನಾರಾಯಣ್‌ಪ್ರಸಾದ್ ಅಧಿಕಾರ ಸ್ವೀಕಾರ



ನಾವೆಲ್ಲರು ಒಗ್ಗಟ್ಟಿನಿಂದ ಜಿಲ್ಲೆಯಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯನ್ಮುಖರಾಗೋಣ. ನಿಮ್ಮೆಲ್ಲರ ಪ್ರೀತಿ–ವಿಶ್ವಾಸದಿಂದಾಗಿ ವರಿಷ್ಠರು ಈ ಜವಾಬ್ದಾರಿ ನೀಡಿದ್ದಾರೆ. ಎಲ್ಲರೂ ವಿಶ್ವಾಸ–ಸಹಕಾರ ಪಡೆದು ಅಚ್ಚುಕಟ್ಟಾಗಿ ನಿರ್ವಹಿಸುತ್ತೇನೆ.
-ಜಿ. ನಾರಾಯಣ್‌ಪ್ರಸಾದ್, ಜಿಲ್ಲಾಧ್ಯಕ್ಷರು, ಬಿಜೆಪಿ.

ಚಾಮರಾಜನಗರ, ಫೆ10– ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜನಪರ ಆಡಳಿತಕ್ಕೆ ಇನ್ನು ಹೆಚ್ಚಿನ ಶಕ್ತಿಯನ್ನು ನೀಡುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಾಗಿದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷರೂ ಆದ ಜಿಲ್ಲಾ ಪ್ರಭಾರಿ ರಾಜೇಂದ್ರ ತಿಳಿಸಿದರು.

ನಗರದ ನೂತನ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಜಿಲ್ಲಾಧ್ಯಕ್ಷರಾದ ನಾರಾಯಣ್ ಪ್ರಸಾದ್ ಪದಗ್ರಹಣ ಸಮಾರಂಭ ಉದ್ಘಾಟಿಸಿ, ಬಿಜೆಪಿ ಬಾವುಟ ನೀಡುವ ಮೂಲಕ ನೂತನ ಅಧ್ಯಕ್ಷರನ್ನು ಅಭಿನಂದಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸಂಘಟನೆ ಬಲವಾಗಿದೆ. ಕಳೆದ ಚುನಾವಣೆಯಲ್ಲಿ ಒಂದು ಕ್ಷೇತ್ರವನ್ನು ಗೆದ್ದು ಇನ್ನುಳಿದ ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡಿ, ಕಡಿಮೆ ಮತಗಳ ಅಂತರದಲ್ಲಿ ಸೋತಿದ್ದೇವು. ಬಳಿಕ 2019ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಶಕ್ತಿ ವೃದ್ಧಿಸಿಕೊಂಡು ಶ್ರೀನಿವಾಸ್‌ಪ್ರಸಾದ್ ಅವರು ಗೆದ್ದು ಬಿಜೆಪಿ ಬಲ ಹೆಚ್ಚಿಸಿದ್ದಾರೆ. ಹೀಗಾಗಿ ನಾಲ್ಕು ಕ್ಷೇತ್ರವನ್ನು ಗೆಲ್ಲುವುದು ನಮ್ಮ ಗುರಿಯಾಗಿದೆ ಎಂದರು.

ಬಿಜೆಪಿಯಲ್ಲಿ ಗೆಲ್ಲುವ ವಾತಾವರಣ ಇರುವುದರಿಂದ ಆಕಾಂಕ್ಷಿಗಳು ಹೆಚ್ಚಾಗಿದ್ದಾರೆ. ಇವರೆಲ್ಲರೂ ಒಗ್ಗಟ್ಟಿನಿಂದ ಪಕ್ಷ ಗೆಲ್ಲಿಸುವ ಮನಸ್ಸು ಮಾಡಿದ್ದಾರೆ. ಈಗ ಅಧ್ಯಕ್ಷರಾಗಿರುವ ನಾರಾಯಣ್ ಪ್ರಸಾದ್ ಅವರು ಆಕಾಂಕ್ಷಿಯಾಗಿರಲಿಲ್ಲ ಹೀಗಾಗಿ ಅವರಿಗೆ ಅಧ್ಯಕ್ಷ ಪದವಿ ದೊರೆತಿದೆ ಎಂದು ತಿಳಿಸಿದರು.

ನಂತರ ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಮಾತನಾಡಿ, ದೇಶ ಹಾಗೂ ರಾಜ್ಯದಲ್ಲಿ ಬಿಜೆಪಿ ಪರವಾದ ಅಲೆ ಇದೆ. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜನಪ್ರಿಯತೆ ಮತ್ತು ಸಿಎಂ ಬಸವರಾಜ ಬೊಮ್ಮಾಯಿ ಅವರ ಆಡಳಿತ ನಮ್ಮೆಲ್ಲರಿಗೂ ಶ್ರೀರಕ್ಷೆಯಾಗಿದೆ. ಸಂಘಟನೆಯಲ್ಲಿ ಬಿಜೆಪಿ ಇತರೇ ಪಕ್ಷಗಳಿಗಿಂತ ಬಹಳ ಮುಂದೆ ಇದೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಹತಾಶೆಯಿಂದ ಸುಳ್ಳು ಭರವಸೆಗಳನ್ನು ನೀಡುತ್ತಾ ಜನರನ್ನು ದಿಕ್ಕು ತಪ್ಪಿಸುತ್ತಿವೆ. ಇದ್ಯಾವುದಕ್ಕೂ ನಮ್ಮ ಕಾರ್ಯಕರ್ತರು ಹಾಗೂ ಮುಖಂಡರು ಧೃತಿಗೆಡಬೇಡಿ ಎಂದರು.

ಕಾರ್ಯಕ್ರಮದಲ್ಲಿ ನಿರ್ಗಮಿತ ಅಧ್ಯಕ್ಷ ಆರ್. ಸುಂದರ್, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ಜಿ.ನಾಗಶ್ರೀ ಪ್ರತಾಪ್, ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್, ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ, ಬಿಜೆಪಿ ಉಪಾಧ್ಯಕ್ಷ ಪಿ. ವೃಷಬೇಂದ್ರಪ್ಪ ಇದ್ದರು.

ಪ್ರೋತ್ಸಾಹಧನ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಫೆ.10– ಪ್ರೋತ್ಸಾಹಧನ ಬಿಡುಗಡೆಗೆ ಆಗ್ರಹಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು. ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಮೂರು ತಿಂಗಳಿಂದ ಬಾಕಿ ಇರುವ ಆಶಾ ಕಾರ್ಯಕರ್ತೆಯರ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಬೇಕು. ಪ್ರತಿ ತಿಂಗಳು ನಿರ್ದಿಷ್ಟ ದಿನಾಂಕದೊಳಗೆ ರಾಜ್ಯ ಹಾಗೂ ಕೇಂದ್ರದ ಪ್ರೋತ್ಸಾಹಧನ ಆಶಾ ಕಾರ್ಯಕರ್ತೆಯರಿಗೆ ದೊರೆಯುವಂತೆ ಮಾಡಬೇಕು. ಜಿಲ್ಲಾ ಮಟ್ಟದ ಕುಂದು ಕೊರತೆ ಸಭೆ ನಡೆಸಬೇಕು. ಆಶಾ ಡೈರಿಯನ್ನು ತೆರೆಯಬೇಕು. ಮೊಬೈಲ್ ಆಪ್‌ಗಳ ಮೂಲಕ ಆಶಾ ಕಾರ್ಯಕರ್ತೆಯರ ಬಳಿ ಒತ್ತಾಯ ಪೂರ್ವಕವಾಗಿ ಕೆಲಸ ಮಾಡಿಸುತ್ತಿರುವುದನ್ನು ಕೈಬಿಡಬೇಕು. ಸುತ್ತೋಲೆಯಲ್ಲಿಲ್ಲದ ಕೆಲಸಗಳನ್ನು ಮಾಡಿಸದಂತೆ ಸೂಕ್ತ ಕ್ರಮಕೈಗೊಳ್ಳಬೇಕು. ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ ಆಶಾ ಕಾರ್ಯಕರ್ತೆಯರಿಗಾಗಿ ವಿಶ್ರಾಂತಿ ಕೊಠಡಿ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಆರೋಗ್ಯ ಇಲಾಖೆಯ ಆದೇಶದಂತೆ ಸಂಘದ ಪದಾಧಿಕಾರಿಗಳೊಂದಿಗೆ ಮೂರು ತಿಂಗಳಿಗೊಮ್ಮೆ ಕುಂದು–ಕೊರತೆ ನಿವಾರಣಾ ಸಭೆಯನ್ನು ನಡೆಸಬೇಕು. ಸಭೆಯ ಮಾಹಿತಿಯನ್ನು ಕನಿಷ್ಠ ಒಂದು ವಾರದ ಮುಂಚೆ ಸಂಘದ ಮುಖಂಡರಿಗೆ ತಿಳಿಸಬೇಕು. ವ್ಯಾಕ್ಸಿನ್ ಕ್ಯಾರಿಯರ್‌ಗಳನ್ನು ತೆಗೆದುಕೊಂಡು ಹೋಗದಂತೆ ಒತ್ತಾಯಪಡಿ ಸಬಾರದು ಎಂದು ಮನವಿ ಮಾಡಿದರು. ಸ್ಥಳಕ್ಕಾಗಮಿಸಿದ ಶಿರಸ್ತೇದಾರ ರಂಗರಾಜು ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಕವಿತಾ, ಕಾರ್ಯದರ್ಶಿ ಶಿವಮ್ಮ, ಚಾಮರಾಜನಗರ ತಾಲೂಕು ಅಧ್ಯಕ್ಷರಾದ ಶಶಿಕಲಾ, ಕೊಳ್ಳೇಗಾಲ ತಾಲೂಕು ಅಧ್ಯಕ್ಷರಾದ ಸುಲೋಚನಾ, ಪದಾಧಿಕಾರಿಗಳಾದ ಲೀಲಾವತಿ, ಸರೋಜಾ, ಮಂಜುಳಾ, ಜ್ಯೋತಿ, ಕಮಲಮ್ಮ ಇತರರು ಪಾಲ್ಗೊಂಡಿದ್ದರು.

ರಸ್ತೆ ಕಾಮಗಾರಿ ಸ್ಥಗಿತ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಫೆ.10– ನಗರದ ಕರಿನಂಜನಪುರ ರಸ್ತೆ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಅಲ್ಲಿನ ನಿವಾಸಿಗಳು ಪ್ರತಿಭಟನೆ ನಡೆಸಿದರು.

ನಗರದ ಕರಿನಂಜನಪುರ ರಸ್ತೆಯಲ್ಲಿ ಜಮಾಯಿಸಿದ 9ನೇ ವಾರ್ಡ್‌ನ ನಿವಾಸಿಗಳು ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಾರ್ಡ್‌ನ ನಗರಸಭಾ ಸದಸ್ಯ ಎಂ. ಮಹೇಶ್ ಮಾತನಾಡಿ, ಕಳೆದ ಹಲವು ದಿನಗಳಿಂದಲೂ ರಸ್ತೆ ಕಾಮಗಾರಿ ನಡೆಸಲಾಗುತ್ತಿದೆ. ರಸ್ತೆಗೆ ಜಲ್ಲಿ ಸುರಿದಿದ್ದು ಕಾಮಗಾರಿ ಪೂರ್ಣಗೊಳಿಸಿಲ್ಲ. ಇದರಿಂದಾಗಿ ರಸ್ತೆಯಲ್ಲಿ ಓಡಾಡುವ ವಾಹನಗಳು ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲದೇ ರಾತ್ರಿ ವೇಳೆಯಲ್ಲಿ ಓಡಾಡುವ ಸವಾರರು ಬಿದ್ದು ಅಪಘಾತಗಳಾಗಿರುವ ಉದಾಹರಣೆಗಳು ಉಂಟು. ಇಷ್ಟೆಲ್ಲ ತೊಂದರೆಗಳನ್ನು ಸೃಷ್ಟಿಸುತ್ತಿರುವ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದರು.

ಅಲ್ಲದೇ ರಸ್ತೆ ಕಾಮಗಾರಿ ನಡೆಯುತ್ತಿರುವ ಸಂಬಂಧ ಸೂಕ್ತ ನಾಮಫಲಕಗಳನ್ನು ಹಾಕಬೇಕು. ಇಲ್ಲದಿದ್ದರೆ ಅಪಘಾತಗಳು ಹೆಚ್ಚಾಗುತ್ತವೆ. ಜೊತೆಗೆ ಕಾಮಗಾರಿ ಪೂರ್ಣಗೊಳ್ಳುವ ತನಕ ಸವಾರರಿಗೆ ಓಡಾಡಲು ಅನುಕೂಲ ಮಾಡಿಕೊಡಬೇಕು ಎಂದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರಸಭೆಯ ಎಇಇ ನಟರಾಜು ಪ್ರತಿಭಟನಾಕಾರರ ಅಹವಾಲು ಆಲಿಸಿ ಮನವೊಲಿಸಲು ಮುಂದಾದರು. ಆದರೆ, ಪ್ರತಿಭಟನಾಕಾರರು ಸ್ಥಳಕ್ಕೆ ಪೌರಾಯುಕ್ತರೇ ಬರಬೇಕು ಎಂದು ಪಟ್ಟು ಹಿಡಿದರು. ನಂತರ ಸ್ಥಳಕ್ಕಾಗಮಿಸಿದ ಪೌರಾಯುಕ್ತ ರಾಮದಾಸ್ ಅವರು ಪ್ರತಿಭಟನಾಕಾರರಿಂದ ಅಹವಾಲು ಆಲಿಸಿದರು. ಸ್ಥಳದಲ್ಲಿದ್ದ ಗುತ್ತಿಗೆದಾರರಿಗೆ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ತಾಕೀತು ಮಾಡಿದರು. ಬಳಿಕ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಸೈಯದ್ ಆರಿಫ್, ಕಾರ್ಯದರ್ಶಿ ಜಬೀನೂರ್, ಮುಖಂಡರಾದ ಜುನೇದ್ ಉಲ್ಲಾ, ಅಫ್ತಾರ್ ಮಹಮ್ಮದ್, ಅಯೂಬ್‌ಖಾನ್ ಸೇರಿದಂತೆ ಇತರರಿದ್ದರು.

ಕೇಂದ್ರ, ರಾಜ್ಯ ಸರ್ಕಾರದಿಂದ ಜನಪರ ಆಡಳಿತ



ಗುಂಡ್ಲುಪೇಟೆ, ಫೆ.10– ಕೇಂದ್ರ ಹಾಗೂ ರಾಜ್ಯ ಸರ್ಕಾರ ಜನಪರವಾದ ಆಡಳಿತವನ್ನು ನೀಡುತ್ತಿದೆ. ಭಾರತ ಸುರಕ್ಷಿತವಾಗಿದೆ ಎಂದು ಶಾಸಕ ಸಿ.ಎಸ್. ನಿರಂಜನಕುಮಾರ್ ಹೇಳಿದರು.

ಪಟ್ಟಣದಲ್ಲಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ವಿವಿಧ ವಾರ್ಡ್‌ಗಳ ಮನೆ ಮನೆಗೆ ತೆರಳಿ ಬಿಜೆಪಿಯು ಮಾಡಿರುವ ಅಭಿವೃದ್ಧಿಯ ವಿವರವನ್ನು ಒಳಗೊಂಡ ಕರಪತ್ರವನ್ನು ವಿತರಣೆ ಮಾಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯದಲ್ಲಿ ನಮ್ಮ ಸರ್ಕಾರ ಜನಪರವಾದ ಒಲವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಆರ್ಥಿಕ ಪರಿಸ್ಥಿತಿಯನ್ನು ಉತ್ತಮವಾಗಿಟ್ಟುಕೊಂಡಿರುವುದರಿಂದ ಭಾರತ ಸುಭದ್ರವಾಗಿದೆ ಎಂದರು.

ಕ್ಷೇತ್ರದಲ್ಲಿ ಉತ್ತಮ ಅಭಿವೃದ್ಧಿ: ನನ್ನ ಕೇತ್ರದಲ್ಲಿ ಕಳೆದ ನಾಲ್ಕೂವರೆ ವರ್ಷಗಳಿಂದ ಉತ್ತಮವಾದ ಅಭಿವೃದ್ಧಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ರಸ್ತೆ ಮತ್ತು ಚರಂಡಿ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಗಳನ್ನು ಕಲ್ಪಿಸಲಾಗಿದೆ. ಕ್ಷೇತ್ರದಲ್ಲಿನ 113 ಕೆರೆಗಳಿಗೆ ನೀರು ತುಂಬಿಸಲು ಅನುದಾನ ಬಿಡುಗಡೆಯಾಗಿದ್ದು ಶೀಘ್ರದಲ್ಲೆ ಕಾಮಗಾರಿ ಪ್ರಾರಂಭಗೊಳ್ಳಲಿದೆ. ಇದು ರೈತರಿಗೆ ವರವಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಸದಸ್ಯ ಕಿರಣ್, ನವೀದ್, ನಾಗೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ವಿಜೃಂಭಣೆಯಿಂದ ನೆರವೇರಿದ ಗ್ರಾಮದೇವತೆ ಮಾರಮ್ಮನ ಹಬ್ಬ



ಬೇಗೂರು(ಗುಂಡ್ಲುಪೇಟೆ), ಫೆ.10– ಗ್ರಾಮದ ಗ್ರಾಮದೇವತೆ ಮಾರಮ್ಮನ ಹಬ್ಬ ಸಾವಿರಾರು ಭಕ್ತರ ನಡುವೆ ವಿಜೃಂಭಣೆಯಿಂದ ನಡೆಯಿತು. ದೇವಾಲಯದ ಆವರಣದಲ್ಲಿ ವಿವಿಧ ಹೋಮ, ವಿಶೇಷ ಅಭಿಷೇಕಗಳು ನಡೆಯಿತು. ಗ್ರಾಮದ ಚಾವಡಿ ಸಮುದಾಯ ಭವನ ಮತ್ತು ಮಾರಮ್ಮನ ಗುಡಿ ಆವರಣದಲ್ಲಿ ಸಮಾವೇಶಗೊಂಡ ಗ್ರಾಮಸ್ಥರು ಗ್ರಾಮ ದೇವತೆಗೆ ತಂಬಿಟ್ಟಿನ ಪೂಜೆ ಸಲ್ಲಿಸಿದರು. ಪ್ರತಿಯೊಬ್ಬರ ಮನೆಯಲ್ಲಿಯೂ ತಂಬಿಟ್ಟು ಹೂಗಳಿಂದ ಅಲಂಕರಿಸಿದ ತುಪ್ಪದ ದೀಪವನ್ನು ಬೆಳಗಿಸಿ ಮಹಿಳೆಯರೆಲ್ಲಾ ತಲೆಯ ಮೇಲೊತ್ತು ಸರತಿ ಸಾಲಿನಲ್ಲಿ ಪೂಜೆ ಸಲ್ಲಿಸಲಾಯಿತು

ಹರಕೆ ಹೊತ್ತ ಮಹಿಳೆಯರು ಮಕ್ಕಳು ಮತ್ತು ಭಕ್ತಾಧಿಗಳು ದೇವಾಲಯದ ಆವರಣದಲ್ಲಿ ಬೆಲ್ಲದ ಅನ್ನ ಪರ್ವ ಮಾಡುವುದರ ಮೂಲಕ ಹರಕೆ ತೀರಿಸಿದರು. ವಿದ್ಯುದ್ದೀಪ ಮತ್ತು ವಿವಿಧ ಹೂಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು.

ಮಾದಪ್ಪನ ಹುಂಡಿಯಲ್ಲಿ 1.33 ಕೋಟಿ ಸಂಗ್ರಹ

ಚಾಮರಾಜನಗರ, ಫೆ.10– ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಗುರುವಾರ ಹುಂಡಿ ಹಣ ಎಣಿಕೆ ನಡೆದಿದ್ದು, 1.33 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ. 22 ದಿನಗಳ ಬಳಿಕ ಎಣಿಕೆ ಕಾರ್ಯ ನಡೆದಿದ್ದು, 38 ಗ್ರಾಂ ಚಿನ್ನ ಹಾಗೂ 1.600 ಕೆಜಿ ಬೆಳ್ಳಿಯನ್ನೂ ಭಕ್ತರು ಕಾಣಿಕೆ ರೂಪದಲ್ಲಿ ಹುಂಡಿಗಳಿಗೆ ಹಾಕಿದ್ದಾರೆ.

ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಕಾರ್ಯದರ್ಶಿ ಎಸ್. ಕಾತ್ಯಾಯಿನಿದೇವಿ, ಉಪ ಕಾರ್ಯದರ್ಶಿ ಬಸವರಾಜು ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಇಂದು ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ

ಚಾಮರಾಜನಗರ, ಫೆ.10– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಫೆ.11 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.



ಚಿತ್ರದುರ್ಗದ ಶ್ರೀ ಮಾಚಿದೇವ ಮಹಾ ಸಂಸ್ಥಾನ ಮಠದ ಜಗದ್ಗುರು ಡಾ. ಬಸವ ಮಾಚಿದೇವ ಮಹಾ ಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸುವರು. ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು.

ಆರೋಗ್ಯ ತಪಾಸಣಾ ಶಿಬಿರ

ಬೇಗೂರು(ಗುಂಡ್ಲುಪೇಟೆ), ಫೆ.10– ಸಮೀಪದ ನಿಟ್ರೆ ಗ್ರಾಮದಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪ್ರೇರಣಾ ಫೌಂಡೇಶನ್ ಟ್ರಸ್ಟ್ ವತಿಯಿಂದ ಶನಿವಾರ (ಫೆ.11) ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಪ್ರೇರಣಾ ಟ್ರಸ್ಟ್, ನಿಟ್ರೆ ಬೃಂದಾವನ ಹಾಸ್ಪಿಟಲ್ ಮೈಸೂರು ಸಂಯುಕ್ತಾಶ್ರಯದಲ್ಲಿ ನಿಟ್ರೆ ಗ್ರಾ.ಪಂ. ಮಾಜಿ ಅಧ್ಯಕ್ಷ ದಿ॥ ಸಿ.ಸಿದ್ದರಾಜು ಸ್ಮರಣಾರ್ಥ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಪ್ರಗತಿ ಪಥದಲ್ಲಿ ಕ್ರಮಿಸುವ ಘೋಷಣೆ

ಪಥವನ್ನು ಯಶಸ್ವಿಯಾಗಿ ಕ್ರಮಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾತನಾಡಿದ ಅವರು, ನನ್ನ ಸರ್ಕಾರವು ರೈತರು, ಕಾರ್ಮಿಕರು, ಬಡವರು, ದುರ್ಬಲ ವರ್ಗದವರು ಮತ್ತು ಅವಕಾಶ ವಂಚಿತರ ಕಲ್ಯಾಣ ಹಾಗೂ ಅಭಿವೃದ್ಧಿಗೆ ಬದ್ಧವಾಗಿದೆ ಎಂದರು.

ಅಭಿವೃದ್ಧಿಯ ಜೊತೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜನವರಿ ಅಂತ್ಯದವರೆಗೆ ರಾಜಸ್ವ ಸಂಗ್ರಹಣೆಯಲ್ಲಿ ಶೇಕಡ 91ರಷ್ಟು ಗುರಿ ಸಾಧನೆ ಮಾಡಿದೆ. ರಾಜಸ್ವ ಸಂಗ್ರಹಣೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇಕಡ 21ರಷ್ಟು ಹೆಚ್ಚಳವಾಗಿದೆ. ಬಜೆಟ್ ಅಂದಾಜಿನ ಶೇಕಡ 75ರಷ್ಟು ಮೊತ್ತವನ್ನು ವೆಚ್ಚ ಮಾಡಿ, ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆ ಎಂದರು. ಹಣಕಾಸು ವ್ಯವಹಾರದಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಶ್ಲಾಘಿಸಿದ ಅವರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸುವ ಐತಿಹಾಸಿಕ ಕ್ರಮವನ್ನು ಕೈಗೊಂಡಿದೆ. ಸುಲಲಿತ ವ್ಯವಹಾರದ ವಿಷಯದಲ್ಲಿ ರಾಜ್ಯವು ದೇಶದಲ್ಲೇ ಅಗ್ರ ಸ್ಥಾನ ಪಡೆದಿದೆ. ಪ್ರಸಕ್ತ ಸಾಲಿನಲ್ಲಿ 25.87 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ರಫ್ತು ಮೌಲ್ಯದಿಂದ ರಾಜ್ಯವ ಕೊಡುಗೆಯಾಗಿ ನೀಡಿದೆ. ವಿದ್ಯುತ್ ವಲಯದಲ್ಲಿ ದಾಪುಗಾಲು ಇಟ್ಟಿದ್ದೇವೆ. ನಮ್ಮ ಬೇಡಿಕೆಯನ್ನು ಪೂರೈಸಿ, ಅನ್ಯರಾಜ್ಯಗಳಿಗೆ ಮತ್ತು ಕಂಪನಿಗಳಿಗೆ ಮಾರುವ ಸ್ಥಿತಿಗೆ ನಮ್ಮ ಸಂಸ್ಥೆಗಳು ಬಂದಿವೆ ಎಂದು ಶ್ಲಾಘಿಸಿದರು.

ನನ್ನ ಸರ್ಕಾರವು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2(ಡಿ) "ಭೂಮಿ" ಪರಿಭಾಷೆಗೆ ತಿದ್ದುಪಡಿ ತಂದು ಬಿಬಿಎಂಪಿ ವ್ಯಾಪ್ತಿಯ 18 ಕಿಲೋಮೀಟರ್, ಮಹಾನಗರ ಪಾಲಿಕೆ ವ್ಯಾಪ್ತಿಯ 10 ಕಿಲೋಮೀಟರ್, ನಗರಸಭೆ ವ್ಯಾಪ್ತಿಯ 5 ಕಿಲೋಮೀಟರ್, ಪುರಸಭೆ ವ್ಯಾಪ್ತಿಯ 3 ಕಿಲೋಮೀಟರ್‌ಗೆ ಸೀಮಿತಗೊಳಿಸಿ, ಇತರೆ ಪ್ರದೇಶಗಳನ್ನು ಹೊರತುಪಡಿಸಲಾಗಿದೆ. ರೈತಶಕ್ತಿ ಯೋಜನೆಯಡಿ ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ 250 ರೂಪಾಯಿಗಳಂತೆ ಗರಿಷ್ಠ ಐದು ಎಕರೆಗೆ ಡೀಸೆಲ್ ಸಹಾಯಧನ ನೀಡುತ್ತಿದ್ದು, ಇದಕ್ಕಾಗಿ, 400 ಕೋಟಿ ರೂಪಾಯಿಗಳನ್ನು ಒದಗಿಸಿದ್ದು, 386.98 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಇದರಿಂದ 53.22 ಲಕ್ಷ ರೈತರುಗಳಿಗೆ ಅನುಕೂಲವಾಗಿದೆ.

ನನ್ನ ಸರ್ಕಾರವು ಅಮೃತ ಮಹೋತ್ಸವದ ಅಂಗವಾಗಿ 750 ಅಮೃತ ರೈತ, ಮೀನುಗಾರರ, ನೇಕಾರರ ಉತ್ಪಾದಕರ ಸಂಸ್ಥೆಗಳನ್ನು ರಚಿಸಿರುವುದಾಗಿ ಘೋಷಿಸಿದ್ದು, ಇಲ್ಲಿಯವರೆಗೆ 364 ಸಂಸ್ಥೆಗಳನ್ನು ನೋಂದಾಯಿಸಲಾಗಿದೆ. ಗೋ ಸಂಪತ್ತು ರಕ್ಷಣೆಗಾಗಿ ರಾಜ್ಯದಲ್ಲಿ ಗೋಹತ್ಯಾ ನಿಷೇಧ ಕಾಯ್ದೆ ಜಾರಿಗೆ ತರಲಾಗಿದೆ. ಅಶಕ್ತ, ಅನಾರೋಗ್ಯ ಪೀಡಿತ ನಿರ್ಗತಿಕ, ರೈತರು ಸಾಕಲಾಗದ ಜಾನುವಾರುಗಳನ್ನು ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರದಿಂದ 100 ಸರ್ಕಾರಿ ಗೋ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ.

ನನ್ನ ಸರ್ಕಾರವು ಉನ್ನತ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಅದರನ್ವಯ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ತಂದಿದೆ. ಬೀದರ್, ಹಾವೇರಿ, ಚಾಮರಾಜನಗರ, ಬಾಗಲಕೋಟೆ, ಕೊಡಗು, ಕೊಪ್ಪಳ ಮತ್ತು ಹಾಸನದಲ್ಲಿ 7 ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದು, 7 ಇಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಮೃತ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಬಿಪಿಎಲ್ ಕುಟುಂಬಗಳಿಗೆ ಮಾಸಿಕ 75 ಯುನಿಟ್ ಗಳಷ್ಟು ಉಚಿತ ವಿದ್ಯುತ್ ನೀಡಲಾಗುತ್ತಿದೆ. ವಸತಿ ಜಾತಿ ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾಗುವ ಸಹಾಯ ಧನವನ್ನು 1.75 ಲಕ್ಷ ರೂಪಾಯಿಗಳಿಂದ 2 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ಮೈಸೂರು–ಬೆಂಗಳೂರು–ಚೆನ್ನೈ ಸೆಮಿ–ಹೈಸ್ಪೀಡ್ ರೈಲು ಸೇವೆ ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಾರಂಭಿಸಲಾಗಿದೆ. ನೀರಾವರಿ ಕ್ಷೇತ್ರದಲ್ಲಿ ಯೋಜನೆಗಳನ್ನು ಕೈಗೊಂಡಿದೆ. ಇದರ ಭಾಗವಾಗಿ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಯ 2.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಒದಗಿಸುವುದು ಮತ್ತು 367 ಕೆರೆ ತುಂಬಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಮಾನ್ಯತೆ ನೀಡಿ ಕೇಂದ್ರ ಸರ್ಕಾರವು 5,300 ಕೋಟಿ ರೂಪಾಯಿಗಳನ್ನು ಒದಗಿಸಿದೆ.

ಮಾನವ–ವನ್ಯಜೀವಿ ಸಂಘರ್ಷ ಪ್ರಕರಣಗಳು ಹೆಚ್ಚುತ್ತಿದ್ದು, ಇದನ್ನು ತಗ್ಗಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಅಂಗವಿಕಲತೆ, ಆಸ್ತಿ ನಷ್ಟಗಳಿಗೆ ನೀಡಲಾಗುತ್ತಿದ್ದ ಪರಿಹಾರ ಧನವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿದೆ. ಮಾನವ ಪ್ರಾಣಹಾನಿಗೆ ನೀಡುತ್ತಿದ್ದ ಪರಿಹಾರವನ್ನು 15 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಸರ್ಕಾರವು ತಸ್ತಿಕ್ ಭತ್ಯೆಯನ್ನು 48 ಸಾವಿರದಿಂದ 60 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದೆ. ಆತ್ಮನ್ ಮುಖಾಂತರ ಭಕ್ತಾಧಿಗಳಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಐ.ಟಿ.ಎಂ.ಎಸ್ (Intigrated Temple Management System) ತಂತ್ರಾಂಶವನ್ನು ರೂಪಿಸಿದೆ. ಕರ್ನಾಟಕ ರಾಜ್ಯದಿಂದ ಕಾಶಿಯಾತ್ರೆ ಕೈಗೊಳ್ಳಲು 30 ಸಾವಿರ ಯಾತ್ರಾರ್ಥಿಗಳಿಗೆ ತಲಾ 5,000 ರೂಪಾಯಿಗಳ ಸಹಾಯಧನ ನೀಡಲಾಗುತ್ತಿದೆ. ಪುಣ್ಯ ಕ್ಷೇತ್ರ ಪವಾಸ ಕೈಗೊಳ್ಳಲು ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ಭಾರತ್ ಗೌರವ ಯೋಜನೆಯನ್ನು ಕೈಗೊಂಡಿದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರುಗಳಿಗೆ ನೀಡಲಾಗುತ್ತಿರುವ ಗೌರವಧನವನ್ನು ಅವರುಗಳು ಸಲ್ಲಿಸಿರುವ ಸೇವಾ ಅವಧಿಯ ಆಧಾರದ ಮೇರೆಗೆ ಕನಿಷ್ಠ ರೂ.1000 ರಿಂದ ರೂ.1500 ರವರೆಗೆ ಹೆಚ್ಚಿಸಲಾಗಿದೆ.

ರಾಜ್ಯದ ನಗರ ಪ್ರದೇಶಗಳಲ್ಲಿ 438 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, 271 ನಮ್ಮ ಕ್ಲಿನಿಕ್‌ಗಳು ಕಾರ್ಯಾರಂಭ ಮಾಡಿವೆ. ಅನುಮೋದನೆಯಾಗಿರುವ 128 ಮಹಿಳಾ ಸ್ವಾಸ್ಥ್ಯ ಕೇಂದ್ರಗಳಲ್ಲಿ 53 ಮಹಿಳಾ ಸ್ವಾಸ್ಥ್ಯ ಕೇಂದ್ರಗಳು ಸಾರ್ವಜನಿಕ ಸೇವೆಗೆ ಸಿದ್ಧವಿದ್ದು, ಶೀಘ್ರದಲ್ಲಿಯೇ ಲೋಕಾರ್ಪಣೆಗೊಳ್ಳಲಿವೆ.

450 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನು ಚಾಮರಾಜನಗರದಲ್ಲಿ ಕಾರ್ಯಾರಂಭ ಮಾಡಿದ್ದು, ಕೊಡಗು ಮತ್ತು ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ಥಾಪಿಸಲು ಕ್ರಮ ಕೈಗೊಂಡಿದ್ದು, ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಪ್ರಸಕ್ತ ವರ್ಷದಲ್ಲಿ ಕೇಂದ್ರ ಸಹಭಾಗಿತ್ವದೊಂದಿಗೆ ಹಾವೇರಿ, ಯಾದಗಿರಿ, ಚಿಕ್ಕಮಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ 150 ಸೀಟುಗಳ ಸಾಮರ್ಥ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ Fetal Medicine & Neonatology ವಿಭಾಗಗಳನ್ನು, ಮತ್ತು ಮೈಸೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಟ್ರಾಮಾಕೇರ್ ಕೇಂದ್ರವನ್ನು ಆರಂಭಿಸಲು ಕ್ರಮಕೈಗೊಳ್ಳಲಾಗಿದೆ.

ರಾಜ್ಯಪಾಲರದ್ದು ತೌಡು ಕುಟ್ಟುವ ಭಾಷಣ

ಬರಿ ಉಬ್ಬಲು ಬರುತ್ತದೆ. ಯಾವ ಸಾಧನೆ ಮಾಡದಿರುವುದನ್ನು ಸರ್ಕಾರವೇ ಸ್ವತಃ ಒಪ್ಪಿಕೊಂಡಿದೆ. ಹೀಗಾಗಿ, ಸರ್ಕಾರ ಸಿದ್ಧಪಡಿಸಿದ ಈ ಭಾಷಣವನ್ನು ಬೂಸಾ ಅಥವಾ ತೌಡು ಕುಟ್ಟುವ ಭಾಷಣವೆಂದು ಕರೆಯುತ್ತೇನೆ ಎಂದು ಲೇವಡಿ ಮಾಡಿದ್ದಾರೆ.

ಒಟ್ಟಾರೆ, ಬಿಜೆಪಿ ಸರ್ಕಾರವು ನಾಲ್ಕು ವರ್ಷಗಳಲ್ಲಿ ಏನನ್ನೂ ಮಾಡಿಲ್ಲ. ಭ್ರಷ್ಟಾಚಾರ, ಧರ್ಮ–ಜಾತಿ ಸಂಘರ್ಷವನ್ನು ಬೆಳೆಸಿದ್ದು ಹೊರತುಪಡಿಸಿದರೆ ಬೇರೆ ಸಾಧನೆಗಳನ್ನು ಮಾಡಿಲ್ಲ ಎನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಒಪ್ಪಿಕೊಳ್ಳಲಾಗಿದೆ. ತನ್ನ ವೈಫಲ್ಯವನ್ನು ಒಪ್ಪಿಕೊಂಡಿರುವುದಕ್ಕೆ ರಾಜ್ಯಪಾಲರು ಮತ್ತು ಸರ್ಕಾರವನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ. ರಾಜ್ಯಪಾಲರ ಮೂಲಕ ಸರ್ಕಾರ ಹೇಳಿಸಿರುವ ಅನೇಕ ಕಾರ್ಯಕ್ರಮಗಳು ಕಾಂಗ್ರೆಸ್ ಸರ್ಕಾರದ ಅವಧಿಯ ಕಾರ್ಯಕ್ರಮಗಳಾಗಿವೆ. ರಾಜ್ಯದ ಆದಾಯಕ್ಕೆ ಬೆಂಗಳೂರಿನ ಕೊಡುಗೆ ಶೇ 70ಕ್ಕಿಂತ ಹೆಚ್ಚು. ಆದರೆ, ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾದ ಯಾವುದೇ ಯೋಜನೆಗಳು ಇಲ್ಲ. ರಾಜ್ಯಪಾಲರು ತಮ್ಮ ಭಾಷಣದ ಪ್ಯಾರಾ ಸಂಖ್ಯೆ 39ರಲ್ಲಿ ನಾಡಪ್ರಭು ಕೆಂಪೇಗೌಡ, ಅರ್ಕಾವತಿ, ಡಾ.ಶಿವರಾಮ ಕಾರಂತ ಬಡಾವಣೆಗಳ ಪ್ರಸ್ತಾಪಿಸಿದ್ದಾರೆ. ಈ ಎಲ್ಲ ಬಡಾವಣೆಗಳು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರಾರಂಭಗೊಂಡಿದ್ದವು ಎಂದು ವಿವರಿಸಿದ್ದಾರೆ. ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಉಲ್ಲೇಖಗಳಿಲ್ಲ. ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿಲ್ಲ ಎನ್ನುವುದು ಸ್ಪಷ್ಟವಾಗಿದೆ. ರಾಜ್ಯವು ಇಂದು ಅನುಭವಿಸುತ್ತಿರುವ ದೊಡ್ಡ ಸಮಸ್ಯೆ ಭ್ರಷ್ಟಾಚಾರದ್ದು. ಈ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವ ಬಗ್ಗೆ ಒಂದೂ ಮಾತು ಪ್ರಸ್ತಾಪಿಸಿಲ್ಲ. ಆದ್ದರಿಂದ, ಸರ್ಕಾರ ಭ್ರಷ್ಟಾಚಾರದ ಪರವಾಗಿರುವುದನ್ನು ರಾಜ್ಯಪಾಲರ ಭಾಷಣವು ದೃಢೀಕರಿಸುತ್ತಿದೆ ಎಂದು ತಿಳಿಸಿದ್ದಾರೆ.

ರಾಜ್ಯಪಾಲರ ಭಾಷಣದ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿ ಹಲವು ಶಾಸಕರು ಗೈರು

ಬೆಂಗಳೂರು, ಫೆ.10(ಕೆಎಂಶಿ)–ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವ ವೇಳೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ ದಂತೆ ಬಹುತೇಕ ಶಾಸಕರು ಗೈರು ಹಾಜರಾಗಿದ್ದರು. ಪ್ರತಿಪಕ್ಷವಷ್ಟೇ ಅಲ್ಲ ಆಡಳಿತ ಪಕ್ಷದ ಸದಸ್ಯರ ಗೈರು ಹಾಜರಾತಿ ಎದ್ದು ಕಾಣುತ್ತಿತ್ತು. ವಿಧಾನಸಭಾ ಚುನಾವಣೆಗೆ ಎರಡು ತಿಂಗಳ ಬಾಕಿ ಇರುವ ಹಿನ್ನೆಲೆಯಲ್ಲಿ ಸದಸ್ಯರು ಸದನದ ಕಲಾಪಕ್ಕಿಂತ ತಮ್ಮ ಕ್ಷೇತ್ರ ಉಳಿಸಿಕೊಳ್ಳುವತ್ತ ಹೆಚ್ಚು ಗಮನ ಹರಿಸಿದಂತಿದೆ. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಆ ಪಕ್ಷದ ನಾಯರು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಪಕ್ಷದ ಪರ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ನಾಯಕರಿಲ್ಲದ ಮೇಲೆ ಶಾಸಕರು ಸದನಕ್ಕೆ ಎಲ್ಲಿ ಬರುತ್ತಾರೆ. ಇನ್ನು ಆಡಳಿತ ಪಕ್ಷದಲ್ಲೂ ಸದಸ್ಯರ ಗೈರು ಹಾಜರಾತಿ ಕಂಡಿದ್ದರಿಂದ ವಿಧಾನಸಭೆ ಖಾಲಿ ಖಾಲಿ ಎನ್ನಿಸುತ್ತಿತ್ತು.

ಮೂರು ಪಕ್ಷಗಳು ಜನರನ್ನು ತಲುಪಲು ಯತ್ನಿಸುತ್ತಿವೆ. ಇದರ ನಡುವೆ ಆರಂಭವಾಗಿರುವ ವರ್ಷಾರಂಭದ ಬಜೆಟ್ ಅವೇಶನದಲ್ಲಿ ಭಾಗವಹಿಸಲು ವಿಪಕ್ಷ ಕಾಂಗ್ರೆಸ್ ನಿರಾಸಕ್ತಿ ತೋರಿಸಿದೆ. ಇದ್ಯಾವುದಕ್ಕೂ ಗಮನ ಕೊಡದ ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ 34 ಪುಟಗಳ ಭಾಷಣವನ್ನು ಓದಿ ಮುಗಿಸಿದರು.

ಶಿವಮೊಗ್ಗ ನೂತನ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರು ಸೂಕ್ತ

ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್ ಆಗ್ರಹ

● ಚಾಮುಂಡಿಬೆಟ್ಟದ ತಪ್ಪಲಲ್ಲಿ 400 ಅಡಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಕಂಚಿನ ಪ್ರತಿಮೆ ಸ್ಥಾಪನೆ ● ಬೆಂಗಳೂರು-ಮೈಸೂರು ದಶಪಥ ರಸ್ತೆಗೆ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಹೆಸರಿಡಲು ಒತ್ತಾಯ

ಮೈಸೂರು, ಫೆ.10(ಆರ್‌ಕೆಬಿ)– ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಹೆಸರಿಡಬೇಕು. ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ 400 ಅಡಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಕಂಚಿನ ಪ್ರತಿಮೆ ಸ್ಥಾಪಿಸಿ, ಥೀಮ್ ಪಾರ್ಕ್ ನಿರ್ಮಿಸಬೇಕು. ಬೆಂಗಳೂರು–ಮೈಸೂರು ದಶಪಥ ರಸ್ತೆಗೆ ಡಾ.ಬಾಲಗಂಗಾಧರನಾಥ ಸ್ವಾಮೀಜಿಗಳ ಹೆಸರಿಡಬೇಕು ಎಂದು ಮೈಸೂರಿನ ನಮ್ಮೂರು– ನಮ್ಮೋರು ಸಮಾಜ ಸೇವಾ ಟ್ರಸ್ಟ್ ಆಗ್ರಹಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹೆಸರಿಡಲು ಮುಖ್ಯಮಂತ್ರಿ ಹೊರಟಿದ್ದಾರೆ. ಇದು ಸರಿಯಲ್ಲ. ಈ ವಿಮಾನ ನಿಲ್ದಾಣಕ್ಕೆ ಬೇರೆ ಯಾವುದೇ ಹೆಸರು ಸಮಂಜಸವಲ್ಲ. ರಾಜಕೀಯಕ್ಕೆ ಬದಲಾಗಿ ಸಾಂಸ್ಕೃತಿಕ ನೆಲೆಗಟ್ಟಿಗೆ ಅವಕಾಶ ನೀಡಬೇಕು. ಅದಕ್ಕೆ ಸೂಕ್ತ ಎಂದರೆ ರಾಷ್ಟ್ರಕವಿ ಕುವೆಂಪು. ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಹುಟ್ಟಿ, ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು, ಇಲ್ಲಿಯೇ ಪ್ರಾಧ್ಯಾಪಕ, ಪ್ರಾಂಶುಪಾಲ, ಮೈಸೂರು ವಿವಿ ಕುಲಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕಕ್ಕೆ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿಯಿಂದ ಹಿಡಿದು, ನೂರಾರು ಪ್ರಶಸ್ತಿಗಳ ಸಾಧಕ, ಕನ್ನಡ ಸಾಹಿತ್ಯ ಲೋಕದ ಮೇರು ಪರ್ವತ. ಅವರ ಜನ್ಮ ಸ್ಥಳವಾದ ಶಿವಮೊಗ್ಗ ಜಿಲ್ಲೆಯ ನೂತನ ವಿಮಾನ ನಿಲ್ದಾಣಕ್ಕೆ ಕುವೆಂಪು ಅವರ ಹೆಸರು ಸೂಕ್ತ. ಹಾಗಾಗಿ ಅವರ ಹೆಸರನ್ನೇ ಇಡುವಂತೆ ಆಗ್ರಹಿಸಿದರು.

ನಂತರ ಮಾತನಾಡಿದ ನಮ್ಮೂರು–ನಮ್ಮೋರು ಟ್ರಸ್ಟ್‌ನ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು ರಾಜಮನೆತನದ ಶ್ರೇಷ್ಠ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ. ಏಷ್ಯಾದಲ್ಲೇ ಪ್ರಥಮ ವಿದ್ಯುತ್ ಉತ್ಪಾದನಾ ಘಟಕ, ಮಿಂಟೋ ಕಣ್ಣಿನ ಆಸ್ಪತ್ರೆ,



ಬೆಂಗಳೂರಿಗೆ ಏಷ್ಯಾದಲ್ಲೇ ಪ್ರಥಮವಾಗಿ ವಿದ್ಯುತ್ ಸಂಪರ್ಕ, ಮೈಸೂರು ಪ್ರಜಾ ಪ್ರತಿನಿಧಿ ಸಭೆ, ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ, ಕೃಷ್ಣರಾಜ ಸಾಗರ ಅಣೆಕಟ್ಟೆ , ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್ತು ಲಲಿತ ಮಹಲ್ ಅರಮನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಮೆಡಿಕಲ್ ಕಾಲೇಜು, ಕೆ.ಆರ್. ಆಸ್ಪತ್ರೆ, ಬೆಂಗಳೂರು ಕೆ.ಆರ್.ಮಾರುಕಟ್ಟೆ, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ಪೇಂಟ್ ಅಂಡ್ ವಾರ್ನಿಷ್ ಹೀಗೆ ನೂರಾರು ಯೋಜನೆಗಳ ರೂಪಿಸಿದ ರೂವಾರಿ. ಹೀಗಾಗಿ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 400 ಅಡಿಯ ಕಂಚಿನ ಪ್ರತಿಮೆ ಸ್ಥಾಪಿಸಿ, ಥೀಮ್ ಪಾರ್ಕ್ ನಿರ್ಮಿಸಬೇಕು. ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಇತ್ಯಾದಿ ನೋಡಲು ಬರುವವರು ಇದನ್ನು ನೋಡಿ ಹೋಗಲು ಅನುವು ಮಾಡಿಕೊಟ್ಟರೆ, ನಾಲ್ವಡಿ ಅವರ ಕೊಡುಗೆ ಸದಾ ಸ್ಮರಣೀಯವಾಗಿರುವ ಜೊತೆಗೆ, ಅವರಿಗೆ ಸೂಕ್ತ ಗೌರವ ಸಲ್ಲಿಸಿದಂತೆಯೂ ಆಗುತ್ತದೆ ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್ ಮಾತನಾಡಿ, ಉದ್ಘಾಟನೆಗೆ ಸಿದ್ಧವಾಗಿರುವ ಮೈಸೂರು–ಬೆಂಗಳೂರು ದಶಪಥ ರಸ್ತೆಗೆ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೆಸರಿಡುವುದು ಸೂಕ್ತ. ಇದರಿಂದ ಸಮಾಜದ ತಳಸ್ತರದ ಸಮುದಾಯಗಳಿಗೂ ಗುರು ಪರಂಪರೆಯನ್ನು ತಂದುಕೊಟ್ಟ ಇವರಿಗೆ ಗೌರವ ನೀಡಿದಂತಾಗುತ್ತದೆ ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಉಪಾಧ್ಯಕ್ಷ ಕುಮಾರ್‌ಗೌಡ ಉಪಸ್ಥಿತರಿದ್ದರು.

ನಶಿಸಿ ಹೋಗುತ್ತಿರುವ ದೇಶಿ ಕ್ರೀಡೆಗಳ ಉಳಿವಿಗಾಗಿ ನಾಳೆ ದೇಶಿ ಕ್ರೀಡಾ ಸ್ಪರ್ಧೆ

● ಮೊದಲ ಬಹುಮಾನ ಟಗರು! ● ದ್ವಿತೀಯ ಬಹುಮಾನ 20 ನಾಟಿ ಕೋಳಿ!! ● ತೃತೀಯ ಬಹುಮಾನ 5 ಫಾರಂ ಕೋಳಿ, 500 ಮೊಟ್ಟೆ!!! ● ಪ್ರೇಕ್ಷಕರು ನಿರಾಶರಾಗಬೇಡಿ, ಪ್ರತಿಯೊಬ್ಬರಿಗೊಂದು ಮೊಟ್ಟೆ



ಮೈಸೂರು, ಫೆ.10(ಆರ್‌ಕೆಬಿ)– ನಶಿಸಿ ಹೋಗುತ್ತಿರುವ ನಮ್ಮ ದೇಶಿ ಕ್ರೀಡೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮೂಲಕ ಅದನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ನಿಟ್ಟಿನಲ್ಲಿ ಮೈಸೂರಿನ ನಾಡಪ್ರಭು ಕೆಂಪೇಗೌಡರ ಯುವ ಸೇವಾ ಬಳಗವು ಭಾನುವಾರ (ಫೆ.12)ದಂದು ಮೈಸೂರಿನ ಕುಂಬಾರಕೊಪ್ಪಲು ಕೆಂಪೇಗೌಡ ಕ್ರೀಡಾಂಗಣ (ಹಳ್ಳಿಕಟ್ಟೆ)ದಲ್ಲಿ ದೇಶೀ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಿರುವುದಾಗಿ ಬಳಗದ ಅಧ್ಯಕ್ಷ ಅಧ್ಯಕ್ಷ ದೀಪಕ್ ಗೌಡ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಶಕ್ತಿ ಹಬ್ಬದ ಪ್ರಯುಕ್ತ ಆದಿಶಕ್ತಿ ನಾಟಿ ಕಿಲಾಡಿ ಜನೋತ್ಸವ ದೇಶಿ ಕ್ಷೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಲಗೋರಿ, ಮಡಿಕೆ ಒಡೆಯುವುದು, ಹಗ್ಗ-ಜಗ್ಗಾಟ, ಮ್ಯೂಸಿಕಲ್ ಚೇರ್, ಕುಂಟೆ ಬಿಲ್ಲೆ ಚೌಕಾಬಾರ ಹೀಗೆ ಹಲವು ಸ್ಪರ್ಧೆಗಳು ನಡೆಯಲಿವೆ ಎಂದರು.

ಜನರ ಒತ್ತಡದ ಜೀವನದಲ್ಲಿ ಬೇಸರವಾಗಿರುವ ಮನಸ್ಸಿಗೆ ಸಂತೋಷ ನೀಡುವ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಕೇವಲ 100 ಜನರಿಗೆ ಮಾತ್ರ ಅವಕಾಶವಿದೆ. ಪ್ರವೇಶ ಉಚಿತವಾಗಿದೆ. 40 ವರ್ಷ ಮೇಲ್ಪಟ್ಟ ಪುರುಷರು, 25 ವರ್ಷ ಮೇಲ್ಪಟ್ಟ ಮಹಿಳೆಯರು ಭಾಗವಹಿಸಬಹುದು. ಸ್ಪರ್ಧೆಯ ವಿಜೇತರಿಗೆ ಮೊದಲ ಬಹುಮಾನವಾಗಿ ಒಂದು ಟಗರು, ದ್ವಿತೀಯ ಬಹುಮಾನವಾಗಿ 20 ನಾಟಿ ಕೋಳಿ, ತೃತೀಯ ಬಹುಮಾನವಾಗಿ 5 ಫಾರಂ ಕೋಳಿ ಮತ್ತು 300 ಮೊಟ್ಟೆಗಳನ್ನು ನೀಡಲಾಗುವುದು. ಸ್ಪರ್ಧಿಸುವ ಪ್ರತಿಯೊಬ್ಬರಿಗೂ ಸೂಕ್ತ ಬಹುಮಾನವಿದೆ. ಅಲ್ಲದೆ ಪ್ರತಿಯೊಬ್ಬ ಪ್ರೇಕ್ಷಕನಿಗೂ ಮೊಟ್ಟೆಗಳನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು 11ರ ಶನಿವಾರ ಸಂಜೆಯೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಮೊ– 98866 77813, 973880453 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಬಳಗದ ಪದಾಧಿಕಾರಿಗಳಾದ ಮಧುಸೂದನ್ ಗೌಡ, ಸುಬ್ಬರಾವ್, ಯೋಗರಾಜ್, ಚೆಲುವರಾಜು ಉಪಸ್ಥಿತರಿದ್ದರು.

ಪರಿಸರ ಜಾಗೃತಿಗಾಗಿ ಮೈಸೂರಿಂದ ಆಂಧ್ರದ ಶ್ರೀಶೈಲದವರೆಗೆ ಪರಿಸರ ಪ್ರೇಮಿ ಮಂಜುನಾಥ್ ಸೈಕಲ್ ಯಾತ್ರೆ

ಮೈಸೂರು, ಫೆ10(ಆರ್‌ಕೆಬಿ)– ಜಾಗತಿಕವಾಗಿ ಹೆಚ್ಚುತ್ತಿರುವ ತಾಪಮಾನದಿಂದ ಮುಂದಿನ ಹತ್ತು ವರ್ಷಗಳಲ್ಲಿ ಭೂಮಿಯನ್ನು ಐಸಿಯುನಲ್ಲಿ ಇಟ್ಟು ನೋಡಿಕೊಳ್ಳಬೇಕಾಗುತ್ತದೆ ಎಂದು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಹೀಗಿರುವಾಗ ನಮ್ಮ ಮುಂದಿನ ನಡೆಯ ಬಗ್ಗೆ ನಾವೆಲ್ಲರೂ ಹೆಚ್ಚು ಜಾಗರೂಕರಾಗಿರಬೇಕಾಗಿದೆ. ಅಲ್ಲದೆ ಸಮಾಜದ ಪ್ರತಿಯೊಬ್ಬರಿಗೂ ಈ ಬಗ್ಗೆ ತಿಳುವಳಿಕೆ ನೀಡುವ ಮೂಲಕ ಮುಂದೆ ಆಗಬಹುದಾದ ಅನಾಹುತವನ್ನು ಸರಿಪಡಿಸುವ ಜವಾಬ್ದಾರಿಯೂ ನಮ್ಮದಾಗಿದೆ ಎಂದು ಪರಿಸರವಾದಿ ಟಿ.ಜಿ.ಎಸ್.ಅವಿನಾಶ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಸಾಯನಿಕ ಕೃಷಿ ಪದ್ಧತಿಯಿಂದ ಕ್ರಿಮಿನಾಶಕ, ಕೀಟನಾಶಕ, ಗೊಬ್ಬರಗಳು ನಮ್ಮ ದೇಹ ಸೇರುತ್ತಿವೆ. ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡುವಾಗ ರಾಸಾಯನಿಕಗಳು ಮತ್ತು ಪ್ಲಾಸ್ಟಿಕ್ ಬಳಸಲಾಗುತ್ತಿದೆ. ಜೊತೆಗೆ ಅನಿಲ, ಧೂಳು, ಪ್ಲಾಸ್ಟಿಕ್‌ನ ಕಣಗಳು ಗಾಳಿ, ನೀರನ್ನು ನಿರಂತರವಾಗಿ ಕಲುಷಿತಗೊಳಿಸುವುದರ ಜೊತೆಗೆ ಮಾನವನ ದೇಹ ಸೇರುತ್ತಿವೆ. ನಮ್ಮ ದೇಹದ ರಕ್ತದ ಕಣಗಳಲ್ಲಿ ಪ್ಲಾಸ್ಟಿಕ್‌ನ ಸೂಕ್ಷ್ಮಾತಿ ಸೂಕ್ಷ್ಮ ಕಣಗಳು ಸೇರಿವೆ ಎಂದು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಇದು ಅತ್ಯಂತ ಅಪಾಯಕಾರಿಯೂ ಆಗಿದೆ. ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚುತ್ತಿದೆ. ವಾತಾವರಣದಲ್ಲಿ ಸಾರಜನಕ, ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಿದೆ ಆಧುನಿಕ ಜೀವನದ ಆವಿಷ್ಕಾರಗಳಿಂದಾಗಿ ನಮ್ಮ ಅಸ್ತಿತ್ವಕ್ಕೆ ಮುಳುವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂತಹ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಉಂಟು ಮಾಡುವುದು ಅಗತ್ಯ. ಅದಕ್ಕಾಗಿ ಮೈಸೂರಿನ ಪರಿಸರ ಪ್ರೇಮಿ ಟಿ.ಮಂಜುನಾಥ್ ಮೈಸೂರಿನಿಂದ ಆಂಧ್ರಪ್ರದೇಶದ ಶ್ರೀಶೈಲದವರೆಗೆ ಏಕಾಂಗಿಯಾಗಿ ಸೈಕಲ್ ಯಾತ್ರೆ ಕೈಗೊಂಡಿದ್ದಾರೆ. ಯಾತ್ರೆ ಸಂದರ್ಭದಲ್ಲಿ ಮಾರ್ಗದುದ್ದಕ್ಕೂ ಶಾಲಾ ಮಕ್ಕಳಿಗೆ ಪ್ಲಾಸ್ಟಿಕ್‌ನಿಂದಾಗುತ್ತಿರುವ ಅನಾಹುತದ ಬಗ್ಗೆ ಅರಿವು ಮೂಡಿಸಲಿದ್ದಾರೆ. ಪ್ಲಾಸ್ಟಿಕ್‌ನ ಪರ್ಯಾಯಗಳ ಬಗ್ಗೆ ಪ್ರಾತ್ಯಕ್ಷಿಕವಾಗಿ ತಿಳಿಸುತ್ತಾ, ಸೌರಶಕ್ತಿಯನ್ನು ಹೇಗೆಲ್ಲಾ ಸದ್ಬಳಕೆ ಮಾಡಿಕೊಳ್ಳಬಹುದು ಎಂಬ ಮಾಹಿತಿಗಳನ್ನು ನೀಡಲಿದ್ದಾರೆ. ಸೈಕಲ್ ಯಾತ್ರೆ ಫೆ.12ರಂದು ಬೆಳಗ್ಗೆ 6 ಗಂಟೆಗೆ ಹೂಟಗಳ್ಳಿ ಗಣಪತಿ ದೇವಸ್ಥಾನದಿಂದ ಹೊರಡಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪರಿಸರ ಪ್ರೇಮಿಗಳಾದ ಟಿ.ಮಂಜುನಾಥ್, ಗೋವಿಂದಸ್ವಾಮಿ, ಗಿರೀಶ್, ಜಿಪಂ ಮಾಜಿ ಸದಸ್ಯ ಅರುಣ್‌ಕುಮಾರ್ ಉಪಸ್ಥಿತರಿದ್ದರು.



ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಎನ್‌ಸಿಸಿ ಅಧಿಕಾರಿ ಕ್ಯಾಪ್ಟನ್ ಹರ್ಷ ಕುಮಾರ್ 2022–23 ನೇ ಸಾಲಿನ ಡಿಡಿಜಿ ಪ್ರಶಂಸ ಪತ್ರವನ್ನು ಏರ್ ಕಮಾಂಡರ್ ಬಿ.ಎಸ್. ಕಾನ್‌ವರ್, ಡಿಡಿಜಿ, ಕರ್ನಾಟಕ ಮತ್ತು ಗೋವಾ ಅವರಿಂದ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಿದರು. ಜೆಎಸ್‌ಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಎಸ್. ರಾಜಶೇಖರ ಹಾಜರಿದ್ದರು.

ಸ್ವಪಕ್ಷೀಯರ ವಿರೋಧ: ಮಂಡ್ಯ ಉಸ್ತುವಾರಿಯಿಂದ ಅಶೋಕ್ ನಿರ್ಗಮನ

ಹೆಚ್ಚಿನ ಕಾರ್ಯಭಾರದ ನೆಪ ಹೇಳಿ ಜವಬ್ದಾರಿಯಿಂದ ವಿಮುಕ್ತಿ

ಬೆಂಗಳೂರು, ಫೆ.10(ಕೆಎಂಶಿ)– ಸ್ವಪಕ್ಷೀಯ ಮುಖಂಡರ ನಡೆಯಿಂದ ಬೇಸತ್ತ



ಕಂದಾಯ ಸಚಿವ ಆರ್.ಅಶೋಕ್ ಮಂಡ್ಯ ಜಿಲ್ಲಾ ಉಸ್ತುವಾರಿ ಹೊಣೆಯಿಂದ ಹೊರ ಬಂದಿದ್ದಾರೆ.

ತಾಂಡಾ ಮತ್ತು ಬುಡಕಟ್ಟು ಜನಾಂಗದ ಕುಟುಂಬದವರಿಗೆ ಹಕ್ಕುಪತ್ರ ನೀಡುವ ಹಾಗೂ ಗ್ರಾಮ ವಾಸ್ತವ್ಯ, ಜಿಲ್ಲಾಧಿಕಾರಿಗಳ ನಡೆ ಹಳ್ಳಿಕಡೆ ಸೇರಿದಂತೆ ಕೆಲವು ಪ್ರಮುಖ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಾಗಿರುವುದರಿಂದ ಮಂಡ್ಯ ಜಿಲ್ಲಾ ಉಸ್ತುವಾರಿ ಹೊಣೆಯಿಂದ ವಿಮುಕ್ತಿಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು, ಮನವಿ ಮಾಡಿದ್ದರು.

ಅಶೋಕ್ ಅವರ ಮನವಿಗೆ ಮುಖ್ಯಮಂತ್ರಿಯವರು ಸ್ಪಂದಿಸಿ, ಜಿಲ್ಲಾ ಉಸ್ತುವಾರಿಯಿಂದ ಅವರನ್ನು ವಿಮುಕ್ತಿ ಗೊಳಿಸಿದ್ದಾರೆ. ಮುಖ್ಯಮಂತ್ರಿಯವರಿಗೆ ಬರೆದ ಪತ್ರದಲ್ಲಿ ಸಮಾಜದ ಕಟ್ಟಕಡೇ ವ್ಯಕ್ತಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಇಲಾಖೆ ಕೈಗೊಂಡಿರುವ ಪ್ರಮುಖ ಕಾರ್ಯಕ್ರಮಗಳಿಗೆ ಹೆಚ್ಚಿನ ಸಮಯ ವಿನಿಯೋಗಿಸಬೇಕು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿ ನಿರ್ವಹಿಸಲು ಹೆಚ್ಚಿನ ಅವಕಾಶ ನೀಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ನನ್ನ ಜವಾಬ್ದಾರಿಯಿಂದ ವಿಮುಕ್ತಿಗೊಳಿಸುವಂತೆ ಕೋರಿದ್ದರು.

ಅಬ್ಕಾರಿ ಸಚಿವ ಕೆ.ಗೋಪಾಲಯ್ಯ ಅವರಿಗೆ ಹಾಸನ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿಯನ್ನು ಏಕ ಕಾಲದಲ್ಲಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ತಮ್ಮ ಆಪ್ತ ಸಚಿವ ಅಶೋಕ್‌ಗೆ ಮುಖ್ಯಮಂತ್ರಿಯವರು ಈ ಜಿಲ್ಲೆಯ ಹೊಣೆಗಾರಿಕೆ ವಹಿಸಿಕೊಟ್ಟಿದ್ದರು.

ಅಶೋಕ್ ಮಂಡ್ಯ ಜಿಲ್ಲಾ ಉಸ್ತುವಾರಿ ವಹಿಸಿಕೊಂಡಿದ್ದು, ಸಂಪುಟದ ಕೆಲವು ಸಚಿವರು ಮತ್ತು ಶಾಸಕರಿಗೆ ಆಸಕ್ತಿ ಇರಲಿಲ್ಲ ಆದರೆ ಅದನ್ನು ಬಹಿರಂಗವಾಗಿ ತೋರ್ಪಡಿಸಿಕೊಳ್ಳಲಾಗದೇ ಪಕ್ಷದ ಕಾರ್ಯಕರ್ತರ ಮೂಲಕ ಆಕ್ರೋಶ ವ್ಯಕ್ತಪಡಿಸುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು. ಚುನಾವಣಾ ಸಂದರ್ಭದಲ್ಲಿ ಅಪಸ್ವರದಲ್ಲಿ ತಾವು ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಅಶೋಕ್ ಇಲಾಖಾ ನೆಪವೊಡ್ಡಿ ಜವಾಬ್ದಾರಿಯಿಂದ ಹೊರ ಬಂದಿದ್ದಾರೆ.

ಸೋತು ಓಡಿಹೋಗುವವರು ಸಾಮ್ರಾಟ ಅಲ್ಲ, ಉತ್ತರ ಕುಮಾರ: ಕಾಂಗ್ರೆಸ್ ವ್ಯಂಗ್ಯ

ಬೆಂಗಳೂರು: ಮಂಡ್ಯ ಜಿಲ್ಲಾ ಉಸ್ತುವಾರಿಯಿಂದ ಆರ್.ಅಶೋಕ್ ಅವರನ್ನು ಮುಕ್ತಗೊಳಿಸಿರುವುದಕ್ಕೆ ಪ್ರತಿಪಕ್ಷ ಕಾಂಗ್ರೆಸ್ ವ್ಯಂಗ್ಯವಾಡಿದೆ. ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್, ಅಶೋಕ್ ಮಂಡ್ಯ ಉಸ್ತುವಾರಿಯಿಂದ ಪಲಾಯನ ಮಾಡಿದ್ದು ಏಕೆ ಇದು ಪಲಾಯನವೇ ಅಥವಾ ಉಚ್ಚಾಟನೆಯೋ ಎಂದು ಪ್ರಶ್ನಿಸಿದೆ.

ಒಂದು ಜಿಲ್ಲೆಯ ಉಸ್ತುವಾರಿಯನ್ನು ನಿಭಾಯಿಸಲಾಗದ ಅಸಾಮರ್ಥ್ಯವೇ ಅಥವಾ ಪಕ್ಷದೊಳಗಿನ ಶತ್ರುಗಳ ಎದುರು ಸೋಲೊಪ್ಪಿಕೊಂಡಿದ್ದೆ ಎಂದು ಕಾರಣ ಕೇಳಿದ್ದು, ಹೀಗೆ ಸೋತು ಓಡಿ ಹೋಗುವವರನ್ನು ಸಾಮ್ರಾಟ ಎನ್ನುವುದಿಲ್ಲ, ಉತ್ತರ ಕುಮಾರ ಎನ್ನುತ್ತಾರೆ ಎಂದು ವ್ಯಂಗ್ಯವಾಡಿದೆ

ಕೆ.ಆರ್.ರಕ್ಷಿತ್ ನೂತನ ಮೈಸೂರು ಉಪವಿಭಾಗಾಧಿಕಾರಿ

ಮೈಸೂರು, ಫೆ.10(ಆರ್‌ಕೆ)– ಮೈಸೂರು ಉಪವಿಭಾಗದ ನೂತನ



ಉಪವಿಭಾಗಾಧಿಕಾರಿಯಾಗಿ ಕೆಎಎಸ್ ಅಧಿಕಾರಿ (ಕಿರಿಯ ಶ್ರೇಣಿ) ಕೆ.ಆರ್. ರಕ್ಷಿತ್ ಅವರು ಇಂದು ಮಧ್ಯಾಹ್ನ ಅಧಿಕಾರ ವಹಿಸಿಕೊಂಡರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧೀನ ಕಾರ್ಯದರ್ಶಿ ಉಮಾದೇವಿಯವರು ಇಂದು ರಕ್ಷಿತ ಅವರನ್ನು ಉಪವಿಭಾಗಾಧಿಕಾರಿ ಸ್ಥಾನಕ್ಕೆ ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ಅವರು ಮಧ್ಯಾಹ್ನ 3 ಗಂಟೆಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಈವರೆಗೆ ಉಪವಿಭಾಗಾಧಿಕಾರಿಯಾಗಿದ್ದ ಬಿ. ಕಮಲಾಬಾಯಿ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಸ್ಥಳ ನಿಯೋಜನೆ ಮಾಡಿಲ್ಲ. ಈವರೆಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮುಖ್ಯ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ರಕ್ಷಿತ್, ಹಿಂದೆ ಮೈಸೂರು ತಾಲೂಕು ತಹಸೀಲ್ದಾರ್ ಆಗಿ ಕೆಲಸ ನಿರ್ವಹಿಸಿದ್ದರು.

ಸೇನೆಯಲ್ಲಿ 108 ಮಹಿಳಾ ಅಧಿಕಾರಿಗಳಿಗೆ ಕರ್ನಲ್ ಹುದ್ದೆ: ಕೇಂದ್ರ

ನವದೆಹಲಿ, ಫೆ.10–ಭಾರತೀಯ ಸೇನೆಗೆ ನಡೆಯುತ್ತಿರುವ ನೇಮಕಾತಿಯಲ್ಲಿ ಕರ್ನಲ್ ಹುದ್ದೆಗಳಿಗೆ ಬಡ್ತಿ ಪಡೆದಿರುವ 108 ಮಹಿಳಾ ಅಧಿಕಾರಿಗಳಿಗೆ ಹುದ್ದೆಗಳನ್ನು ನೀಡುವ ಪ್ರಕ್ರಿಯೆ ಸಹ ನಡೆಯುತ್ತಿದೆ ಎಂದು ಕೇಂದ್ರ ಸರ್ಕಾರವು ಶುಕ್ರವಾರ ಲೋಕಸಭೆಗೆ ತಿಳಿಸಿದೆ.

ಸದ್ಯ, ಲೆಫ್ಟಿನೆಂಟ್ ಕರ್ನಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿಗಳ ಬಡ್ತಿ ಪಟ್ಟಿಯನ್ನು ವಿಶೇಷ ಆಯ್ಕೆ ಮಂಡಳಿ ಸಿದ್ಧಪಡಿಸಿದೆ ಎಂದ ಸರ್ಕಾರ ಹೇಳಿದೆ.

ಜನವರಿ 9ರಿಂದ 21ರವರೆಗೆ ಮಹಿಳಾ ಅಧಿಕಾರಿಗಳಿಗಾಗಿಯೇ ಇರುವ ವಿಶೇಷ ಆಯ್ಕೆ ಮಂಡಳಿಯು ಈ ಪ್ರಕ್ರಿಯೆ ನಡೆಸಿದೆ ಎಂದು ರಕ್ಷಣಾ ಇಲಾಖೆಯ ರಾಜ್ಯ ಸಚಿವ ಅಜಯ್‌ಯ್ ಭಟ್ ತಿಳಿಸಿದ್ದಾರೆ.

ಕರ್ನಲ್ ಹುದ್ದೆಗೆ ಬಡ್ತಿ ನೀಡಲು ಒಟ್ಟು 244 ಅಧಿಕಾರಿಗಳನ್ನು ಪರಿಗಣಿಸಲಾಗಿತ್ತು. ಇದೀಗ, 108 ಮಂದಿ ಹೆಸರನ್ನು ಅಂತಿಮಗೊಳಿಸಲಾಗಿದೆ. ಈ ಅಧಿಕಾರಿಗಳಿಗೆ ಹುದ್ದೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಅವರು ಹೇಳಿದ್ದಾರೆ.

ಕೆ.ಆರ್.ನಗರದಲ್ಲಿ ನಾಳೆ 'ಬಹುಜನರ ನಡಿಗೆ– ಅಧಿಕಾರದೆಡೆಗೆ' ಜಾಗೃತಿ ಅಭಿಯಾನ

● ಬಿಎಸ್‌ಪಿಯಿಂದ ಮೈಸೂರು ವಲಯದ 47 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ● ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ವಿವರಣೆ

ಮೈಸೂರು, ಫೆ.10(ಆರ್‌ಕೆಬಿ)– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಫೆ.12ರಂದು 'ಬಹುಜನರ ನಡಿಗೆ– ಅಧಿಕಾರದೆಡೆಗೆ' ಘೋಷವಾಕ್ಯದೊಂದಿಗೆ ಕೆ.ಆರ್.ನಗರದಲ್ಲಿ ಫೆ.12ರಂದು ಬಹುಜನ ಜಾಗೃತಿ ಅಭಿಯಾನ ನಡೆಸಲಾಗುವುದು. ಅಂದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ನಗರ ತಾಲೂಕಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಮನೆ ಮನೆಗೆ ಪಕ್ಷವನ್ನು ಪರಿಚಯಿಸುವ ಕಾರ್ಯಕ್ರಮ ನಡೆಸಿದ್ದೇವೆ ಎಂದು ಹೇಳಿದರು.



ಬಿಎಸ್‌ಪಿಯಿಂದ ಈಗಾಗಲೇ ಮೈಸೂರು ವಲಯದ 47 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಏಳು, ಬೆಳಗಾವಿ ವಿಭಾಗದಲ್ಲಿ 46 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಮತ್ತು ಅಪೇಕ್ಷಿತ ಹಾಗೂ ಸಂಭಾವ್ಯ ಅಭ್ಯರ್ಥಿಗಳಿಗೆ ಚುನಾವಣೆ ಎದುರಿಸುವ ಕುರಿತು ಫೆ.11 ಮತ್ತು 12ರಂದು ಬೆಂಗಳೂರಿನಲ್ಲಿ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

ಬಹುಜನ ಸಮಾಜ ಪಕ್ಷವು ರಾಜ್ಯದ 224 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ನಿಲ್ಲಿಸುವಂತೆ ಪಕ್ಷದ ವರಿಷ್ಠರಾದ ಮಾಯಾವತಿ ಸೂಚನೆ ನೀಡಿದ್ದಾರೆ. ಎಸ್‌ಟಿ–ಎಸ್‌ಟಿ ಜನಾಂಗಕ್ಕೆ 100 ಕ್ಷೇತ್ರ, ಅಲ್ಪಸಂಖ್ಯಾತರು ಸೇರಿದಂತೆ ಹಿಂದುಳಿದ ವರ್ಗಗಳಿಗೆ 100 ಕ್ಷೇತ್ರ ಹಾಗೂ ಉಳಿದ 24 ಕ್ಷೇತ್ರಗಳನ್ನು ಬಿಎಸ್‌ಪಿ ಸಿದ್ಧಾಂತವನ್ನು ಒಪ್ಪಿ ಬರುವ ಮೇಲ್ವರ್ಗದವರಿಗೆ ನೀಡಲಾಗುವುದು ಎಂದು ತಿಳಿಸಿದರು.

ನಾನು ಬಿಎಸ್‌ಪಿಗೆ ಸೇರಿದ ನಂತರ ಕೆ.ಆರ್.ನಗರ ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ. ನಮ್ಮ ಕಾಯಕ ಸಮಾಜಗಳ ಒಕ್ಕೂಟದ ಮುಖಂಡರನ್ನೇ ನನ್ನ ವಿರುದ್ಧ ಎತ್ತಿ ಕಟ್ಟಿ ಸಭೆ ಮಾಡಿಸಿದ್ದಾರೆ. ರಾಜ್ಯಾಧ್ಯಕ್ಷರ ಸೂಚನೆ ಇಲ್ಲದೆ ನಡೆಸುವ ಯಾವುದೇ ಸಭೆ ಅಕ್ರಮ, ಅಸಿಂಧುವಾಗುತ್ತದೆ. ರಾಜಕೀಯೇತರ ಸಂಘಟನೆಯಾದ ಕಾಯಕ ಸಮಾಜಗಳ ಒಕ್ಕೂಟದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷದವರೆಲ್ಲರೂ ಇದ್ದಾರೆ. ಅವರು ತಮ್ಮ ಪಕ್ಷಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆಯಬೇಕೆಂಬುದು ಸಂಘಟನೆಯ ಆಶಯವಾಗಿದೆ ಎಂದು ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಕಾಯಕ ಸಮಾಜಗಳ ಸಂಘಟನೆಯ ಮುಖಂಡರನ್ನೇ ಬಳಸಿಕೊಂಡು ನನ್ನ ಮನೆಗೆ ಬಂದು ಧಮ್ಕಿ ಹಾಕಿ, ಬೆದರಿಸುವ ಕೆಲಸ ಮಾಡಿದ್ದಾರೆ. ಇಂತಹ ಬೆದರಿಕೆಗಳಿಗೆ ನಾನು ಜಗ್ಗುವುದಿಲ್ಲ. ಆತ್ಮವಿಶ್ವಾಸದಿಂದ ಚುನಾವಣೆ ಎದುರಿಸಲಾಗುವುದು. ನನ್ನ ಮನೆಗೆ ಬಂದು ಧಮ್ಕಿ ಹಾಕಿರುವವರ ಕುರಿತು ತಾವು ಪೊಲೀಸರ ಮೊರೆ ಹೋಗಲಿದ್ದೇನೆ. ನನಗೆ ಬೆದರಿಕೆ ಹಾಕುವುದಾಗಲೀ, ಕಾಯಕ ಸಮಾಜಗಳನ್ನು ಒಡೆಯುವ ದುಸ್ಸಾಹಸವನ್ನು ಕೆ.ಆರ್.ನಗರದ ಕೆಲವು ಮುಖಂಡರು ಮಾಡಿದರೆ, ಮುಂದಿನ ಚುನಾವಣೆಯಲ್ಲಿ ಮತದಾರರು ತಕ್ಕ ಪಾಠ ಕಲಿಸುತ್ತಾರೆ. ಕಾಂಗ್ರೆಸ್‌ನವರ ಇಂತಹ ಕುತಂತ್ರಗಳಿಗೆ ಕ್ಷೇತ್ರದ ಜನರು ಮನ್ನಣೆ ನೀಡಲಾರರು ಎಂದರು.

ನಾನು ಬಿಎಸ್‌ಪಿ ಸೇರಿದ್ದೇನೆಂದು ನಾನು ಸಂಘಟನೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಿಲ್ಲ. ಸಂಘಟನೆಯನ್ನು ಒಡೆಯಲು ಯಾರೇ ಪ್ರಯತ್ನಿಸಿದರೂ ಜೇನುಗೂಡಿಗೆ ಕೈಹಾಕಿದಂತಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಪಿ.ಶಂಕರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಭೂಕಂಪ ಪೀಡಿತ ಟರ್ಕಿಯಲ್ಲಿ ಬೆಂಗಳೂರು ಮೂಲದ ಟೆಕ್ಕಿ ನಾಪತ್ತೆ

ಕುಟುಂಬಸ್ಥರಲ್ಲಿ ಆತಂಕ, ಸಾವಿನ ಸಂಖ್ಯೆ 22 ಸಾವಿರಕ್ಕೆ ಏರಿಕೆ

ಬೆಂಗಳೂರು, ಫೆ.10– ಭೂಕಂಪ ಪೀಡಿತ ಟರ್ಕಿಯಲ್ಲಿ ಬೆಂಗಳೂರಿನ ಎಂಜಿನಿಯರ್ ವಿಜಯ್‌ಕುಮಾರ್ (36 ವರ್ಷ) ನಾಪತ್ತೆಯಾಗಿದ್ದಾರೆ.

ಪೀಣ್ಯದಲ್ಲಿರುವ ಆಮ್ಲಜನಕ ಹಾಗೂ ನೈಟ್ರೋಜನ್ ತಯಾರಿಕಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವಿಜಯ್‌ಕುಮಾರ್, ಕಂಪನಿಯ ಹೊಸ ಘಟಕ ಸ್ಥಾಪನೆ ಕೆಲಸಕ್ಕಾಗಿ ಟರ್ಕಿಗೆ ಹೋಗಿದ್ದರು. ಇದೇ ಟರ್ಕಿಯಲ್ಲಿ ಭೂಕಂಪ ಸಂಭವಿಸಿದ್ದು, ವಿಜಯ್‌ಕುಮಾರ್ ಎಲ್ಲಿದ್ದಾರೆಂಬ ಮಾಹಿತಿ ಇದುವರೆಗೂ ಲಭ್ಯವಾಗಿಲ್ಲ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಸಿದ್ದಪ್ಪ ಅವರು, 'ಡೆಹ್ರಾಡೂನ್‌ನ ವಿಜಯ್‌ಕುಮಾರ್, ಹಲವು ವರ್ಷಗಳಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಉತ್ತಮ ಎಂಜಿನಿಯರ್ ಆಗಿದ್ದರು. ಹೊಸ ಘಟಕಕ್ಕೆ ಅಗತ್ಯವಿದ್ದ ಸಾಮಗ್ರಿಗಳನ್ನು ನಾಲ್ಕು ತಿಂಗಳ ಹಿಂದೆಯೇ ಕಳುಹಿಸಲಾಗಿತ್ತು. ಘಟಕ ಸ್ಥಾಪನೆ ಕೆಲಸಕ್ಕಾಗಿ ವಿಜಯ್, ಜನವರಿ 25ರಂದು ಟರ್ಕಿಗೆ ಹೋಗಿದ್ದರು ಎಂದು ಹೇಳಿದ್ದಾರೆ.

ಅಂತೆಯೇ ವಿಜಯ್‌ಕುಮಾರ್ ಉಳಿದುಕೊಂಡಿದ್ದ ಟರ್ಕಿಯ ಹೋಟೆಲ್ ಸಂಪೂರ್ಣ ನೆಲಸಮವಾಗಿದ್ದು, ರಕ್ಷಣಾ ಕಾರ್ಯಾಚರಣೆ ನಡೆದಿರುವ ಮಾಹಿತಿ ಇದೆ. ಆದರೆ, ವಿಜಯ್‌ಕುಮಾರ್ ಎಲ್ಲಿದ್ದಾರೆಂಬ ಮಾಹಿತಿ ಇದುವರೆಗೂ ಗೊತ್ತಾಗಿಲ್ಲ. ಘಟಕ ಸ್ಥಾಪನೆಗೆ ಕೈಜೋಡಿಸಿದ್ದ ಟರ್ಕಿಯ ಕಂಪನಿಯ ಕಟ್ಟಡವೂ ನೆಲಸಮವಾಗಿದೆ. ಅವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ವಿಜಯ್‌ಕುಮಾರ್ ನಾಪತ್ತೆ ಬಗ್ಗೆ ಭಾರತೀಯ ರಾಯಭಾರಿ ಕಚೇರಿಗೂ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಫೆ.5ರಂದು ಕೊನೆ ಕರೆ: ಟರ್ಕಿಯಿಂದ ಫೆ. 5ರಂದು ಕುಟುಂಬದವರಿಗೆ ಕರೆ ಮಾಡಿದ್ದ ವಿಜಯ್‌ಕುಮಾರ್, ಕುಶಲೋಪರಿ ವಿಚಾರಿಸಿದ್ದರು. ವಿಜಯ್‌ಕುಮಾರ್ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಅಣ್ಣ ಅರುಣ್‌ಕುಮಾರ್, ನನ್ನ ತಮ್ಮ ವಿಜಯ್‌ಕುಮಾರ್ ಬದುಕಿ ಬಂದರೆ ಸಾಕು. ಆತ ಯಾವುದೇ ಸ್ಥಿತಿಯಲ್ಲಿದ್ದರೂ ಆರೈಕೆ ಮಾಡುತ್ತೇವೆ ಎಂದಿದ್ದಾರೆ.

ಸಂಸತ್ತಿನ ಒಳಗೆ, ಹೊರಗೆ ಅದಾನಿ ವಿಷಯ ಪ್ರಸ್ತಾಪ

ಇದೊಂದು ದೊಡ್ಡ ಹಗರಣ: ಮಲ್ಲಿಕಾರ್ಜುನ ಖರ್ಗೆ



ನವದೆಹಲಿ, ಫೆ.10– ಸಂಸತ್ತಿನ ಒಳಗೆ ಮತ್ತು ಹೊರಗೆ ಅದಾನಿ ವಿಷಯವನ್ನು ಕಾಂಗ್ರೆಸ್ ಪ್ರಸ್ತಾಪಿಸುತ್ತಲೇ ಇರುತ್ತದೆ. ಆದರೂ ಸರ್ಕಾರ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಲು ಸಿದ್ಧವಿಲ್ಲದಿದ್ದರೆ ಜನರೇ ಅಧಿಕಾರದಿಂದ ಕೆಳಗಿಳಿಸುತ್ತಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಹೇಳಿದ್ದಾರೆ.

ಇಂದು ಪಕ್ಷದ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಖರ್ಗೆ, ಅದಾನಿ ವಿವಾದ, ಸಂಸತ್ತಿನಲ್ಲಿ ತಮ್ಮ ಮತ್ತು ರಾಹುಲ್ ಗಾಂಧಿ ಅವರ ಕೆಲವು ಟೀಕೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಸರ್ಕಾರಕ್ಕೆ 10 ಪ್ರಶ್ನೆಗಳನ್ನು ಮುಂದಿಟ್ಟರು.

ಅದಾನಿ ವಿಷಯವು ಸಾರ್ವಜನಿಕ ಹಣವನ್ನು ಒಳಗೊಂಡಿರುವ ಅತಿ 'ದೊಡ್ಡ ಹಗರಣ' ಎಂದು ಆರೋಪಿಸಿದ ಖರ್ಗೆ, ಅದರ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ)ತನಿಖೆಗೆ ಆದೇಶಿಸಲು ಸರ್ಕಾರ ಏಕೆ ಹಿಂಜರಿಯುತ್ತಿದೆ ಎಂದು ಪ್ರಶ್ನಿಸಿದರು.

ರಾಜ್ಯಸಭೆಯಲ್ಲಿ ನಾನು ಮಾಡಿದ ಭಾಷಣದಲ್ಲಿ ಅಸಂಸದೀಯವಾಗಿ ಏನನ್ನೂ ಹೇಳಿಲ್ಲ ಮತ್ತು ಅದಾನಿ ವಿಷಯದ ಬಗ್ಗೆ ಕೆಲವು ಪ್ರಶ್ನೆಗಳನ್ನು ಮಾತ್ರ ಕೇಳಿದ್ದೇನೆ ಎಂದು ಖರ್ಗೆ ತಿಳಿಸಿದರು. ಅದಾನಿ ಗ್ರೂಪ್ ಮೇಲಿನ ಆರೋಪಗಳ ಬಗ್ಗೆ ಮೋದಿ ಸರ್ಕಾರವು ಜಂಟಿ ಸಂಸದೀಯ ಸಮಿತಿಯ ತನಿಖೆ ಏಕೆ ನಡೆಸುತ್ತಿಲ್ಲ. ಮೋದಿ ಜಿ ಮತ್ತು ಅವರ ಸರ್ಕಾರವು ಸಂಸತ್ತಿನಲ್ಲಿ 'ಅದಾನಿ' ಪದವನ್ನು(ಯಾರಿಗೂ) ಹೇಳಲು ಅವಕಾಶ ನೀಡದಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

ಇಷ್ಟೊಂದು ದೊಡ್ಡ ಹಗರಣ ನಡೆದಿದ್ದರೂ ಆರ್‌ಬಿಐ, ಸೆಬಿ, ಇಡಿ, ಎಸ್‌ಎಫ್‌ಐಒ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಐಟಿ ಮತ್ತು ಸಿಬಿಐ ಏಕೆ ಇನ್ನೂ ಮೌನವಾಗಿವೆ. ತನಿಖೆ ಏಕೆ ನಡೆಸುತ್ತಿಲ್ಲ? ಎಂದು ಕಾಂಗ್ರೆಸ್ ಅಧ್ಯಕ್ಷರು ಪ್ರಶ್ನಿಸಿದರು.

ಒಂದನೇ ಪುಟದಿಂದ

ವಿಶೇಷ ವರ್ಗಗಳಡಿ ಅರ್ಜಿ ಆಹ್ವಾನ

ಲಭ್ಯವಿರುವ ವಿವಿಧ ಅಳತೆಯ 188 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು. ಮುಡಾ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 188 ನಿವೇಶನಗಳ ಪೈಕಿ ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ, ಕ್ರೀಡೆಯಲ್ಲಿ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದವರಿಗೆ ಶೇ. 5ರಷ್ಟು, ಕಲೆ, ವಿಜ್ಞಾನ, ಸಾಹಿತ್ಯ, ವೈದ್ಯಕೀಯ ಹಾಗೂ ಸಾರ್ವಜನಿಕ ಆಡಳಿತದಲ್ಲಿ ರಾಷ್ಟ್ರೀಯ, ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದ ವ್ಯಕ್ತಿಗಳಿಗೆ ಶೇ. 5ರಷ್ಟು, ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ ಮಾಜಿ ಸೈನಿಕರು ಹಾಗೂ ಸೈನಿಕ ಸಿಬ್ಬಂದಿಗೆ ಶೇ.2ರಷ್ಟು, 10 ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಮುಡಾ ವ್ಯಾಪ್ತಿಯಲ್ಲಿ ವಾಸವಾಗಿರುವ ಸ್ವಾತಂತ್ರ್ಯ ಯೋಧರಿಗೆ ಶೇ. 2ರಷ್ಟು ಮತ್ತು ಕರ್ತವ್ಯ ನಿರತರಾಗಿದ್ದಾಗ ನಿಧನ ಹೊಂದಿದ ರಾಜ್ಯ ಸರ್ಕಾರಿ ನೌಕರರ ಅವಲಂಬಿತರಿಗೆ ಶೇ. 1ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಈ ನಿವೇಶನಗಳಿಗೆ ಸಾಧಕರು 'ಹೆಚ್' ಪ್ರವರ್ಗದಡಿ ಅರ್ಜಿ ಸಲ್ಲಿಸಬಹುದು ಎಂದರು.

20x30, 30x40, 40x60 ಹಾಗೂ 60x80 ಅಡಿ ಅಳತೆಯ ತಲಾ 47 ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಫೆಬ್ರವರಿ 12ರಿಂದ 28ರವರೆಗೆ ರಾಜ್ಯದ ಬ್ಯಾಂಕ್ ಆಫ್ ಬರೋಡಾ ಜಿಲ್ಲಾ ಪ್ರಧಾನ ಶಾಖೆಗಳಲ್ಲಿ 500 ರೂ. ಶುಲ್ಕ ಪಾವತಿಸಿ ಅರ್ಜಿ ಪಡೆಯಬಹುದಾಗಿದ್ದು, 1000 ರೂ. ನೋಂದಣಿ ಶುಲ್ಕವನ್ನು ಪಾವತಿಸಿ ಭರ್ತಿ ಮಾಡಿದ ಅರ್ಜಿಯನ್ನು ಫೆ. 28ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಅವರು ತಿಳಿಸಿದರು.

20x30 ಅಡಿ ಅಳತೆ ನಿವೇಶನಕ್ಕೆ 5,23,000 ರೂ., 30x40ಕ್ಕೆ 10,46,000 ರೂ., 40x60ಕ್ಕೆ 20,92,000 ರೂ. ಹಾಗೂ 60x80 ಅಡಿ ವಿಸ್ತೀರ್ಣದ ನಿವೇಶನಕ್ಕೆ 34,86,000 ರೂ. ದರ ನಿಗದಿ ಮಾಡಲಾಗಿದ್ದು, ಶೇ. 10ರಷ್ಟು ಇಎಂಡಿ ಮೊತ್ತವನ್ನು ಅರ್ಜಿಯೊಂದಿಗೆ ಬ್ಯಾಂಕ್ ಡಿಡಿ ಮೂಲಕ ಪಾವತಿಸಬೇಕು. 18 ವರ್ಷ ತುಂಬಿದ, ಕರ್ನಾಟಕದಲ್ಲಿ 10 ವರ್ಷ ವಾಸವಾಗಿರುವ, ಅಜಿದಾರರು ಅಥವಾ ಅವರ ಕುಟುಂಬ ಸದಸ್ಯರು ಮುಡಾ ವ್ಯಾಪ್ತಿಯಲ್ಲಿ ಸ್ವಂತ ಮನೆ ಹೊಂದಿರಬಾರದು. ಮುಡಾ ಅಥವಾ ಇತರೆ ಯಾವುದೇ ಪ್ರಾಧಿಕಾರದಿಂದ ಹಂಚಿಕೆಯಾದ ಮನೆ ಅಥವಾ ನಿವೇಶನ ಪಡೆದಿದ್ದರೆ ಅಂತಹವರು ಈಗ ಹಂಚಿಕೆ ಮಾಡಲಾಗುವ ನಿವೇಶನ ಪಡೆಯಲು ಅರ್ಹರಾಗಿರುವುದಿಲ್ಲ. ಇವರು ಯಾವುದೇ ಸಂಘ–ಸಂಸ್ಥೆಯಾಗಲೀ ಅಥವಾ ಖಾಸಗಿ ಬಡಾವಣೆಯಿಂದಾಗಲೀ ನಿವೇಶನ ಅಥವಾ ಮನೆ ಹಂಚಿಕೆ ಹೊಂದಿರಬಾರದು. ಈ ಬಗ್ಗೆ ನೋಟರಿಯಿಂದ ದೃಢೀಕರಿಸಿದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂದು ಹೇಳಿದರು. ಹಂಚಿಕೆಯಾದ ನಿವೇಶನದಲ್ಲಿ ಸ್ವಾಧೀನ ಪತ್ರ ಪಡೆದ 3 ವರ್ಷದೊಳಗಾಗಿ ವಾಸದ ಮನೆ ಕಟ್ಟಿಸುವ ಸಾಮರ್ಥ್ಯ ತನಗಿದೆ ಎಂಬುದನ್ನು ಅರ್ಜಿದಾರರು ಮುಡಾಗೆ ತೃಪ್ತಿಕರವಾಗಿ ಸಾಬೀತುಪಡಿಸಬೇಕು ಹಾಗೂ 3 ವರ್ಷದೊಳಗೆ ಮನೆ ಕಟ್ಟಬೇಕು ಎಂದ ಅವರು, ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ಆದರೆ ರಾಜ್ಯದ ಹೊರಗೆ ಕೇಂದ್ರ ಸರ್ಕಾರದ ಸೇವೆಯ ಸೈನಿಕ ಸಿಬ್ಬಂದಿಯಾಗಿರುವವರು. ರಾಜ್ಯದ ನಿವಾಸಿಯಾಗಿದ್ದು ರಾಜ್ಯದ ಹೊರಗಡೆ ಉದ್ಯೋಗ, ವ್ಯಾಪಾರ, ವಿದ್ಯಾಭ್ಯಾಸ ಅಥವಾ ತರಬೇತಿಯಲ್ಲಿದ್ದು, ನಂತರ ಮುಡಾ ವ್ಯಾಪ್ತಿಯಲ್ಲಿ ವಾಸಿಸಲು ಇಚ್ಛೆಯುಳ್ಳವರಿಗೆ 10 ವರ್ಷ ಕಾಲ ಕರ್ನಾಟಕದ ನಿವಾಸಿಯಾಗಿರಬೇಕು ಎಂಬ ಷರತ್ತಿನಿಂದ ಸಡಿಲಿಕೆ ನೀಡಲಾಗಿದೆ ಎಂದರು. ವಸಂತನಗರ, ಆರ್‌ಟಿ ನಗರ ಸೇರಿದಂತೆ ವಿವಿಧೆಡೆ ಇರುವ 350ಕ್ಕೂ ಹೆಚ್ಚು ನಿವೇಶನಗಳನ್ನು ಸಾಧಕರಿಗೆ ಹಂತ–ಹಂತವಾಗಿ 'ಹೆಚ್' ಪ್ರವರ್ಗದಡಿ ಹಂಚಿಕೆಗೆ ಕ್ರಮ ವಹಿಸುತ್ತೇವೆ. ಗುಂಪು ವಸತಿ ಯೋಜನೆ ಪ್ರಸ್ತಾವನೆಗೆ ಸಚಿವ ಸಂಪುಟದ ಒಪ್ಪಿಗೆಗಾಗಿ ನಿರೀಕ್ಷಿಸಲಾಗಿದೆ ಎಂದು ಅವರು ವಿವರಿಸಿದರು. ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಕಾರ್ಯದರ್ಶಿ ಡಾ. ಎನ್.ಸಿ. ವೆಂಕಟರಾಜು, ನಗರ ಯೋಜಕ ಸದಸ್ಯ ಆರ್. ಶೇಷ, ಮುಡಾ ಸದಸ್ಯರಾದ ಎಸ್‌ಬಿಎಂ ಮಂಜು, ಎಸ್. ಲಕ್ಷ್ಮೀದೇವಿ, ಕೆ.ಮಾದೇಶ, ಜಿ. ಲಿಂಗಯ್ಯ, ಎಂ.ಎನ್. ನವೀನ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಾವಿರ ಎಕರೆಯಲ್ಲಿ ವಸತಿ ಬಡಾವಣೆ ನಿರ್ಮಾಣ

ಅರ್ಜಿ ಆಹ್ವಾನಿಸಲಾಗುವುದು ಎಂದು ಅಧ್ಯಕ್ಷರು ನುಡಿದರು. ವಾಹನ ಸಂಚಾರ ದಟ್ಟಣೆ ಜಾಸ್ತಿಯಾಗುತ್ತಿರುವುದರಿಂದ ಮೈಸೂರು ನಗರದ ಜೆಪಿ ನಗರ, ಬೋಗಾದಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ (ಕೆಳಸೇತುವೆ) ಹಾಗೂ ವಿಜಯನಗರ 4ನೇ ಹಂತದಲ್ಲಿ ಫ್ಲೈಓವರ್ (ಮೇಲ್ಸೇತುವೆ) ನಿರ್ಮಿಸಲು ಪ್ರಾಧಿಕಾರ ಮುಂದಾಗಿದೆ. ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದಲೇ ಮೇಲ್ಸೇತುವೆ ನಿರ್ಮಾಣವಾಗುತ್ತಿದೆ ಎಂದು ಯಶಸ್ವಿ ಸೋಮಶೇಖರ್ ವಿವರಿಸಿದರು.

ಕ್ರಿಕೆಟ್ ಕ್ರೀಡಾಂಗಣಕ್ಕೆ ಭೂಮಿ: ಹಂಚ್ಯಾ–ಸಾತಗಳ್ಳಿ ಬಳಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಮುಡಾದಿಂದ ಭೂಮಿ ನೀಡಲು ಕ್ಯಾಬಿನೆಟ್ ಸಭೆಯ ಒಪ್ಪಿಗೆಗೆ ಕಾಯುತ್ತಿದ್ದು, ಜಾಗದಲ್ಲಿ ಬೆಳೆದು ನಿಂತಿರುವ ಗಿಡಗಂಟಿ ತೆಗೆದು ಸ್ವಚ್ಛಗೊಳಿಸಲು ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದು ಅವರು ಇದೇ ವೇಳೆ ತಿಳಿಸಿದರು.

ಆಹಾರ ಅರಸಿ ಬಂದು ಒಂದೇ ಬೋನಿಗೆ ಬಿದ್ದ ಜೋಡಿ ಚಿರತೆಗಳು

- ತಿ.ನರಸೀಪುರ ತಾಲೂಕಿನ ಮುಸುವಿನಕೊಪ್ಪಲು ಗ್ರಾಮದ ಜಮೀನಿನಲ್ಲಿ ಸೆರೆ
- ಸೆರೆ ಸಿಕ್ಕಿರುವ ಎರಡೂ ಹೆಣ್ಣು ಚಿರತೆ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ





ತಿ.ನರಸೀಪುರ.ಫೆ.10(ಎಂಟಿವೈ)– ಚಿರತೆ ದಾಳಿಯಿಂದ ಈಗಾಗಲೇ ತತ್ತರಿಸಿ ಹೋಗಿರುವ ತಿ.ನರಸೀಪುರ ತಾಲೂಕಿನ ಜನತೆಗೆ ಮತ್ತೊಂದು ಸಮಾಧಾನಕರ ಸಂಗತಿ. ತಾಲೂಕಿನ ಮುಸುವಿನ ಕೊಪ್ಪಲು ಗ್ರಾಮದಲ್ಲಿ ಒಂದೇ ಬೋನಿಗೆ ಎರಡು ಹೆಣ್ಣು ಚಿರತೆಗಳು ಬಿದ್ದಿವೆ.

ಗ್ರಾಮದ ಚಂದ್ರಪ್ಪ ಎಂಬುವರ ಜಮೀನಿನಲ್ಲಿ ಇಡಲಾಗಿದ್ದ ತುಮಕೂರಿನಿಂದ ತರಿಸಲಾಗಿದ್ದ ದೊಡ್ಡ ಬೋನ್‌ಗೆ ಮುಂಜಾನೆ 5 ವರ್ಷದ ಹಾಗೂ ಅಂದಾಜು ಒಂದು ವರ್ಷದ ಎರಡು ಹೆಣ್ಣು ಚಿರತೆಗಳು ಸೆರೆ ಸಿಕ್ಕಿವೆ. ಹೊರಳಹಳ್ಳಿಯಲ್ಲಿ ಬಾಲಕನ ಬಲಿ ಪಡೆದಿದ್ದ ಚಿರತೆ ಜ.26ರಂದು ಸೆರೆ ಸಿಕ್ಕಿತ್ತು. ಆ ಬಳಿಕ ಜ.27ರಂದು ಮುಸುವಿನಕೊಪ್ಪಲು ಗ್ರಾಮದಲ್ಲಿ ಮೇಕೆಯೊಂದು ಚಿರತೆಗೆ ಬಲಿಯಾಗಿತ್ತು. ಈ ಹಿನ್ನೆಲೆಯಲ್ಲಿ ಜ.28ರಂದು ಮುಸುವಿನ ಕೊಪ್ಪಲಿನ ಚಂದ್ರಪ್ಪ ಎಂಬುವರ ಜಮೀನಿನಲ್ಲಿ ದೊಡ್ಡ ಬೋನ್ ಇಟ್ಟು, ಅದರಲ್ಲಿ ಜಾನುವಾರುಗಳ ಕಳೇಬರ ಇಡಲಾಗಿತ್ತು. ಜೊತೆಗೆ ಕರುವೊಂದನ್ನು ಕಟ್ಟಿಹಾಕಲಾಗಿತ್ತು.

ಬೋನ್ ಇಟ್ಟು 13 ದಿನದ ನಂತರ ಆಹಾರ ಅರಸಿ ಮರಿಯೊಂದಿಗೆ ಮುಂಜಾನೆ ಬಂದ ತಾಯಿ ಚಿರತೆ ಬೋನ್‌ನಲ್ಲಿ ಕಟ್ಟಿದ್ದ ಕರುವಿನ ಮೇಲೆರಗಲು ಹೋಗಿ ಸೆರೆ ಸಿಕ್ಕಿವೆ. ಇವುಗಳನ್ನು ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಚಿರತೆ ನೋಡಲು ಮುಗಿಬಿದ್ದ ಜನತೆ: ಮುಸುವಿನಕೊಪ್ಪಲಿನಲ್ಲಿ ಸೆರೆ ಸಿಕ್ಕಿರುವ ತಾಯಿ–ಮರಿ ಚಿರತೆಗಳು ಎಂದೂ ಮನುಷ್ಯರ ಮೇಲೆ ದಾಳಿ ನಡೆಸಿರಲಿಲ್ಲ. ಮೇಕೆಗಳ ಮೇಲೆ ದಾಳಿ ನಡೆಸಿತ್ತು. ಆದರೂ ಜನರಲ್ಲಿ ಮನೆ ಮಾಡಿದ್ದ ಆತಂಕ ನಿವಾರಿಸಲು ಬೋನ್ ಇಡಲಾಗಿತ್ತು. ಅದರಲ್ಲೂ ಜನರ ಮೇಲೆರಗುತ್ತಿದ್ದ ಚಿರತೆ ಸೆರೆಗೆ ತುಮಕೂರಿನಿಂದ ತರಿಸಲಾಗಿದ್ದ ದೊಡ್ಡ ಬೋನ್ ಇಡಲಾಗಿತ್ತು. ಬೋನ್‌ಗೆ ಎರಡು ಚಿರತೆಗಳು ಸೆರೆ ಸಿಕ್ಕಿರುವ ವಿಚಾರ ತಿಳಿಯುತ್ತಿದ್ದಂತೆಯೇ ಮುಸುವಿನಕೊಪ್ಪಲು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಚಿರತೆ ನೋಡಲು ಮುಗಿಬಿದ್ದರು.

ಚಿರತೆಗಳ ಮೇಲೆ ಮಮಕಾರ: ವನ್ಯಜೀವಿ ಸಂರಕ್ಷಣೆ ಹಾಗೂ ಬದಲಾದ ಪರಿಸ್ಥಿತಿಯ ಅರಿವಿನ ಬಗ್ಗೆ ಮುಸುವಿನಕೊಪ್ಪಲು ಸೇರಿದಂತೆ ಸುತ್ತಮುತ್ತಲಿನ ಜನರಲ್ಲಿ ವನ್ಯಜೀವಿಗಳ ಮೇಲೆ ಕಾಳಜಿ ಉಂಟಾಗಿದ್ದು, ಇಂದು ಸೆರೆ ಸಿಕ್ಕ ಚಿರತೆಗಳನ್ನು ನೋಡಿ, ಖುಷಿಪಟ್ಟರೇ ಹೊರತು ಯಾರೊಬ್ಬರು ಚಿರತೆಗಳಿಗೆ ಹಿಡಿಶಾಪ ಹಾಕದೇ, ಅವುಗಳ ಮೇಲೆ ಮಮಕಾರ ಮೆರೆದರು.

ಬೇಟೆಗೆ ಬಂದು ಬೆದರಿದ ಚಿರತೆಗಳು: ಚಿರತೆ ಒಳ ಬರುತ್ತಿದ್ದಂತೆಯೇ ಬೋನ್ ಬಾಗಿಲು ಮುಚ್ಚಿಕೊಂಡಿದೆ. ಸೆರೆ ಸಿಕ್ಕ ಅನುಭವವಾಗುತ್ತಿದ್ದಂತೆ ಎರಡೂ ಚಿರತೆಗಳು ಕಂಗೆಟ್ಟಿವೆ. ಅವು ಬೋನ್‌ನಲ್ಲಿದ್ದ ಕರುವಿನ ಮೇಲೆ ದಾಳಿ ಮಾಡದೆ ಅದರ ಪಕ್ಕದಲ್ಲೇ ಮಲಗಿವೆ. ಇತ್ತ ಚಿರತೆ ದಾಳಿಯ ಭಯದಲ್ಲಿ ಕಂಗಲಾಗಿದ್ದ ಕರುವೂ ಪಕ್ಕದಲ್ಲೇ ನಿಂತು ಒಮ್ಮೊಮ್ಮೆ ಚಿರತೆಗಳಿಗೆ ತಿವಿದು ದೂರ ಸರಿಸುವ ಪ್ರಯತ್ನ ಮಾಡಿದೆ. ಆದರೂ ಚಿರತೆಗಳು ಪ್ರತಿದಾಳಿ ಮಾಡಲು ಹೋಗಿಲ್ಲ.

ಪುನರ್ವಸತಿ ಕೇಂದ್ರಕ್ಕೆ ರವಾನೆ: ತಾಯಿಯೊಂದಿಗೆ ಸೆರೆ ಸಿಕ್ಕ ಮರಿಯ ಆರೈಕೆ ಮಾಡಬೇಕಾಗಿರುವುದರಿಂದ ಮೇಲಾಧಿಕಾರಿಗಳು ಹಾಗೂ ತಜ್ಞರ ಸಲಹೆ ಪಡೆದು, ಸೆರೆ ಸಿಕ್ಕ ಎರಡೂ ಚಿರತೆಯನ್ನು ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಯಿತು. ಅರಣ್ಯ ಪ್ರದೇಶಗಳಿಗೆ ಕೊಂಡೊಯ್ದು ಬಿಟ್ಟರೆ, ತಾಯಿಯಿಂದ ಮರಿ ಬೇರ್ಪಟ್ಟು ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇರುವುದರಿಂದ ಪುನರ್ವಸತಿ ಕೇಂದ್ರಕ್ಕೆ ಕೊಂಡೊಯ್ಯಲಾಯಿತು.

ಕ್ಯಾಮರಾ ಟ್ರಾಪ್ ದೃಶ್ಯಾವಳಿ ಪರಿಶೀಲನೆ: ಇಂದು ಸೆರೆ ಸಿಕ್ಕ ತಾಯಿ ಚಿರತೆಯೊಂದಿಗೆ ಒಂದೇ ಮರಿ ಬಂದಿತ್ತಾ, ಇಲ್ಲವೇ ಆ ಚಿರತೆಗೆ ಒಂದೇ ಮರಿ ಇತ್ತಾ ಎಂದು ಪರಿಶೀಲಿಸಲು ಅರಣ್ಯ ಇಲಾಖೆ ಸಿಬ್ಬಂದಿ ತೀರ್ಮಾನಿಸಿದ್ದಾರೆ. ಬೋನ್ ಇಡಲಾಗಿದ್ದ ಸ್ಥಳದಲ್ಲಿ ನಾಲ್ಕು ಕ್ಯಾಮರಾ ಟ್ರಾಪ್ ಅಳವಡಿಸಲಾಗಿದ್ದು, ಅದರಲ್ಲಿ ದಾಖಲಾಗಿರುವ ಚಿರತೆಗಳ ದೃಶ್ಯ ಪರಿಶೀಲನೆ ಮಾಡಲು ಮುಂದಾಗಿದ್ದಾರೆ. ಒಂದು ವೇಳೆ ಸೆರೆ ಸಿಕ್ಕ ಚಿರತೆಗೆ ಎರಡರಿಂದ ಮೂರು ಮರಿ ಇದ್ದಿದ್ದರೆ, ತಾಯಿಯಿಂದ ಬೇರ್ಪಟ್ಟಿರುವ ಇತರ ಮರಿಗಳ ರಕ್ಷಣೆಗೆ ಕ್ರಮ ಕೈಗೊಳ್ಳಲು ಚಿಂತಿಸಿದ್ದಾರೆ.

ಬಾಕಿ ಪ್ರೋತ್ಸಾಹ ಧನ ಬಿಡುಗಡೆಯೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆ ಆಗ್ರಹಿಸಿ

ಮೈಸೂರಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರು, ಫೆ.10(ಎಂಟಿವೈ)– ಬಾಕಿ ಇರುವ ಪ್ರೋತ್ಸಾಹ ಧನ ಬಿಡುಗಡೆಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೈಸೂರಲ್ಲಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಆಶಾಕಾರ್ಯಕರ್ತೆಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೊರೊನಾ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆಯರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಸೇವೆ ಸಲ್ಲಿಸಿದ್ದಾರೆ. ಬರೀ ಬಾಯಿ ಮಾತಲ್ಲಿ ಸರ್ಕಾರ, ಜನ ಪ್ರತಿನಿಧಿಗಳು ಆಶಾ ಕಾರ್ಯಕರ್ತರ ಸೇವೆಯನ್ನು ಪ್ರಶಂಸಿಸಿದರು. ಆದರೆ, ಆಶಾ ಕಾರ್ಯಕರ್ತೆಯರ ಸಮಸ್ಯೆ ಬಗೆಹರಿಸಲು ಸರ್ಕಾರ ಮುಂದಾಗಿಲ್ಲ. ಇನ್ನಾದರೂ ಆಶಾಗಳ ಸೇವೆಗೆ ಮನ್ನಣೆ ನೀಡಬೇಕು. ಅವರ ಸಮಸ್ಯೆ ಬಗೆಹರಿಸಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

ಕಳೆದ ಆರು ವರ್ಷಗಳಿಂದಲೂ ಜಿಲ್ಲಾ ಮಟ್ಟದಲ್ಲಿ ಆಶಾ ಕಾರ್ಯಕರ್ತೆಯರ ಕುಂದುಕೊರತೆ ನಿವಾರಣಾ ಸಭೆ ನಡೆದಿಲ್ಲ. ಮೂರು ತಿಂಗಳಿಗೊಮ್ಮೆ ಆಶಾ ಕಾರ್ಯಕರ್ತೆಯರ ಕುಂದುಕೊರತೆ ನಿವಾರಣಾ ಸಭೆ ನಡೆಸಬೇಕಾದ ನಿಯಮವಿದೆ. ಈ ವಿಚಾರವಾಗಿ ಕಳೆದ ಹಲವು ಬಾರಿ ಮನವಿಯನ್ನು ಸಲ್ಲಿಸುತ್ತಲೇ ಬಂದಿದ್ದೇವೆ. ಆದರೆ ಇದುವರೆಗೂ ನಡೆದಿಲ್ಲ. ಕೂಡಲೇ ಸಭೆ ನಡೆಸಬೇಕು. ಆಶಾ ಡೈರಿಯನ್ನು ನೀಡಬೇಕು. ಮೊಬೈಲ್ ಆ್ಯಪ್‌ಗಳ ಮೂಲಕ ಒತ್ತಾಯ ಪೂರ್ವಕವಾಗಿ ಕೆಲಸ ಮಾಡಿಸುತ್ತಿರುವುದನ್ನು ನಿಲ್ಲಿಸಬೇಕು. ಆರ್‌ಸಿಹೆಚ್ ಪೋರ್ಟಲ್‌ನಲ್ಲಿ ಎಎನ್‌ಸಿ ಹಾಗೂ ಪಿಎನ್‌ಸಿ ಇನ್ನಿತರ ಆಶಾ ಕೆಲಸಗಳು ಡಾಟಾ ಎಂಟ್ರಿ ಆಗುತ್ತಿಲ್ಲ. ಇದರಿಂದಾಗಿ ಆಶಾಗಳಿಗೆ ಕೆಲಸ ಮಾಡಿದಷ್ಟು ಪ್ರೋತ್ಸಾಹ ಧನ ಸಿಗುತ್ತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿ ತಿಂಗಳು ನಿರ್ದಿಷ್ಟ ದಿನಾಂಕದೊಳಗೆ ರಾಜ್ಯ ಹಾಗೂ ಕೇಂದ್ರದ ಪ್ರೋತ್ಸಾಹ ಧನ ಆಶಾ ಕಾರ್ಯಕರ್ತೆಯರಿಗೆ ದೊರೆಯುವ ವ್ಯವಸ್ಥೆ ಮಾಡಬೇಕು. ಇಲಾಖೆಯ ಸುತ್ತೋಲೆಗಳಂತೆ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಕ್ಲೈಂ ರಿಪೋರ್ಟ್ ಮತ್ತು ರಿಲೀಸ್ ಕಾಪಿಗಳನ್ನು ಕಡ್ಡಾಯವಾಗಿ ನೀಡಬೇಕು. ಕಫ ಪರೀಕ್ಷೆ ಸ್ಯಾಂಪಲ್ ತರಲು ಆಶಾಗಳಿಗೆ ಒತ್ತಾಯಿಸಬಾರದು. ಸುತ್ತೋಲೆಯಲ್ಲಿ ಇರದಂತಹ ಆಶಾ ಕಾರ್ಯಕರ್ತೆಯರ ಕೆಲಸವನ್ನು ಅವರಿಂದ ಮಾಡಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎಲ್ಲಾ ತಾಲೂಕು ಆಸ್ಪತ್ರೆಯಲ್ಲಿ ಆಶಾ ಕಾರ್ಯಕರ್ತೆಯರಿಗೆ ವಿಶ್ರಾಂತಿ ಕೊಠಡಿಯನ್ನು ಮೀಸಲಿಡಬೇಕು. ವ್ಯಾಕ್ಸಿನ್ ಕ್ಯಾರಿಯರ್‌ಗಳನ್ನು ತೆಗೆದುಕೊಂಡು ಹೋಗಲು ಒತ್ತಾಯಿಸಬಾರದು. ಆರೋಗ್ಯ ಇಲಾಖೆಯ ಆದೇಶದಂತೆ ಸಂಘದ ಪದಾಧಿಕಾರಿಗಳೊಂದಿಗೆ ಮೂರು ತಿಂಗಳಿಗೊಮ್ಮೆ ಆಶಾ ಕಾರ್ಯಕರ್ತೆಯರ ಕುಂದುಕೊರತೆ ನಿವಾರಣಾ ಸಭೆಯನ್ನು ನಡೆಸಬೇಕು. ಸಭೆಯ ಮಾಹಿತಿಯನ್ನು ಕನಿಷ್ಠ ಒಂದು ವಾರ ಮುನ್ನವೇ ಸಂಘದ ಮುಖಂಡರಿಗೆ ತಿಳಿಸಬೇಕು. ಈ ರೀತಿಯ ಕುಂದುಕೊರತೆ ಸಭೆಯನ್ನು ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಉಮಾದೇವಿ, ಪಿ.ಎಸ್.ಸಂಧ್ಯಾ, ಸೀಮಾ, ಮಂಜುಳಾ, ಭಾಗ್ಯ, ಮಂಜುಳಾ ಮಣಿ, ಸವಿತಾ, ಕೋಮಲ, ಲಕ್ಷ್ಮಿ, ಶ್ವೇತ, ಅಶ್ವಿನಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಭಾರತ ತೊರೆದ ಅಲಿಬಾಬ; ಪೇಟಿಎಂನಲ್ಲಿದ್ದ ಪಾಲು ಪೂರ್ಣ ಮಾರಾಟ

ಮುಂಬೈ, ಫೆ.10– ಪೇಟಿಎಂನಲ್ಲಿದ್ದ ಪಾಲುದಾರಿಕೆಯನ್ನು ಪೂರ್ಣವಾಗಿ ಮಾರಾಟ ಮಾಡಿರುವ ಅಲಿಬಾಬ ಸಂಸ್ಥೆ ಈ ವ್ಯವಹಾರದಲ್ಲಿ ಭಾರತವನ್ನು ತೊರೆದಿದೆ.

ಪೇಟಿಎಂನ ಮಾತೃ ಸಂಸ್ಥೆ ಒನ್ 97 ಕಮ್ಯುನಿಕೇಶನ್ಸ್ ಲಿಮಿಟೆಡ್ (ಒಸಿಎಲ್) ನಲ್ಲಿನ ಶೇ.3.4ರಷ್ಟು ಈಕ್ವಿಟಿ ಅಥವಾ 2.1 ಕೋಟಿ ಷೇರುಗಳನ್ನು ಮಾರಾಟ ಮಾಡಿ ಬ್ಲಾಕ್ ಡೀಲ್‌ನಲ್ಲಿ ಸಂಪೂರ್ಣ ಪಾಲನ್ನು ಮಾರಾಟ ಮಾಡಿದೆ ಹಾಗೂ ಇನ್ನು ಮುಂದೆ ಅಲಿಬಾಬ ಪೇಟಿಎಂನ ಭಾಗವಾಗಿರುವುದಿಲ್ಲ.

ಇದಕ್ಕೂ ಮುನ್ನ ಸಂಸ್ಥೆ ಜನವರಿಯಲ್ಲಿ ತನ್ನ 6.26 ರಷ್ಟು ಈಕ್ವಿಟಿಯ ಪೈಕಿ ಶೇ.3.1ರಷ್ಟು ಈಕ್ವಿಟಿಯನ್ನು ಮಾರಾಟ ಮಾಡಿತ್ತು. ಅಲಿಬಾಬ ಈಗಾಗಲೇ ಜೊಮ್ಯಾಟೋ ಹಾಗೂ ಬಿಗ್ ಬ್ಯಾಸ್ಕೆಟ್‌ಗಳಲ್ಲಿಯೂ ತನ್ನ ಪಾಲುದಾರಿಕೆಯನ್ನು ಮಾರಾಟ ಮಾಡಿರುವುದರಿಂದ, ಇತ್ತೀಚಿನ ಡೀಲ್ ಅನ್ನು ಅಲಿಬಾಬಾ ಭಾರತ ತೊರೆದಿರುವ ಡೀಲ್ ಎಂದೇ ವಿಶ್ಲೇಷಿಸಲಾಗುತ್ತಿದೆ.

ಪೇಟಿಎಂನಲ್ಲಿ ಚೀನಾ ಪಾಲುದಾರಿಕೆ ಕೊನೆಗೊಂಡಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಚೇತರಿಕೆ ಕಂಡುಬರಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತುರ್ತು ಆರೋಗ್ಯ ಸೇವೆಗಾಗಿ 30 ವೈದ್ಯಕೀಯ ತಂಡಗಳ ನಿಯೋಜನೆ

ಬೆಂಗಳೂರು, ಫೆ.10– ಫೆಬ್ರವರಿ 13 ರಿಂದ 17ರವರೆಗೆ ಏರೋ ಇಂಡಿಯಾ–2023 ವೈಮಾನಿಕ ಪ್ರದರ್ಶನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ತುರ್ತು ಆರೋಗ್ಯ ಸೇವೆ ಕಲ್ಪಿಸಲು ಆರೋಗ್ಯ ಇಲಾಖೆ 30 ವೈದ್ಯಕೀಯ ತಂಡಗಳನ್ನು ನಿಯೋಜನೆ ಮಾಡಿದೆ.

ಯಲಹಂಕ ವಾಯುನೆಲೆಯಲ್ಲಿ ವೈಮಾನಿಕ ಪ್ರದರ್ಶನ ನಡೆಯಲಿದ್ದು, ಈ ಸಂದರ್ಭದಲ್ಲಿ ತುರ್ತು ವೈದ್ಯಕೀಯ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಏನೇನು ಸಿದ್ಧತೆ: ವೈಮಾನಿಕ ಪ್ರದರ್ಶನದ ದಿನಗಳಲ್ಲಿ 30 ತುರ್ತು ಆರೋಗ್ಯ ವಿಪತ್ತು ನಿರ್ವಹಣಾ ತಂಡಗಳನ್ನು ನಿಯೋಜನೆ ಮಾಡಲಾಗಿದೆ. ಪ್ರತಿ ತಂಡದಲ್ಲಿ ಒಬ್ಬ ತಜ್ಞ ವೈದ್ಯರು, ಶುಶ್ರೂಷಕಿ, ಫಾರ್ಮಾಸಿಸ್ಟ್ ಮತ್ತು ಸಹಾಯಕ ಸಿಬ್ಬಂದಿ ಅಂಬುಲೆನ್ಸ್ ವಾಹನದೊಂದಿಗೆ ಇರುತ್ತಾರೆ.

ಒಳಾಂಗಣದಲ್ಲಿ 10 ತಂಡಗಳು ಹಾಗೂ ಹೊರಾಂಗಣದಲ್ಲಿ 20 ತಂಡಗಳನ್ನು ನಿಯೋಜನೆ ಮಾಡಲಾಗಿದೆ. ಸರ್ಕಾರಿ ಮತ್ತು ಖಾಸಗಿಯ 45 ಅಂಬುಲೆನ್ಸ್ ವಾಹನಗಳ ಬಳಕೆ ಮಾಡಲಾಗುತ್ತಿದೆ. 70 ವೈದ್ಯರು, 80 ಅರೆ ವೈದ್ಯಕೀಯ ಸಿಬ್ಬಂದಿ ಮತ್ತು 27 ಸಹಾಯಕ ಸಿಬ್ಬಂದಿಯೂ ಈ ತಂಡದಲ್ಲಿ ಇರಲಿದ್ದಾರೆ.

ಬೆಂಗಳೂರು ನಗರದ ಖಾಸಗಿ ಆಸ್ಪತ್ರೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜೊತೆ ಕೈ ಜೋಡಿಸಿವೆ. ಖಾಸಗಿ ಆಸ್ಪತ್ರೆಗಳಲ್ಲಿ 1,928 ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ 750 ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಅಧಿಕಾರಿಗಳೂ ಈ ತಂಡದಲ್ಲಿದ್ದು, ಈಗಾಗಲೇ ಅಣುಕು ಪ್ರದರ್ಶನ ನಡೆಸುತ್ತಿದ್ದಾರೆ.

ನಿಗದಿಯಂತೆ ಮಾರ್ಚ್ 5ರಂದೇ ನೀಟ್–ಪಿಜಿ: ಮನ್ಸುಖ್ ಮಾಂಡವೀಯಾ

ನವದೆಹಲಿ, ಫೆ.10– ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್–ಪಿಜಿ) ನಿಗದಿಯಂತೆ ಮಾರ್ಚ್ 5ರಂದು ನಡೆಯಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ ಅವರು ಲೋಕಸಭೆಯಲ್ಲಿ ಶುಕ್ರವಾರ ತಿಳಿಸಿದ್ದಾರೆ.

ಕಾಂಗ್ರೆಸ್ ಸದಸ್ಯ ಗೌರವ್ ಗೊಗೋಯಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಯಾರೂ ಪರೀಕ್ಷೆಯಿಂದ ಹೊರಗುಳಿಯಬಾರದು ಎಂಬ ಕಾರಣಕ್ಕೆ ಸಚಿವಾಲಯವು, ಇಂಟರ್ನ್‌ಶಿಪ್ ಇನ್ನೂ ಪೂರ್ಣಗೊಳಿಸದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಕಟ್‌ಆಫ್ ದಿನಾಂಕವನ್ನು ವಿಸ್ತರಿಸಿದೆ ಎಂದೂ ಹೇಳಿದ್ದಾರೆ.

2023ರ ನೀಟ್–ಪಿಜಿಯನ್ನು ಕೆಲ ತಿಂಗಳವರೆಗೆ ಮುಂದೂಡಬೇಕೆಂಬ ವಿದ್ಯಾರ್ಥಿಗಳ ಬೇಡಿಕೆಯನ್ನು ಗೌರವ್ ಅವರು ಸಚಿವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಮಾಂಡವೀಯಾ ಅವರು ಮಾರ್ಚ್ 5ರಂದೇ ಪರೀಕ್ಷೆ ನಡೆಸಲಾಗುವುದು.

ಕಾರು ಡಿಕ್ಕಿ: ಜಿಂಕೆ ಮರಿ ಸಾವು



ಚಾಲಕನ ಬಂಧನ


ಮೈಸೂರು, ಫೆ.10– ಕಾರು ಡಿಕ್ಕಿ ಹೊಡೆದು ಜಿಂಕೆ ಮರಿ ಸಾವನ್ನಪ್ಪಿದ್ದು, ಚಾಲಕನನ್ನು ಬಂಧಿಸಲಾಗಿದೆ. ಬಂಡೀಪುರ ಹುಲಿಯೋಜನೆ ಗುಂಡ್ಲುಪೇಟೆ ಉಪ ವಿಭಾಗ, ಮದ್ದೂರು ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766ರ ದಾರಿಪುರದ ಹುಲ್ಲುಗಾವಲು ಬಳಿ ನಿನ್ನೆ(ಫೆ.9)ಆಂಧ್ರ ನೋಂದಣಿಯ ಇನ್ನೋವಾ ಕಾರು(ಎಪಿ–09, ಸಿಜೆ–0670) ಡಿಕ್ಕಿ ಹೊಡೆದು 6 ತಿಂಗಳ ಮರಿಜಿಂಕೆ ಸಾವನ್ನಪ್ಪಿತು. ಈ ಸಂಬಂಧ ಮದ್ದೂರು ವಲಯ ಕಚೇರಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಕಾರು ಚಾಲಕ ಎಸ್.ಸಬೀರ್‌ನನ್ನು ಬಂಧಿಸಲಾಗಿತ್ತು. ಇಂದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಗುಂಡ್ಲುಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದಾನಿ ಸಮೂಹ ಸಂಸ್ಥೆಗಳ ವಿರುದ್ಧ ಹಿಂಡನ್‌ಬರ್ಗ್ ಆರೋಪ

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಒಳಗೊಂಡ ಸಮಿತಿಯಿಂದ ತನಿಖೆ ಆಗ್ರಹ

ಮೈಸೂರು,ಫೆ.10(ಎಂಟಿವೈ)– ಅದಾನಿ ಸಮೂಹಗಳ ಸಂಸ್ಥೆಗಳ ವಿರುದ್ಧ ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆ ಮಾಡಿರುವ ಆರೋಪ ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಒತ್ತಾಯಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅದಾನಿ ಮೋಸ ಜಾಲವನ್ನು ಅಮೆರಿಕಾದ ಹಿಂಡನ್‌ಬರ್ಗ್ ಬಯಲು ಮಾಡಿದೆ. ಕೇಂದ್ರ ಸರ್ಕಾರದ ನೆರವಿನಿಂದ ಸಾರ್ವಜನಿಕರ ಹಣ ಲೂಟಿ ಮಾಡಿರುವ ಅದಾನಿ ಆಸ್ತಿಯನ್ನು ರಾಷ್ಟ್ರೀಕರಣಗೊಳಿಸಿ ಹರಾಜು ಹಾಕಬೇಕು. ಇದೊಂದು ಕರ್ಮಕಾಂಡವಾಗಿದ್ದು, ಮೋದಿಯವರ ಬೆಂಬಲದಿಂದ ಕೋಟಿ ಕೋಟಿ ಲೂಟಿ ಮಾಡಿರುವುದು ಜಗಜ್ಜಾಹಿರಾಗಿದೆ. ಇದನ್ನು ಸಂಸತ್‌ನಲ್ಲಿ ಪ್ರಶ್ನಿಸಿದರೆ ಮೋದಿ ಅವರು ಸಮರ್ಪಕ ಉತ್ತರ ಕೊಡದೆ ಪಲಾಯನ ಮಾಡುತ್ತಿದ್ದಾರೆ. ಅದಾನಿ ರಕ್ಷಣೆಗೆ ಸರ್ಕಾರ ನಿಂತಿದೆ. ಇದರಿಂದ ಯಾವುದೇ ತನಿಖೆ ನಡೆಸುತ್ತಿಲ್ಲ ಎಂದು ಆರೋಪಿಸಿದರು.



ಅದಾನಿ ಆಸ್ತಿ 2014ರಲ್ಲಿ 14 ಸಾವಿರ ಕೋಟಿಯಿತ್ತು. ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ 509ನೇ ಸ್ಥಾನದಲ್ಲಿದ್ದರು. 2023ಕ್ಕೆ ಅವರ ಆಸ್ತಿ 17.59 ಲಕ್ಷ ಕೋಟಿಗೆ ಏರಿಕೆಯಾಗಿದ್ದು, ವಿಶ್ವದ 2ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಕಡಿಮೆ ಅವಧಿಯಲ್ಲಿ ಇಷ್ಟು ಆಸ್ತಿ ಸಂಪಾದಿಸಲು ಹೇಗೆ ಸಾಧ್ಯ? ಬೇನಾಮಿ ಕಂಪನಿಗಳ ಹೆಸರಿನಲ್ಲಿ ಲಕ್ಷಾಂತರ ಕೋಟಿ ಹಣ ಲೂಟಿ ಮಾಡಿದ್ದಾರೆ. ತಮ್ಮ ಕಂಪನಿಯ ಷೇರು ಮೌಲ್ಯ ಏರಿಕೆ ಮಾಡಿ ಸಾರ್ವಜನಿಕರಿಂದ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸುತ್ತಿದ್ದಾರೆ. ಸರ್ಕಾರದ ಬೆಂಬಲವಿಲ್ಲದೆ ಇದು ಸಾಧ್ಯವಾಗುವುದಿಲ್ಲ. ಮೋದಿ ಚುನಾವಣೆಯಲ್ಲಿ ಅದಾನಿ ಹಣ ಬಳಸುತ್ತಿರುವುದರಿಂದ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಮೋದಿ ಅವರಿಗೆ ಸಾರ್ವಜನಿಕರ ಮೇಲೆ ಕಾಳಜಿ ಇದ್ದರೆ ಕೂಡಲೇ ಅದಾನಿ ಸಹೋದರರನ್ನು ಬಂಧಿಸಿ, ಅವರ ಆಸ್ತಿಯನ್ನು ರಾಷ್ಟ್ರೀಕರಣಗೊಳಿಸಬೇಕು. ಇಲ್ಲದಿದ್ದರೆ ದೇಶಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ನಿಜ ಹೇಳಿದ್ದಾರೆ: ಸಂಸದ ಪ್ರತಾಪಸಿಂಹ ಮೈಸೂರು–ಬೆಂಗಳೂರು ಹೆದ್ದಾರಿಗೆ ಸಂಬಂಧಿಸಿದಂತೆ ಟ್ವೀಟ್ ಮಾಡಿದ್ದು, 2013ರಲ್ಲಿ ಯುಪಿಎ ಸರ್ಕಾರವಿದ್ದಾಗ ಅನುಮೋದನೆ ನೀಡಿರುವುದನ್ನು ದಾಖಲೆ ಸಮೇತ ತಿಳಿಸಿದ್ದಾರೆ. ಸುಳ್ಳನ್ನು ಹೆಚ್ಚು ದಿನ ಹೇಳಲು ಆಗುವುದಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಕೇಂದ್ರದ ಮೇಲೆ ಒತ್ತಡ ಹೇರಿ ಯೋಜನೆ ಜಾರಿ ಮಾಡಿದ್ದಾರೆ. ಆದರೆ, ಇದರ ಕ್ರೆಡಿಟ್ ಅನ್ನು ಬಿಜೆಪಿಯವರು ತೆಗೆದುಕೊಳ್ಳುತ್ತಿದ್ದಾರೆ. ಮನೆ ಕಟ್ಟಿ ಸುಣ್ಣ ಹೊಡೆದಿದ್ದು ಕಾಂಗ್ರೆಸ್. ಮನೆ ಒಳಗೆ ಸೇರಿಕೊಂಡು ಮನೆ ಕಟ್ಟಿಸಿದ್ದೇ ನಾವು ಎಂದು ಬಿಜೆಪಿಯವರು ಹೇಳುತ್ತಾರೆ. ಅಲ್ಲದೆ ಹೆದ್ದಾರಿ ನಿರ್ಮಾಣದ ವೇಳೆ 2.68 ಲಕ್ಷ ಸ್ಥಳೀಯರಿಗೆ ಜನರಿಗೆ ಉದ್ಯೋಗ ನೀಡಲಾಗಿದೆ ಎಂದು ಹೇಳಿದ್ದಾರೆ. ನಿಜವಾಗಲೂ ಅಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಾ ಎಂದು ಪ್ರಶ್ನಿಸಿದರು.

ಸಿ.ಟಿ.ರವಿ ಅವರಿಗೆ ಹೆಚ್.ಡಿ.ಕುಮಾರಸ್ವಾಮಿ ಕೇಳಿರುವ ಪ್ರಶ್ನೆಗಳಿಗೆ ಅವರು ಉತ್ತರಿಸಿಲ್ಲ. ಸಿ.ಟಿ.ರವಿ ಅವರ ಕ್ಷೇತ್ರದ ಶಿಕ್ಷಕರೊಬ್ಬರು ಕೆಆರ್‌ಎಸ್‌ಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ. ಶಿಕ್ಷಕರಿಗೂ ಸಿ.ಟಿ.ರವಿಗೂ ಏನು ಸಂಬಂಧ ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸುವಲ್ಲಿ ನಿಮ್ಮ ಪಾತ್ರವೂ ಇದೆ ಎಂಬ ಆರೋಪವಿರುವುದು ನಿಜವೇ. ಸಿಎಂ ಕುರ್ಚಿಗೆ ಪ್ರಹ್ಲಾದ್ ಜೋಶಿ, ಬಿ.ಎಲ್.ಸಂತೋಷ್ ಟವಲ್ ಹಾಕಿದ್ದಾರೆಂಯೇ ಸ್ಪಷ್ಟಪಡಿಸುವಂತೆ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಈಶ್ವರ್ ಚಕ್ಕಡಿ, ಮಾಧ್ಯಮ ವಕ್ತಾರ ಕೆ.ಮಹೇಶ್ ಇದ್ದರು.

ಟೋಲ್‌ಗೆ ಆಕ್ರೋಶ

ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ತಿಂಗಳಾಂತ್ಯಕ್ಕೆ ಟೋಲ್ ಆರಂಭಿಸಲಾಗುತ್ತಿದೆ. ಎರಡು ಟೋಲ್‌ಗಳಿಂದ 400 ರೂ. ಕೊಡಬೇಕು. ಬೆಂಗಳೂರಿಗೆ ಹೋಗಿ ಬಂದರೆ 800 ರೂ. ಕಟ್ಟಬೇಕು. ಇಷ್ಟು ಹಣ ಸಂಗ್ರಹಿಸುತ್ತಿರುವುದಾದರೂ ಏಕೆ? ಹೆದ್ದಾರಿ ನಿರ್ಮಾಣಕ್ಕೆ ರಾಜ್ಯ ಸರ್ಕಾರವೂ ಹಣ ನೀಡಿದೆ. ನೀವೇನು ಉಚಿತವಾಗಿ ನೀಡಿಲ್ಲ. ಜನರ ಹಿತಕಾಯಲು ಟೋಲ್ ಸಂಗ್ರಹಿಸಬಾರದು. ಉಚಿತವಾಗಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಶಿಕ್ಷಕ ಶಂಭು ಚೀಟಿ ಹಗರಣ ಸಿಐಡಿಗೆ ವರ್ಗಾವಣೆ

ಜನಸಂಪರ್ಕ ಸಭೆಯಲ್ಲಿ ಎಸ್ಪಿ ಸೀಮಾ ಲಾಟ್ಕರ್



ನಂಜನಗೂಡು, ಫೆ.10– ಶಿಕ್ಷಕ ಶಂಭು ಚೀಟಿ ಹಗರಣ ಬಹುಕೋಟಿ ಹಗರಣವಾಗಿರುವ ಕಾರಣ ಅದನ್ನು ಸಿಐಡಿಗೆ ವರ್ಗಾವಣೆ ಮಾಡುವಂತೆ ಶಿಫಾರಸ್ಸು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದರು.

ನಗರದ ಡಿವೈಎಸ್ಪಿ ಕಚೇರಿಯ ಪೊಲೀಸ್ ಭವನದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಮತ್ತು ಸಂತ್ರಸ್ತರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಚೀಟಿ ಹಗರಣದಲ್ಲಿ ಕಾನೂನು ಚೌಕಟ್ಟಿನೊಳಗೆ ನ್ಯಾಯಾಲಯದ ಅನುಮತಿ ಪಡೆದು ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಎಂದರು.

ಗಾಂಜಾ, ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ: ಎಲ್ಲೆಡೆ ಅಕ್ರಮ ಮದ್ಯ ಮಾರಾಟ, ಜೂಜು ಪ್ರಕರಣಗಳು ಹೆಚ್ಚಾಗಿರುವ ಬಗ್ಗೆ ಮತ್ತು ಶಾಲಾ ವಿದ್ಯಾರ್ಥಿಗಳ ಕೈಗೆ ಗಾಂಜಾ ಸಿಗುತ್ತಿರುವ ಬಗ್ಗೆ ದೂರು ಕೇಳಿ ಬಂದಿವೆ. ಶೀಘ್ರ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲಾಗುವುದು ಮತ್ತು ಸಿವಿಲ್ ಸಮಸ್ಯೆಗಳ ಬಗ್ಗೆ ಮುಂದಿನ ದಿನಗಳಲ್ಲಿ ತಹಸೀಲ್ದಾರ್ ನೇತೃತ್ವದಲ್ಲಿ ಅಕ್ರಮ ಬಾರ್ ತೆರವುಗೊಳಿಸುವ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸಲಾಗುವುದು. ಜೊತೆಗೆ ಶಾಲಾ ಮಕ್ಕಳಿಗೆ ಬಸ್ ತೊಂದರೆಯಾಗುತ್ತಿರುವ ಬಗ್ಗೆ, ಹೆಣ್ಣು ಮಕ್ಕಳ ರಕ್ಷಣೆಗೆ ಪೊಲೀಸ್ ಗಸ್ತು ಹೆಚ್ಚಿಸುವುದಾಗಿ ಭರವಸೆ ನೀಡಿದರು.

ದಸಂಸ ಮುಖಂಡ ಸುರೇಶ್ ಮಾತನಾಡಿ, ಶಾಲಾ ವಿದ್ಯಾರ್ಥಿಗಳ ಕೈಗೆ ಗಾಂಜಾ ಯಥೇಚ್ಛವಾಗಿ ಸಿಗುವಂತಾಗಿದೆ. ನಗರದಲ್ಲಿ ಬೆಳಗ್ಗೆ 6 ಗಂಟೆಗೆ ಬಾರ್ ತೆರೆಯಲಾಗುತ್ತಿದೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮವಹಿಸಿಲ್ಲ ಎಂದು ದೂರಿದರು.

ಶಿವಕುಮಾರ್ ಮಾತನಾಡಿ, ಹೊಸ ಬಸ್ ನಿಲ್ದಾಣದಲ್ಲಿ ಕೆಲವು ಪುಂಡರು ಹೆಣ್ಣು ಮಕ್ಕಳನ್ನು ಚುಡಾಯಿಸುವ ಮತ್ತು ಚಾಕು ತೋರಿಸಿ ಹಣ ಕಿತ್ತುಕೊಳ್ಳುವ ಪ್ರಕರಣ ಘಟಿಸಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ಕಿರಂಗಸೂರು ಶಂಕರ್ ಮಾತನಾಡಿ, ಕಬ್ಬು ಬೆಳೆದ ರೈತರಿಗೆ ಸಕಾಲದಲ್ಲಿ ಕಾರ್ಖಾನೆಗಳು ಕಬ್ಬು ಕಟಾವು ಮಾಡುತ್ತಿಲ್ಲ ಇದರಿಂದ ಚಿರತೆ, ಹಂದಿ, ನವಿಲುಗಳಂತಹ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಜೊತೆಗೆ ರೈತರಿಗೂ ಸಂಕಷ್ಟ ಎದುರಾಗಿದೆ ಎಂದು ಅಳಲು ತೋಡಿಕೊಂಡರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ತಾಲೂಕಿನ ತಾಂಡ್ಯ, ಅಡಕನಹಳ್ಳಿ, ನಂಜನಗೂಡು ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಅನೈತಿಕ ಚಟುವಟಿಕೆ ಹೆಚ್ಚಾಗಿ ಮಹಿಳಾ ಕಾರ್ಮಿಕರಿಗೆ ರಕ್ಷಣೆ ಇಲ್ಲದಂತಾಗಿದೆ ಕೈಗಾರಿಕಾ ಪ್ರದೇಶದಲ್ಲಿಯೇ 2 ಬಾರ್‌ಗಳು ಕಾರ್ಯ ನಿರ್ವಹಿಸುತ್ತಿವೆ ಈ ಬಗ್ಗೆ ಪ್ರತಿಭಟನೆ ನಡೆಸಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಬಾಲರಾಜು ಮಾತನಾಡಿ, ಪೊಲೀಸರು ಅಕ್ರಮ ಮದ್ಯ ಮಾರಾಟಗಾರರನ್ನು ಬಂಧಿಸುವ ಬದಲಾಗಿ ಮದ್ಯ ಸೇವಿಸುವವರ ಮೇಲೆ ದೂರು ದಾಖಲು ಮಾಡಿ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದಾರೆಂದು ಆಪಾದಿಸಿದರು.

ಕಾರ್ಮಿಕ ಮುಖಂಡ ಗೋವಿಂದರಾಜು ಮಾತನಾಡಿ, ವಿದ್ಯಾನಗರ, ದೇವಿ ನಗರ ಸೇರಿದಂತೆ ಟೌನ್‌ಗೆ ಹೊಸದಾಗಿ ಸೇರ್ಪಡೆಗೊಂಡ ಬಡಾವಣೆಗಳಿಗೆ ಪೊಲೀಸ್ ಗಸ್ತು ಬರುತ್ತಿಲ್ಲ. ಇದರಿಂದ ಅಪರಾಧ ಪ್ರಕರಣ ಹೆಚ್ಚಾಗುತ್ತಿದೆ ಎಂದರು.

> **6** ಸಾರ್ವಜನಿಕರು ಪೊಲೀಸ್ ಠಾಣೆಗೆ ಸಮಸ್ಯೆ ಹೇಳಿಕೊಳ್ಳಲು ಬಂದಾಗ ಅವರ ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಿದರೆ ಹೆಚ್ಚಿನ ಸಮಸ್ಯೆ ಅಲ್ಲೇ ಬಗೆಹರಿಯುತ್ತದೆ. ಅಲ್ಲದೆ ಸಿಬ್ಬಂದಿಗಳು ಸಾರ್ವಜನಿಕರೊಡನೆ ಸೌಮ್ಯವಾಗಿ ವರ್ತಿಸಿ. ಸಾರ್ವಜನಿಕರೂ ಕೂಡ ಅಪರಾಧ ಪ್ರಕರಣ ನಡೆಯದಂತೆ ಎಚ್ಚರಿಕೆ ವಹಿಸಲು ಪೊಲೀಸ ರೊಡನೆ ಸಹಕರಿಸಬೇಕು. ನಿಮ್ಮ ಗ್ರಾಮಗಳಲ್ಲಿನ ಸಾರ್ವಜನಿಕ ಸಮಸ್ಯೆಗಳನ್ನು ಭಯವಿಲ್ಲದೆ ಮುಕ್ತವಾಗಿ ತಿಳಿಸಬೇಕು.
> **–ಸೀಮಾ ಲಾಟ್ಕರ್, ಜಿಲ್ಲಾ ಎಸ್ಪಿ.**

ಮಹಿಳಾ ಸಂಘಟನೆಯ ಪ್ರಮಿಳಾ ಮಾತನಾಡಿ, ಬಿಳಿಗೆರೆ ಠಾಣೆ ವ್ಯಾಪ್ತಿಯಲ್ಲಿ ಆಡು ಭತ್ತ ತಿಂದ ಕ್ಷುಲ್ಲಕ ಕಾರಣಕ್ಕಾಗಿ ಐವರು ಸೇರಿ ಬಡವ ವ್ಯಕ್ತಿಯೊಬ್ಬನನ್ನು ಹತ್ಯೆ ಮಾಡಿದ್ದರು. ಆದರೆ ಪೊಲೀಸರು ಲಂಚ ಪಡೆದು ಆರೋಪಿ ಪರ ಕೆಲಸ ಮಾಡಿದ್ದರಿಂದಾಗಿ ಆರೋಪಿಗೆ ಶಿಕ್ಷೆಯಾಗದೆ ರಾಜಾರೋಷವಾಗಿ ಓಡಾಡುವಂತಾಗಿದೆ ಎಂದು ಆರೋಪಿಸಿದರು.

ಸಭೆಯಲ್ಲಿ ಡಿವೈಎಸ್ಪಿ ಗೋವಿಂದರಾಜು, ಸಿಪಿಐ ಚಂದ್ರಶೇಖರ್, ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಡಿ.ಬಸವರಾಜು, ಎಸ್‌ಐಗಳಾದ ಕೃಷ್ಣಕಾಂತ ಕೋಳಿ, ಯಾಸ್ಮೀನ್ ತಾಜ್ ಸೇರಿದಂತೆ ಸಾರ್ವಜನಿಕರು ಇದ್ದರು.

ದೇಶ, ಸಂವಿಧಾನ ರಕ್ಷಣೆಗಾಗಿ ಕಾಂಗ್ರೆಸ್ ಬೆಂಬಲಿಸಿ



ಮಲ್ಲುಂಡಿ, ಫೆ.10– ದೇಶ, ಸಂವಿಧಾನ ರಕ್ಷಣೆಗಾಗಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸುವಂತೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಹೆಡಿಯಾಲ ಗ್ರಾಪಂ ವ್ಯಾಪ್ತಿಯ ಬಳ್ಳೂರು ಹುಂಡಿ, ಈರೇಗೌಡನಹುಂಡಿ, ಬಂಕಹಳ್ಳಿ ಗ್ರಾಮಗಳಲ್ಲಿ ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ಅವರು, ಕೇಂದ್ರದ ಬಿಜೆಪಿ ಸರ್ಕಾರ ಹೊರ ದೇಶದಿಂದ ಕಪ್ಪು ಹಣ ತಂದು ಪ್ರತಿಯೊಬ್ಬರ ಖಾತೆಗೂ ಹಾಕುತ್ತೇವೆ. ಯುವಕರಿಗೆ ಉದ್ಯೋಗ ನೀಡುತ್ತೇವೆ ಎಂದು ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಯಾವ ಉದ್ಯೋಗವನ್ನೂ ನೀಡದೇ, ಹಣವನ್ನೂ ಹಾಕದೇ ಮೋಸ ಮಾಡಿದೆ. ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ನಿರತವಾಗಿದೆ. ದೇಶದಲ್ಲಿ ಜೀತ ಪದ್ಧತಿ ನಿರ್ಮೂಲನೆ ಸೇರಿದಂತೆ ದಲಿತರಿಗೆ ಹಾಗೂ ಎಲ್ಲಾ ವರ್ಗದ ಜನರಿಗೂ ಅನುಕೂಲವಾಗುವ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದೆ. ಮುಂದಿನ ದಿನಗಳಲ್ಲಿ ದೇಶ ಹಾಗೂ ಸಂವಿಧಾನ ಉಳಿಯಬೇಕಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ಹೀಗಾಗಿ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಯೋಜನೆಗಳ ಬಗ್ಗೆ ತಿಳಿಸಬೇಕು ಎಂದರು.

ಈ ವೇಳೆ ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಸಿದ್ದರಾಜು, ಸುರೇಶ್, ಗೋವಿಂದರಾಜು, ಸುಬ್ರಹ್ಮಣ್ಯ, ವಿಠಲ, ಪಟೇಲ್, ನಾಗರಾಜೇಗೌಡ, ಮಹೇಶ್ ಇತರರಿದ್ದರು.



ಮೈಸೂರು ತಾಲೂಕಿನ ಹೂಟಗಳ್ಳಿ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ 'ಗುಡ್ ವಿಷ್' ಫೌಂಡೇಷನ್ ಸಹಯೋಗದಲ್ಲಿ ನಡೆಯುತ್ತಿರುವ ಅನಾಥ ಆಶ್ರಮಕ್ಕೆ ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ಭೇಟಿ ನೀಡಿ, ಅನಾಥ ಮಕ್ಕಳಿಗೆ ಹಣ್ಣು ಹಂಪಲು ನೀಡಿ, ಸಂಸ್ಥೆಗೆ 5 ಸಾವಿರ ರೂ. ದೇಣಿಗೆ ನೀಡಿದರು. ಈ ವೇಳೆ ಸಂಸ್ಥೆ ಉಸ್ತುವಾರಿ ಜಿ.ಎಸ್.ರೇಖಾ ಇದ್ದರು.

ಫೆ.15, ಅಂತರಸಂತೆಯಲ್ಲಿ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ
ಅಧ್ಯಕ್ಷರಾಗಿ ಅಂಕಣಕಾರ ಡಾ.ಅಮ್ಮಸಂದ್ರ ಸುರೇಶ್ ಆಯ್ಕೆ



ಹೆಚ್.ಡಿ.ಕೋಟೆ, ಫೆ.10– ತಾಲೂಕಿನ ಅಂತರಸಂತೆಯಲ್ಲಿ ಫೆ.15ರಂದು ನಡೆಯುವ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಲೇಖಕ ಮತ್ತು ಅಂಕಣಕಾರ ಡಾ.ಅಮ್ಮಸಂದ್ರ ಸುರೇಶ್ ಆಯ್ಕೆಯಾಗಿದ್ದಾರೆ.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಸಮ್ಮೇಳನದ ಅಧ್ಯಕ್ಷರನ್ನಾಗಿ ಸುರೇಶ್ ಅವರನ್ನು ಆಯ್ಕೆ ಮಾಡಲಾಯಿತು ಎಂದು ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ ತಿಳಿಸಿದರು.

ಡಾ.ಅಮ್ಮಸಂದ್ರ ಸುರೇಶ್, ರಾಜ್ಯದ ಪ್ರಮುಖ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಲೇಖನ ಮತ್ತು ಅಂಕಣ ಬರೆಯುತ್ತಿದ್ದಾರೆ. ಮಹಾನಾಯಕನ ಮಹಾ ಕೊಡುಗೆಗಳು, ಡಾ.ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ, ಅಭಿವೃದ್ಧಿ ಸಂವಹನ ಸೇರಿದಂತೆ 13 ಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಕೊಡ ಮಾಡುವ 2022ರ "ವಿಶ್ವಮಾನವ" ಪ್ರಶಸ್ತಿ, ಕರ್ನಾಟಕ ಹೊಯ್ಸಳ ಸಂಘ ಮತ್ತು ಸವಿಗನ್ನಡ ಪತ್ರಿಕೆಗಳು ಕೊಡಮಾಡುವ "ಹೊಯ್ಸಳ ಪ್ರಶಸ್ತಿ" ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಕೊಡ ಮಾಡುವ "ಸೇವಾ ಭೂಷಣ" ಮತ್ತು "ಕರುನಾಡ ರತ್ನ" ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ತಿ.ನರಸೀಪುರ, ಫೆ.10– ರಸ್ತೆ, ಚರಂಡಿ, ಗ್ರಾಪಂ ಮತ್ತು ಐಸೋಲೇಷನ್ ಕಟ್ಟಡ ಸೇರಿದಂತೆ 1.28 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಗುದ್ದಲಿ ಪೂಜೆ ನೆರವೇರಿಸಿದರು.

ಕೆಬಿಆರ್‌ಡಿಎಲ್ ವತಿಯಿಂದ ಮೇದಿನಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಮದಕರಿ ನಾಯಕ ಸಮುದಾಯ ಭವನದ ನೆಲಹಾಸು ನಿರ್ಮಾಣ, ಬಣವೆ, ಹೆಮ್ಮಿಗೆ ಮಾವಿನಹಳ್ಳಿ ಗ್ರಾಮಗಳಲ್ಲಿ ಕ್ರಮವಾಗಿ 20, 20 ಮತ್ತು 15 ಲಕ್ಷ ರೂ. ವೆಚ್ಚದಲ್ಲಿ ರಸ್ತೆ, 35 ಲಕ್ಷ ರೂ. ವೆಚ್ಚದಲ್ಲಿ ಹೊಳೆಸಾಲು ಗ್ರಾಪಂ ಕಟ್ಟಡ ನಿರ್ಮಾಣ ಮತ್ತು ತಲಕಾಡು ಸಮುದಾಯ ಅರೋಗ್ಯ ಕೇಂದ್ರದಲ್ಲಿ 15 ಲಕ್ಷ ರೂ. ಐಸೋಲೇಷನ್ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಶಾಸಕರು ಗುದ್ದಲಿ ಪೂಜೆ ನಡೆಸಿದರು.

ನಂತರ ಮಾತನಾಡಿದ ಅವರು, ಎಸ್‌ಸಿಪಿ, ಟಿಎಸ್‌ಪಿ ಮತ್ತು ಮಳೆಹಾನಿ ಒಟ್ಟು 5 ಕೋಟಿ ಅನುದಾನದಲ್ಲಿ ಸದ್ಯ 1.28 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ. ಶೀಘ್ರ ಉಳಿದ ಅನುದಾನದಲ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಹೊಳೆಸಾಲು ಗ್ರಾಪಂ ಅಧ್ಯಕ್ಷ ಪರಮೇಶ್, ಹೆಮ್ಮಿಗೆ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಸದಸ್ಯರಾದ ಸಿದ್ದನಾಯಕ, ದೇವಿ ಮಾದನಾಯಕ, ಸಿದ್ದಮ್ಮ ಜಯಮ್ಮ ರಾಜೇಶ್, ರಾಚಯ್ಯ, ಎಂ.ಎನ್.ಕುಮಾರ್, ಮರಿಸ್ವಾಮಿ, ಮಾಜಿ ಜಿಪಂ ಸದಸ್ಯ ಜಯಪಾಲ್ ಭರಣಿ, ದೊಡ್ಡಮಾದನಾಯಕ, ಉಮಾಪತಿ, ಹೊನ್ನನಾಯಕ, ಸೋಸಲೆ ರಾಜಣ್ಣ, ಪಿಡಿಓಗಳಾದ ಶ್ರೀನಿವಾಸ್, ಶ್ರೀನಿವಾಸಮೂರ್ತಿ, ಕಂದಾಯ ನಿರೀಕ್ಷಕ ಸಿದ್ದರಾಜು ಇತರರಿದ್ದರು.

ಬೈಲಕುಪ್ಪೆ ಟಿಬೆಟಿಯನ್ ಕ್ಯಾಂಪ್‌ನಲ್ಲಿ ಟಿಬೆಟ್ ಉತ್ಸವ



ಬೈಲಕುಪ್ಪೆ, ಫೆ.10– ಬೈಲಕುಪ್ಪೆಯ ಗೋಲ್ಡನ್ ಟೆಂಪಲ್ ಬಳಿ ಫೆ.23ರಿಂದ ಮಾ.1ರವರೆಗೆ ಟಿಬೆಟಿಯನ್ ಚೇಂಬರ್ ಆಫ್ ಕಾಮರ್ಸ್ ಆಶ್ರಯದಲ್ಲಿ ಟಿಬೆಟಿಯನ್ ಉತ್ಸವ ನಡೆಯಲಿದ್ದು, ಟಿಬೆಟಿಯನ್ ಸಂಸ್ಕೃತಿ ಮತ್ತು ಪರಂಪರೆ ಆಚರಣೆಯು ವರ್ಣರಂಜಿತವಾಗಿರಲಿದೆ ಎಂದು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ತಶಿ ವುಂಗ್ದು ತಿಳಿಸಿದ್ದಾರೆ.

ಉತ್ಸವದಲ್ಲಿ ಸಾಂಪ್ರದಾಯಿಕ ಸಂಗೀತ ಮತ್ತು ನೃತ್ಯ, ಮರಳು ಮಂಡಲದ ಲೈವ್ ರಚನೆ, ಕಾರ್ಪೆಟ್ ನೇಯ್ಗೆ ಮತ್ತು ತಂಗ್ಕಾ ಚಿತ್ರಕಲೆ, ಟಿಬೆಟಿಯನ್ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ರುಚಿಕರವಾದ ಟಿಬೆಟಿಯನ್ ಪಾಕಪದ್ಧತಿ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಟಿಬೆಟ್ ವೈದ್ಯಕೀಯ ಶಿಬಿರ ಮತ್ತು ಸಾಂಪ್ರದಾಯಿಕ ಟಿಬೆಟಿಯನ್ ಕ್ರೀಡೆಗಳನ್ನು ವೀಕ್ಷಿಸಲು ಪ್ರವಾಸಿಗರಿಗೆ ಅವಕಾಶ ಕಲ್ಪಿಸಲಾಗಿದೆ. ಉತ್ಸವವು ಮನರಂಜನೆ ಜೊತೆಗೆ, ಟಿಬೆಟಿಯನ್ ಬೌದ್ಧಧರ್ಮ, ಟಿಬೆಟಿಯನ್ ಮೆಡಿಸಿನ್, ತಂಗಾ ಚಿತ್ರಕಲೆ ಮತ್ತು ಟಿಬೆಟ್ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಕುರಿತು ಮಾತುಕತೆ ಹೊಂದಿರುತ್ತದೆ. ಮ್ಯಾಜಿಕ್ ಶೋಗಳು, ಮಕ್ಕಳ ಮನರಂಜನೆಗಳು ಮತ್ತು ವಿವಿಧ ವಸ್ತುಗಳು ಮತ್ತು ಆಹಾರಗಳನ್ನು ಮಾರಾಟ ಮಾಡುವ ಸಾಕಷ್ಟು ಮಳಿಗೆಗಳು ಇರುತ್ತವೆ ಎಂದರು.

ಉತ್ಸವವು ಟಿಬೆಟಿಯನ್ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಉತ್ತೇಜಿಸುವ ಗುರಿ ಹೊಂದಿದೆ. ಟಿಬೆಟಿಯನ್ ಕಲಾವಿದರು, ಸಂಗೀತಗಾರರು ಮತ್ತು ಕುಶಲಕರ್ಮಿಗಳಿಗೆ ತಮ್ಮ ಕೆಲಸವನ್ನು ವ್ಯಾಪಕ ಪ್ರೇಕ್ಷಕರಿಗೆ ಪ್ರದರ್ಶಿಸಲು ವೇದಿಕೆ ಒದಗಿಸುತ್ತದೆ ಎಂದರು.

ಟಿಬೆಟ್ ಉತ್ಸವದಲ್ಲಿ ಭಾರತೀಯರ ಉತ್ಪನ್ನಗಳ ಪ್ರದರ್ಶನ ಕೂಡ ನಡೆಯಲಿದೆ ಎಂದು ಸಹ ಸಂಘಟಕರಾದ ಲಿಪಿಕಾ ದೇವಯ್ಯ ತಿಳಿಸಿದರು. ಈ ವೇಳೆ ಕಾಮರ್ಸ್ ಸದಸ್ಯ ಕುಶಾಂಗ್ ಇದ್ದರು.

ಹೈಕಮಾಂಡ್‌ನಿಂದ ತಿ.ನರಸೀಪುರ ಟಿಕೆಟ್ ನೀಡುವ ಭರವಸೆ
ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಯಶೋದ ವಿಶ್ವಾಸ



ತಿ.ನರಸೀಪುರ, ಫೆ.10– ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ನನಗೆ ಪಕ್ಷದ ಹೈಕಮಾಂಡ್ ಟಿಕೆಟ್ ನೀಡುವ ಭರವಸೆ ನೀಡಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಯಶೋದ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ವಿಜಯ ಸಂಕಲ್ಪ ಅಭಿಯಾನದಡಿ ಬೈಕ್‌ಗೆ ಪಕ್ಷದ ಸ್ಟಿಕ್ಕರ್ ಅಂಟಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪಕ್ಷದ ವರಿಷ್ಠರ ಸಂಪರ್ಕದಲ್ಲಿರುವ ನನಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಟಿಕೆಟ್ ನೀಡುವ ಭರವಸೆ ನೀಡಿದ್ದಾರೆ. ಅಲ್ಲದೇ ಮಹಿಳಾ ಮೀಸಲಾತಿಯಡಿ ಟಿಕೆಟ್ ನನಗೆ ದೊರೆಯಬಹುದೆಂಬ ಭರವಸೆ ಇದೆ ಎಂದರು.

ಸ್ಥಳೀಯ ನಾಯಕರಾದ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್ ಅವರನ್ನು ಭೇಟಿ ಮಾಡಿ ಬಯಕೆ ತಿಳಿಸಿದ್ದು, ಇಬ್ಬರಿಂದಲೂ ಸಕಾರಾತ್ಮಕ ಸ್ಪಂದನೆ ದೊರಕಿದೆ ಎಂದರು.

ಸಮಾಜಸೇವೆಗೆ ರಾಜಕೀಯ ಅಧಿಕಾರ ಅವಶ್ಯಕ. ಹೀಗಾಗಿ ಈಗಾಗಲೇ ಕ್ಷೇತ್ರದಲ್ಲಿ ಒಂದು ಸುತ್ತು ಪ್ರವಾಸ ಮಾಡಿರುವ ನನಗೆ ಉತ್ತಮ ಸ್ಪಂದನೆ ದೊರೆತಿದೆ. ಟಿಕೆಟ್ ಭರವಸೆ ಸಿಕ್ಕಿರುವುದರಿಂದ ಗೆಲ್ಲುವ ವಿಶ್ವಾಸವಿದೆ ಎಂದರು.

ಕ್ಷೇತ್ರದ 227 ಬೂತ್‌ಗಳಲ್ಲಿ ಕಾರ್ಯಕರ್ತರನ್ನು ಭೇಟಿಯಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳಲಿದ್ದೇನೆ. ಕಾರ್ಯಕರ್ತರು, ಮುಖಂಡರು, ಬೂತ್ ಅಧ್ಯಕ್ಷರು ನನಗೆ ಸಹಕಾರ ನೀಡುವ ಮೂಲಕ ಮಹಿಳಾ ಅಭ್ಯರ್ಥಿಯಾಗಿರುವ ನನ್ನನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು. ಒಮ್ಮೆ ಟಿಕೆಟ್ ಸಿಗದಿದ್ದರೂ, ಪಕ್ಷದ ಹೈಕಮಾಂಡ್ ಸೂಚಿಸುವ ಅಭ್ಯರ್ಥಿ ಪರ ಕೆಲಸ ಮಾಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಯುವ ಮೋರ್ಚಾ ಉಪಾಧ್ಯಕ್ಷ ರವೀಂದ್ರ ಬಾಬು, ಸೋಸಲೆ ಶಿವಕುಮಾರ್, ತಾಲೂಕು ಪ್ರಧಾನ ಕಾರ್ಯದರ್ಶಿ ಹರೀಶ್ ಗೌಡ, ಮುಖಂಡರಾದ ಬಸವರಾಜು, ಚೌಹಳ್ಳಿ ಸಿದ್ದರಾಜು, ಚಾಮನಾಯಕ, ನಂದನ್ ಕುಮಾರ್, ಸಿ.ಬಿ.ಹುಂಡಿ ಸಿದ್ದು, ಮಾದಾಪುರ ಗುರುಸ್ವಾಮಿ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟೈಟಾನಿಕ್ (3ಡಿ)(ಇಂ): ಬೆ.10ಕ್ಕೆ, ಸಂ.4.40ಕ್ಕೆ, ರಾ.8.30ಕ್ಕೆ, ಪಠಾಣ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 2	ಲಾಂಗ್ ಡ್ರೈವ್ (ಹಿಂ): ಬೆ.11ಕ್ಕೆ, ಹೊಂದಿಸಿ ಬರೆಯಿರಿ (ಕ): ಮ.1.25ಕ್ಕೆ, ವಸಂತ ಕೋಕಿಲ (ತ): ಸಂ.4.30ಕ್ಕೆ, ಕ್ರಾಂತಿ (ಕ): ರಾ.7ಕ್ಕೆ, ಪಾಪ್‌ಕಾರ್ನ್ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ರಂಗಿನ ರಾಟೆ (ಕ): ಬೆ.11ಕ್ಕೆ, ದಾದಾ ದಿ ಅಪ್ಪ (ತ): ಮ.1.20ಕ್ಕೆ, ಲೈಫು ಇಷ್ಟೇನೆ (ಕ): ಸಂ.4.15ಕ್ಕೆ, ಕ್ರಿಸ್ಟೋಫರ್ (ಮ): ರಾ.7ಕ್ಕೆ, ರೋಮಾಂಚಂ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.10ಕ್ಕೆ, ಮ.1.05ಕ್ಕೆ, ಪಠಾಣ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕ್ರಾಂತಿ (ಕ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಪಠಾಣ್ (ಹಿಂ): ಬೆ.9.50ಕ್ಕೆ, ಮ.12.40ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.10ಕ್ಕೆ, ಸಂ.4.15ಕ್ಕೆ, ಅಮಿಗೋಸ್ (ತೆ): ಮ.1.20ಕ್ಕೆ, ರಾ.7.35ಕ್ಕೆ, ಪಠಾಣ್ (ಹಿಂ): ರಾ.10.30ಕ್ಕೆ.
ಸ್ಕ್ರೀನ್ 4	ಅಮಿಗೋಸ್ (ತೆ): ಬೆ.10.05ಕ್ಕೆ, ಪಠಾಣ್ (ಹಿಂ): ಮ.1.10ಕ್ಕೆ, ದಾದಾ ದಿ ಅಪ್ಪ (ತ): ಸಂ.4.10ಕ್ಕೆ, ಕ್ರಾಂತಿ (ಕ): ರಾ.7ಕ್ಕೆ, ರೋಮಾಂಚಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಠಾಣ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕ್ರಾಂತಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ವಸಂತ ಕೋಕಿಲ (ತ)	4 ಪ್ರದರ್ಶನಗಳು
ಸಂಗಂ	
ಬೆಂಗಳೂರು 69 (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಠಾಣ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರೂಪಾಯಿ (ಕ)	4 ಪ್ರದರ್ಶನಗಳು



ಹುಣಸೂರಿನ ತಾಲೂಕು ಕಚೇರಿಯಲ್ಲಿ ನಡೆದ ಅಕ್ರಮ ಸಕ್ರಮ ಸಭೆಯಲ್ಲಿ ಸಮಿತಿ ಸದಸ್ಯ, ಮಾಜಿ ಜಿಪಂ ಸದಸ್ಯ ನಾಗರಾಜ್ ಮಲ್ಲಾಡಿ 78 ಸಾವಿರ ರೂ. ಮೌಲ್ಯದ ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್ ಅನ್ನು ಕೊಡುಗೆ ನೀಡಿದರು. ಈ ವೇಳೆ ಶಾಸಕ ಹೆಚ್.ಪಿ.ಮಂಜುನಾಥ್, ತಹಸೀಲ್ದಾರ್ ಡಾ.ಅಶೋಕ್, ಉಪತಹಸೀಲ್ದಾರ್ ಶಕೀಲಾ ಭಾನು ಸೇರಿದಂತೆ ಇನ್ನಿತರರಿದ್ದರು.

ಪ್ರದೀಪ್‌ಗೆ ಪಿಎಚ್.ಡಿ ಪದವಿ




ಮೈಸೂರು, ಫೆ.10– ಡಾ.ಜಸ್ಮ ಅವರ ಮಾರ್ಗದರ್ಶನದಲ್ಲಿ ಎಚ್.ಕೆ.ಪ್ರದೀಪ್ ಅವರು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ನಂಜನಗೂಡು ತಾಲೂಕಿನ ದೊಡ್ಡಕವಲಂದೆ ಠಾಣೆಯಲ್ಲಿ ಎಸ್‌ಐ ಆಗಿ ಕಾರ್ಯ ನಿರ್ವಹಿಸಿ ವರ್ಗಾವಣೆಗೊಂಡ ಬಿ.ಮಹೇಂದ್ರ ಹಾಗೂ ನೂತನ ಎಸ್‌ಐ ಕೃಷ್ಣಕಾಂತ ಕೋಳಿ ಅವರನ್ನು, ದೊಡ್ಡಕವಲಂದೆ ಗ್ರಾಪಂ ಸದಸ್ಯರು, ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿ ಸನ್ಮಾನಿಸಿದರು. ಈ ವೇಳೆ ಗ್ರಾಪಂ ಸದಸ್ಯ ನಸ್ರುಲ್ಲಾಖಾನ್, ಸಿದ್ದಲಿಂಗಪ್ಪ, ಪಟೇಲ್ ಗುರುಪಾದಪ್ಪ, ಜಿ.ಸುರೇಶ್, ಜಬಿಉಲ್ಲಾ, ಸ್ವಾಮಿ, ಪಿ.ಶಿವಕುಮಾರ್ ಹಾಜರಿದ್ದರು.

ಮಕ್ಕಳು ಸೋಲಾರ್ ಪರಿಕರಗಳನ್ನು ಸದ್ಬಳಕೆ ಮಾಡಿಕೊಳ್ಳಿ
ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಉದಯ್‌ಕುಮಾರ್



ಸರಗೂರು, ಫೆ.10– ಸರ್ಕಾರಿ ಶಾಲಾ ಮಕ್ಕಳು ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ನೀಡಲಾದ ಸೋಲಾರ್ ಪರಿಕರಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಬಿಇಓ ಎಂ.ಉದಯ್ ಕುಮಾರ್ ತಿಳಿಸಿದರು.

ತಾಲೂಕಿನ ಆಗತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಐಐಎಫ್‌ಎಲ್ ಸಮಸ್ತ ಫೈನಾನ್ಸ್ ಲಿಮಿಟೆಡ್ ತನ್ನ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿ ಅಡಿ ಬೆಂಗಳೂರಿನ ಸೆಲ್ಕೋ ಫೌಂಡೇಶನ್ ಜಂಟಿಯಾಗಿ ಆಯೋಜಿಸಿದ್ದ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ 5 ಗ್ರಾಮಗಳಲ್ಲಿ ಅನುಷ್ಠಾನಗೊಂಡ ಸೋಲಾರ್ ಬೀದಿದೀಪ, ಈ–ಶಾಲಾ, ಸ್ಮಾರ್ಟ್ ಅಂಗನವಾಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರ್ಕಾರದ ಅನುದಾನದ ಕೊರತೆಯಿಂದಾಗಿ ಸರ್ಕಾರಿ ಶಾಲಾ ಪರಿಸ್ಥಿತಿ ಹದಗೆಟ್ಟಿದೆ. ಕ್ಷೇತ್ರದಲ್ಲಿ ಶಾಲಾ ಶಿಕ್ಷಕರ ಕೊರತೆ ಇದೆ. ಹೀಗಾಗಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ಮಕ್ಕಳಿಗೆ ಪಾಠ ಮಾಡಲಾಗುತ್ತಿದೆ. ಇಂತಹ ವೇಳೆ ದಾನಿಗಳು ಶಾಲೆಗಳಿಗೆ ವಿದ್ಯುತ್ ಪರಿಕರಗಳನ್ನು ನೀಡಿರುವುದು ತುಂಬಾ ಖುಷಿ ತಂದಿದೆ. ಇದನ್ನು ಮಕ್ಕಳು, ಶಿಕ್ಷಕರು ಸದ್ಬಳಕೆ ಮಾಡಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಐಐಎಫ್‌ಎಲ್‌ನ ಪ್ರಾದೇಶಿಕ ವ್ಯವಸ್ಥಾಪಕ ಎನ್.ಸಿದ್ದರಾಜು ಮಾತನಾಡಿ, ಅಂಗನವಾಡಿ, ಶಾಲಾ ಮಕ್ಕಳಿಗೆ ಅನುಕೂಲವಾಗಲೆಂದು 60 ಲಕ್ಷ ರೂ. ವೆಚ್ಚದ ಸೋಲಾರ್ ಬೀದಿದೀಪ ಸೇರಿದಂತೆ ಇನ್ನಿತರ ಪರಿಕರಗಳನ್ನು ನೀಡಲಾಗಿದೆ. ಸರ್ಕಾರಿ ಶಾಲಾ ಮಕ್ಕಳು ತುಂಬಾ ಪ್ರತಿಭಾವಂತರಾಗಿದ್ದು, ಓದಿನಲ್ಲಿ ಮುಂದೆ ಬರಬೇಕು. ಲೋಕಜ್ಞಾನ ಹೆಚ್ಚಿಸಿಕೊಂಡು ಪೋಷಕರು, ಶಿಕ್ಷಕರಿಗೆ ಕೀರ್ತಿ ತರಬೇಕು ಎಂದರು.

ಬೆಂಗಳೂರಿನ ಸೆಲ್ಕೋ ಫೌಂಡೇಶನ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ಸುದೀಪ್ತ ಘೋಷ್ ಮಾತನಾಡಿ, ಮುಂದಿನ 30 ವರ್ಷದಲ್ಲಿ ಪೆಟ್ರೋಲ್, ಡಿಸೇಲ್‌ಗಳ ಪ್ರಮಾಣ ಕುಂಠಿತಗೊಂಡು ಎಲ್ಲರೂ ಸೋಲಾರ್ ಮೇಲೆ ಅವಲಂಬಿತರಾಗಲಿದ್ದಾರೆ. ಹೀಗಾಗಿ ಜನರು ಇಂದಿನಿಂದಲೇ ಸೌರಶಕ್ತಿಯ ಮಹತ್ವ ವನ್ನು ಅರಿತು ಬಳಕೆ ಮಾಡಿಕೊಳ್ಳಬೇಕು ಎಂದರು.

ಐಐಎಫ್‌ಎಲ್‌ನ ಸೀನಿಯರ್ ಮ್ಯಾನೇಜರ್ ಶಂಭೋಲಿಂಗ್ ಖೋತ್ ಮಾತನಾಡಿದರು. ಸಾಗರೆ ಗ್ರಾಪಂ ಪಿಡಿಓ ನಾಗರಾಜು, ಶಾಲಾ ಮುಖ್ಯಶಿಕ್ಷಕ ಸಿದ್ದರಾಜು, ಸಹ ಶಿಕ್ಷಕರಾದ ಬಂಗಾರಯ್ಯ, ಮಹದೇವಸ್ವಾಮಿ, ಜಯರಾಂ, ಗ್ರಾಮದ ಯಜಮಾನರಾದ ಅಂಕಪ್ಪ ನಾಯಕ, ಪಿಎಲ್‌ಡಿ ಬ್ಯಾಂಕ್ ಸದಸ್ಯ ನಾಗರಾಜು, ಯಜಮಾನ ಪುಟ್ಟನಾಯಕ, ಮಹದೇವನಾಯಕ, ಶಿವಣ್ಣ, ಸೆಲ್ಕೋ ಮುಖ್ಯ ವ್ಯವಸ್ಥಾಪಕ ಪಾರ್ಥಸಾರಥಿ, ಐಐಎಫ್‌ಎಲ್‌ನ ಡೆಪ್ಯೂಟಿ ಮ್ಯಾನೇಜರ್ ಅವಿನಾಶ್, ಅಶ್ವಿನ್, ರಕ್ಷಿತ್, ಮಂಜುನಾಥ್, ಸಿಬ್ಬಂದಿ ವರ್ಗ, ಆಗತ್ತೂರು, ಸಾಗರೆ, ಬೀಚನಹಳ್ಳಿ, ಕನಕನಹಳ್ಳಿ, ಕನಕನಹಳ್ಳಿ ತಿಟ್ಟು, ಕಳಸೂರು, ಚಟ್ಟಾರೆಹುಂಡಿ, ಎನ್.ಬೇಗೂರು, ಲಕ್ಷ್ಮೀಪುರ, ವಡ್ಡರಗುಡಿ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಚಂದ್ರಪ್ಪಶೆಟ್ಟಿ ನಿಧನ



ಕಳಲೆ, ಫೆ.10– ನಂಜನಗೂಡು ತಾಲೂಕಿನ ಕಳಲೆ ಗ್ರಾಮದ 24 ಮನೆ ತೆಲುಗುಶೆಟ್ಟರ ಜನಾಂಗದ ಹಿರಿಯ ಮುಖಂಡ ಚಂದ್ರಪ್ಪಶೆಟ್ಟಿ (80) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಕಳಲೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಎಸ್‌ಜೆಸಿಇ ರಸ್ತೆಯಲ್ಲಿ ಅಪಾಯಕಾರಿ ಮರದ ಆತಂಕ

ಕ್ರಮಕ್ಕೆ ಸಾರ್ವಜನಿಕರ ಆಗ್ರಹ



ಮೈಸೂರು, ಫೆ.10(ಎಸ್‌ಬಿಡಿ)- ಮೈಸೂರಿನ ಎಸ್‌ಜೆಸಿಇ ರಸ್ತೆಯಲ್ಲಿ ಮರವೊಂದು ಮುರಿದು ಬೀಳುವ ಸ್ಥಿತಿಯಲ್ಲಿದ್ದು, ಸಂಬಂಧಪಟ್ಟವರು ತುರ್ತು ಕ್ರಮ ಕೈಗೊಳ್ಳುವ ಮೂಲಕ ಅಪಾಯ ತಪ್ಪಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ರಸ್ತೆ ಬದಿಯಲ್ಲೇ ಇರುವ ಎತ್ತರವಾದ ಮರ ಬುಡದಿಂದಲೇ ಸೀಳು ಬಿಟ್ಟಿದೆ. ಬೇರುಗಳಿಂದಲೂ ಬೇರ್ಪಟ್ಟು ಸೀಳಿರುವುದರಿಂದ ಉಳಿದಾರ್ಧ ಕಾಂಡದ ಮೇಲೆ ಪೂರ್ಣ ಭಾರ ಬಿದ್ದಿದೆ. ಪರಿಣಾಮ ಮರ ಕಾಲೇಜು ಕಾಂಪೌಂಡ್ ಕಡೆಗೆ ಬಾಗಿರುವುದಲ್ಲದೆ ರೆಂಬೆ-ಕೊಂಬೆಗಳು ವಿದ್ಯುತ್ ಕೇಬಲ್ ಮೇಲೆ ಒರಗಿದ್ದು, ಅದೂ ಕೂಡ ಹಿಂದಕ್ಕೆ ಎಳೆದಂತಾಗಿದೆ. ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿರುವ ಈ ಮರ ಯಾವ ಕ್ಷಣದಲ್ಲಾದರೂ ನೆಲಕ್ಕುರುಳಬಹುದು. ಅದರೊಂದಿಗೆ ವಿದ್ಯುತ್ ಕೇಬಲ್ ತುಂಡಾಗಿ ಬೀಳಲೂಬಹುದು. ಹಾಗಾದರೆ ದೊಡ್ಡ ಅವಘಡವೇ ಸಂಭವಿಸುವ ಆತಂಕವಿದೆ.

ಹುಣಸೂರು ರಸ್ತೆ ಹಾಗೂ ಬೋಗಾದಿ ರಸ್ತೆ ಸಂಪರ್ಕಿಸುವ ಎಸ್‌ಜೆಸಿಇ ರಸ್ತೆಯಲ್ಲಿ ಸದಾ ವಾಹನ ಹಾಗೂ ಜನ ಸಂಚಾರ ಇರುತ್ತದೆ. ಮುಖ್ಯವಾಗಿ ಮಾನಸಗಂಗೋತ್ರಿ, ಜೆಸಿ ಕಾಲೇಜು, ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಪ್ರಾಯೋಗಿಕ ಶಾಲೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಟಿ.ಕೆ.ಬಡಾವಣೆ ತರಳಬಾಳು ವಿದ್ಯಾಸಂಸ್ಥೆ ಹೀಗೆ ಹಲವು ಶಾಲಾ-ಕಾಲೇಜು ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ಓಡಾಡುತ್ತಾರೆ. ಮಕ್ಕಳ ಜೊತೆ ಪೋಷಕರು, ಶಿಕ್ಷಕರು ಸೇರಿದಂತೆ ಇಲ್ಲಿ ಸಾರ್ವಜನಿಕರ ಸಂಚಾರ ಹೆಚ್ಚಾಗಿದೆ.

ವಿಜಯಶ್ರೀ ಪುರ ಇನ್ನಿತರ ಹತ್ತಿರದ ಬಡಾವಣೆಯಿಂದ ಮಕ್ಕಳು ನಡೆದೇ ಬರುತ್ತಾರೆ. ಅವರು ಅಪಾಯಕ್ಕೆ ಕಾದಿರುವ ಈ ಮರದ ಬಳಿಯೇ ಹಾದು ಬರಬೇಕು. ಕಾಂಪೌಂಡ್ ಕಡೆ ವಾಲಿರುವ ಮರದ ಕಾಂಡ ಫುಟ್‌ಪಾತ್‌ನಲ್ಲಿ ಹೋಗುವವರ ಕೈಗೆ ಎಟಕುವಂತಿದೆ. ಪುಟ್ಟ ಮಕ್ಕಳು ಸೀಳು ಬಿಟ್ಟಿರುವ ಮರದ ಕಾಂಡ ಅಥವಾ



ಕೊಂಬೆಯನ್ನಿಡಿದು ಆಟವಾಡುವ ಸಾಧ್ಯತೆಯೂ ಇದೆ. ಅರ್ಧ ಕಾಂಡವೂ ಭಾರದಿಂದ ಯಾವಾಗಲಾದರೂ ಮುರಿದು ಫುಟ್‌ಪಾತ್‌ನಲ್ಲಿ ಬೀಳಬಹುದು. ಆಗ ಬುಡದಿಂದ ಸೀಳಿ ಮೇಲೆದ್ದಿರುವ ಭಾಗ ಕ್ಷಣಾರ್ಧದಲ್ಲಿ ಹಿಮ್ಮುಖವಾಗಿ ರಸ್ತೆಗೆ ಬಡಿಯಬಹುದು. ವಾಹನ ಸವಾರರಿಗೆ, ಪಾದಚಾರಿಗಳ ಜೀವ ಹಾನಿಯಾಗಬಹುದು. ವಿದ್ಯುತ್ ಕೇಬಲ್ ಕೂಡ ತುಂಡರಿಸಿ ನೆಲಕ್ಕೆ ಬಿದ್ದರೆ ಮತ್ತೊಂದು ಅವಘಡವೂ ಸಂಭವಿಸಬಹುದು.

ಯಾವುದಾದರೂ ಮಳಿಗೆಗೆ ಮರೆಯಾಗುವ ಮರವನ್ನು ಕಡಿದುರುಳಿಸಲು ಸುಲಭವಾಗಿ ಅನುಮತಿ ದೊರಕುತ್ತದೆ. ಕೆಲವೊಮ್ಮೆ ಅನುಮತಿ ರಹಿತವಾಗಿ ನಡೆಸುವುದಕ್ಕೂ ಅರಣ್ಯ ಇಲಾಖೆ ಅಧಿಕಾರಿಗಳು ಅನುವು ಮಾಡಿಕೊಡುತ್ತಾರೆ. ಆದರೆ ಸಾರ್ವಜನಿಕ ಸ್ಥಳದಲ್ಲಿರುವ ಅಪಾಯಕಾರಿ ಮರ ಕಡಿಯಲು ಶೀಘ್ರ ಅನುಮತಿ ಸಿಗುವುದಿಲ್ಲ. ಈ ಆರೋಪವನ್ನು ಸುಳ್ಳಾಗಿಸುವ ನಿಟ್ಟಿನಲ್ಲಿ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕು. ವಿದ್ಯುತ್ ಕೇಬಲ್‌ಗೆ ಹಾನಿಯಾಗಿದ್ದರೂ ಈವರೆಗೆ ಕಣ್ಮುಚ್ಚಿ ಕುಳಿತಿರುವ ಸೆಸ್ಕ್ ಸಿಬ್ಬಂದಿಗಳೂ ಇದರತ್ತ ಗಮನಹರಿಸಬೇಕು. ಆಕಸ್ಮಿಕ ಅವಘಡ ಸಂಭವಿಸುದು ಬೇರೆ ಸಂಗತಿ. ಆದರೆ ಗೊತ್ತಿದ್ದೂ ನಿರ್ಲಕ್ಷ್ಯ ವಹಿಸಿ ಅಪಾಯ ತಂದುಕೊಳ್ಳುವುದು ಸರಿಯಲ್ಲ. ಕೂಡಲೇ ಅಪಾಯಕಾರಿ ಮರವನ್ನು ತೆರವುಗೊಳಿಸಬೇಕು ಎಂದು ಈ ಮಾರ್ಗದಲ್ಲಿ ಓಡಾಡುವ ಶಾಲಾ ಮಕ್ಕಳ ಪೋಷಕರು ಮನವಿ ಮಾಡಿದ್ದಾರೆ.

ಇಸ್ರೊದಿಂದ 'SSLV-D2' ಯಶಸ್ವಿ ಉಡಾವಣೆ: ಮೂರು ಉಪಗ್ರಹಗಳು ಕಕ್ಷೆಗೆ ಸೇರ್ಪಡೆ

ಚೆನ್ನೈ, ಫೆ.10- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಶುಕ್ರವಾರ ಸಣ್ಣ ಉಪಗ್ರಹ ಉಡಾವಣಾ ವಾಹಕ- SSLV-D2ಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿ, ಮೂರು ಉಪಗ್ರಹಗಳನ್ನು ನಿಖರ ಕಕ್ಷೆಗೆ ಸೇರಿಸಿದೆ.

ಇದರೊಂದಿಗೆ, ಇಸ್ರೋ ಈಗ ಬೇಡಿಕೆಯ ಮೇಲೆ ಉಪಗ್ರಹಗಳನ್ನು ಉಡಾವಣೆ ಮಾಡಲು ಸಮರ್ಥವಾಗಿದೆ. ರಾಕೆಟ್ ಅನ್ನು ಜೋಡಿಸಿ, ಪರೀಕ್ಷಿಸಿ ಒಂದು ವಾರದ ಅವಧಿಯಲ್ಲಿ ಉಡಾವಣೆ ಮಾಡಬಹುದಾದಷ್ಟು ಸಮರ್ಥವಾಗಿದೆ. SSLVಯನ್ನು ಸಣ್ಣ, ಸೂಕ್ಷ್ಮ ಅಥವಾ ನ್ಯಾನೊಸಾಟಲೈಟ್‌ಗಳ (10ರಿಂದ 500 ಕೆಜಿ ದ್ರವ್ಯರಾಶಿ) ಕಡಿಮೆ ಭೂಮಿಯ



ಕಕ್ಷೆಗಳಿಗೆ ಉಡಾವಣೆ ಮಾಡಲು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ.

ಇಂದು ಈ ಬಗ್ಗೆ ಹೇಳಿಕೆ ನೀಡಿರುವ ಇಸ್ರೊ ಇದು ಬಾಹ್ಯಾಕಾಶಕ್ಕೆ ಕಡಿಮೆ ವೆಚ್ಚದಲ್ಲಿ ಸೇವೆಗಳನ್ನು ಪೂರೈಸುತ್ತದೆ, ಕಡಿಮೆ ತಿರುಗುವ ಸಮಯ ಮತ್ತು ಕನಿಷ್ಠ ಉಡಾವಣಾ ಮೂಲಸೌಕರ್ಯ ಸಾಕಾಗುತ್ತದೆ. 3 ಪ್ರೊಪಲ್ಷನ್ ಹಂತಗಳು ಮತ್ತು ವೇಗದ ಟರ್ಮಿನಲ್ ಮಾಡ್ಯೂಲ್ ನೊಂದಿಗೆ ವಿನ್ಯಾಸಗೊಳಿಸಲಾಗಿದೆ ಇದು 34 ಮೀಟರ್ ಎತ್ತರ, 2 ಮೀ ಸುತ್ತಳತೆ ಮತ್ತು 120 ಟನ್ ಮೇಲಕ್ಕೇರುವ ಸಾಮರ್ಥ್ಯವನ್ನು ಹೊಂದಿದೆ.

ಇಂದಿನ ಉಡಾವಣಾ ಕಾರ್ಯಾಚರಣೆಯು ಶ್ರೀಹರಿಕೋಟಾದ ಮೊದಲ ಉಡಾವಣಾ ಪ್ಯಾಡ್‌ನಿಂದ ಬೆಳಿಗ್ಗೆ 9.18 ಕ್ಕೆ ಪರಿಪೂರ್ಣವಾಗಿ ಮೇಲಕ್ಕೆ ಹಾರಿದ ನಂತರ ಕೇವಲ 900 ಸೆಕೆಂಡುಗಳಲ್ಲಿ (15 ನಿಮಿಷಗಳು) ಪೂರ್ಣಗೊಂಡಿತು.

ಪ್ರಾಥಮಿಕ ಉಪಗ್ರಹ ಭೂ ವೀಕ್ಷಣಾ ಉಪಗ್ರಹ (EOS-07), 156.3 ಕೆಜಿ ತೂಕದ ISRO ಅಭಿವೃದ್ಧಿಪಡಿಸಿದೆ; ಯುಎಸ್ ಮೂಲದ ಸ್ಟಾರ್ಟ್ ಅಪ್ ಸಂಸ್ಥೆ ಅಂಟಾರಿಸ್‌ಗೆ ಸೇರಿದ 10.2 ಕೆಜಿ ತೂಕದ ಜಾನಸ್-1 ಉಪಗ್ರಹ ಮತ್ತು ಚೆನ್ನೈ ಸ್ಟಾರ್ಟ್ ಅಪ್ ಸ್ಪೇಸ್ ಕಿಡ್ಜ್ ಇಂಡಿಯಾದ 8.7 ಕೆಜಿ ಉಪಗ್ರಹ ಆಜಾಡಿಸ್ಯಾಟ್-2 ಅನ್ನು 450 ಕಿಮೀ ವೃತ್ತಾಕಾರದ ಕಕ್ಷೆಗೆ ಸೇರಿಸಲಾಯಿತು.

ಟರ್ಕಿ-ಸಿರಿಯಾದಲ್ಲಿ ಭೀಕರ ಭೂಕಂಪ

ಮೃತಪಟ್ಟವರ ಸಂಖ್ಯೆ 21 ಸಾವಿರಕ್ಕೆ ಏರಿಕೆ





ಕಹ್ರಾಮನ್ಮರಸ್, ಫೆ.10- ಟರ್ಕಿ ಮತ್ತು ಸಿರಿಯಾದಲ್ಲಿ ಸಂಭವಿಸಿದ ಭೂಕಂಪದಲ್ಲಿ ಬದುಕುಳಿದವರನ್ನು ಹುಡುಕಲು ರಕ್ಷಣಾ ಕಾರ್ಯಕರ್ತರು ಅಂತಿಮ ಹಂತದ ಕಾರ್ಯಾಚರಣೆ ನಡೆಸುತ್ತಿದ್ದಾರೆ, ಅವಶೇಷಗಳಡಿ ಸಿಲುಕಿರುವ ಅನೇಕರ ಗುರುತು ಕೂಡ ಸಿಗದಂತಹ ಪರಿಸ್ಥಿತಿ ಉಂಟಾಗಿದೆ. ಟರ್ಕಿಯ ಅಧ್ಯಕ್ಷರು ಇದನ್ನು 'ಶತಮಾನದ ದುರಂತ' ಎಂದು ಕರೆದಿದ್ದು ಎರಡೂ ದೇಶಗಳಲ್ಲಿ ಸಂಭವಿಸಿದ ಭೂಕಂಪದಲ್ಲಿ ಇದುವರೆಗೆ ಮೃತಪಟ್ಟವರ ಸಂಖ್ಯೆ 21 ಸಾವಿರಕ್ಕೆ ಏರಿಕೆಯಾಗಿದೆ.


ಭೂಕಂಪದಿಂದ ಟರ್ಕಿಯಲ್ಲಿ ಸುಮಾರು 13.5 ಮಿಲಿಯನ್ ಜನರು ಬದುಕಿಗೆ ತೊಂದರೆಯಾಗಿದೆ ಸಿರಿಯಾದಲ್ಲಿ ಎಷ್ಟು ಮಂದಿ ಸಾವಿಗೀಡಾಗಿದ್ದಾರೆ ಎಂದು ನಿಖರವಾಗಿ ತಿಳಿದುಬಂದಿಲ್ಲ. ಲಂಡನ್‌ನಿಂದ ಪ್ಯಾರಿಸ್ ಅಥವಾ ಬೋಸ್ಟನ್‌ನಿಂದ ಫಿಲಡೆಲ್ಫಿಯಾವರೆಗಿನ ಭೂಕಂಪನದ ತೀವ್ರತೆ, ಪರಿಣಾಮ ಬೀರಿದೆ. ರಕ್ಷಣಾ ಪ್ರಯತ್ನದಲ್ಲಿ ಸೈನಿಕರು ಭಾಗಿಯಾಗಿದ್ದರೂ ಕೂಡ ಸಾಕಾಗುತ್ತಿಲ್ಲ.

ಎಲ್ಲೆಡೆ ಅವಶೇಷಗಳು, ಕಟ್ಟಡಗಳ ಅವಶೇಷಗಳು, ಲೋಹ, ಪುಡಿಮಾಡಿದ ಕಾಂಕ್ರೀಟ್ ಮತ್ತು ತಂತಿಗಳು ಕಂಡುಬರುತ್ತಿವೆ. ಅಡಿಯಾಮಾನ್‌ನಲ್ಲಿ, ಟ್ಟಡದ ಅವಶೇಷಗಳಡಿಯಲ್ಲಿ ಸಿಲುಕಿದವರು ತಮ್ಮನ್ನು ಕಾಪಾಡುವಂತೆ ಬೇಡಿಕೊಳ್ಳುತ್ತಿರುವುದು ಮನಕಲಕುವಂತೆ ಮಾಡಿದೆ.

ಬದುಕುಳಿದವರಲ್ಲಿ ಒಬ್ಬಾತ, ನಾನು ಮನೆಗೆ ಹೋಗಿ ಮಲಗುವುದು ಹೇಗೆ, ನನ್ನ ಸಹೋದರ ಇದ್ದಾನೆ, ಅವನು ಇನ್ನೂ ಜೀವಂತವಾಗಿರಬಹುದು ಎಂದು ನಂಬಿದ್ದೇನೆ ಆತ ಅವಶೇಷಗಳಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ ಎನ್ನುತ್ತಾರೆ. ಸೋಮವಾರದ 7.8 ತೀವ್ರತೆಯ ದುರಂತದ ಸಾವಿನ ಸಂಖ್ಯೆ ಸುಮಾರು 21,000ಕ್ಕೆ ಏರಿತು, 2011ರಲ್ಲಿ ಜಪಾನ್‌ನ ಫುಕುಶಿಮಾದಲ್ಲಿ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 18,400ಕ್ಕೂ ಹೆಚ್ಚಾಗಿದ್ದವು. ಇದು ಸುನಾಮಿಗಿಂತಲೂ ತೀವ್ರವಾಗಿದೆ. ಟರ್ಕಿಯ ರಾಜಧಾನಿ ಇಸ್ತಾನ್ ಬಳಿ ಸುಮಾರು 18,000 ಜನರು 1999ರಲ್ಲಿ ಮೃತಪಟ್ಟಿದ್ದರು.

ಇತ್ತೀಚಿನ ವರದಿಯಂತೆ ಟರ್ಕಿಯಲ್ಲಿ 17,600 ಕ್ಕೂ ಹೆಚ್ಚು ಜನರು ಮತ್ತು ಅಂತರ್ಯುದ್ಧ ಪೀಡಿತ ಸಿರಿಯಾದಲ್ಲಿ 3,300 ಕ್ಕೂ ಹೆಚ್ಚು ಜನರು ಮೃತಪಟ್ಟು ಸಾವಿರಾರು ಮಂದಿ ಕೂಡ ಗಾಯಗೊಂಡಿದ್ದಾರೆ.

3ನೇ ವರ್ಷದ ಸವಿನೆನಪು



ಶ್ರೀ ಮರಿಗೌಡರು

ದುಃಖತಪ್ತರು: ಹೆಂಡತಿ, ಮಕ್ಕಳು ಮತ್ತು ಕುಟುಂಬವರ್ಗದವರು.
ಮರಟಿಕ್ಯಾತನಹಳ್ಳಿ, ಜಯಪುರ ಹೋ॥, ಮೈಸೂರು ತಾ॥

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಕಕ್ಷಿದಾರರು ಅದರ ಮಾಲೀಕರಾದ ಮಂಡ್ಯ, ಅಶೋಕ ನಗರ, ಕಾವೇರಿ ನರ್ಸಿಂಗ್ ಹೋಂ ಹತ್ತಿರ, 1ನೇ ಕ್ರಾಸ್, 3ನೇ ಮೇನ್, ಮನೆ ನಂ. 1151ರಲ್ಲಿ ವಾಸವಾಗಿರುವ ಡಾ॥ ಹೆಚ್. ಕೃಷ್ಣ ರವರ ಧರ್ಮಪತ್ನಿ ಡಾ. ಪಾವನ ಕೃಷ್ಣ (Aadhaar No. : 4035 9493 0653) ಮತ್ತು ಲೇಟ್ ಹೊನ್ನೇಗೌಡರ ಮಗನಾದ ಡಾ॥ ಹೆಚ್. ಕೃಷ್ಣ (Aadhaar No : 4396 5377 2714) ರವರೊಂದಿಗೆ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಳ್ಳಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಲ್ಲದೆ ಬೇರೆ ಯಾರಿಗಾದರೂ, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ **ಏಳು (7) ದಿನಗಳ** ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಜಂಟಿ ಅಭಿವೃದ್ಧಿ ಕರಾರನ್ನು ನೋಂದಣಿ ಮಾಡಿಕೊಳ್ಳುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಕೃಷ್ಣರಾಜ ಬೌಲಿವಾರ್ಡ್ ರಸ್ತೆ, ಮನೆ ನಂ. 1026, ಹೊಸ ನಂ. CH-2, ವಿಸ್ತೀರ್ಣ ಪೂರ್ವ ಪಶ್ಚಿಮ, ಉತ್ತರದ ಕಡೆ 167.00 ಅಡಿ, ದಕ್ಷಿಣದ ಕಡೆ 175.00 ಅಡಿ, ದಕ್ಷಿಣೋತ್ತರ ಪೂರ್ವದ ಕಡೆ 195.60 ಅಡಿ, ಪಶ್ಚಿಮದ ಕಡೆ 194.00 ಅಡಿಗಳ ಸ್ವತ್ತು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ :

ಪೂರ್ವಕ್ಕೆ : ಶ್ರೀ ಮೋಹನ್ ರವರಿಗೆ ಸೇರಿದ ಸ್ವತ್ತು ಮತ್ತು ನಿಸರ್ಗ ಅಪಾರ್ಟ್‌ಮೆಂಟ್
ಪಶ್ಚಿಮಕ್ಕೆ : ಕೃಷ್ಣರಾಜ ಬೌಲಿವಾರ್ಡ್ ರಸ್ತೆ,
ಉತ್ತರಕ್ಕೆ : ಜಯಲಕ್ಷ್ಮಿ ರಸ್ತೆ ಮತ್ತು
ದಕ್ಷಿಣಕ್ಕೆ : ಕರ್ನರ್‌ವೆನ್ಸಿ.

ಕೆ.ಎನ್. ಮಹಾದೇವಸ್ವಾಮಿ, ಬಿ.ಎಸ್.ಸಿ., ಎಲ್.ಎಲ್.ಬಿ.,
ವಕೀಲರು ಮತ್ತು ನೋಟರಿ,
ನಂ.725 727 , ರೂಂ ನಂ.ಎಫ್-1 ಮತ್ತು 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು-570 004. Mob No. : 94482-22522, Office No. : 0821-4287998.

ದಿನಾಂಕ : 11-2-2023

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಹಾಸನ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ.

ಕಛೇರಿ ದೂರವಾಣಿ: 08176-252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:43/2022-23
ದಿನಾಂಕ: 08.02.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2022-23ನೇ ಸಾಲಿನ 5054 ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ-ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ 1) ಅರಸೀಕೆರೆ ತಾ: ದಾಸೇನಹಳ್ಳಿ, ಜಿ.ಮಂಗಳಾಪುರ, ಹಲಗೇನಹಳ್ಳಿ ಮತ್ತು ಸಿದ್ದಾಪುರ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3783) ಟೆಂಡರ್ ಮೊತ್ತ ರೂ 30.14 ಲಕ್ಷಗಳಿಗೆ (2) ಅರಸೀಕೆರೆ ತಾ: ಹುರಿಗಿಲವಾಡಿ, ಚಿಕ್ಕಗಂಡಸಿ ಮತ್ತು ಹೊನ್ನೇನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3784) ಟೆಂಡರ್ ಮೊತ್ತ ರೂ 43.89 ಲಕ್ಷಗಳಿಗೆ (3)ಅರಸೀಕೆರೆ ತಾ: ಕೋರನಹಳ್ಳಿ, ಸುಳ್ಳದೀಮನಹಳ್ಳಿ, ಬಾಣಾವರ ಮತ್ತು ಕಾಚೀಘಟ್ಟ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3785) ಟೆಂಡರ್ ಮೊತ್ತ ರೂ 39.16 ಲಕ್ಷಗಳಿಗೆ (4) ಅರಸೀಕೆರೆ ತಾ: ಮಲ್ಲೇನಹಳ್ಳಿ, ಹೆಗ್ಗಟ್ಟ, ಗುಂಡ್ಯಾನಹಳ್ಳಿ ಮತ್ತು ಬಾಗೂರನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3786) ಟೆಂಡರ್ ಮೊತ್ತ ರೂ 44.34 ಲಕ್ಷಗಳಿಗೆ (5) ಅರಸೀಕೆರೆ ತಾ: ಕಮ್ಮರಘಟ್ಟ, ನೀರಗುಂದ, ಕಡೇಹಳ್ಳಿ, ರಂಗಾಪುರ, ರಂಗೇನಹಳ್ಳಿ ಮತ್ತು ಜೇನುಕಲ್ಲು ಸಿದ್ದಾಪುರ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3787) ಟೆಂಡರ್ ಮೊತ್ತ ರೂ 45.44 ಲಕ್ಷಗಳಿಗೆ (6) ಅರಸೀಕೆರೆ ತಾ: ತಳಲೂರು, ರುದ್ರನಹಳ್ಳಿ, ವಿಠಲಪುರ, ಗೊಲ್ಲರಹಟ್ಟಿ ಹಾಗು ಕೆರೆಕೋಡಿಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3789) ಟೆಂಡರ್ ಮೊತ್ತ ರೂ 44.87 ಲಕ್ಷಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಸಾಮಾಗ್ರಿಗಳನ್ನು ಪೂರೈಸಲು ನೊಂದಣೀಯಾಗಿರುವ ಮಾರಟದಾರರಿಂದ & ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರುಗಳು ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ದಿನಾಂಕ: 10.02.2023ರಿಂದ ದಿನಾಂಕ: 17.02.2023ರ ಸಂಜೆ 5.00ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು www.eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 17.02.2023ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ: 16.02.2023ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 20.02.2023ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ-ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1065/2022-23